ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 10 ಮಂಗಳವಾರ 2023

ಸಂಪುಟ: 43 | ಸಂಚಿಕೆ: 264 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಚಾಮುಂಡಿಬೆಟ್ಟದ ದೇವಿಕೆರೆ ಪುನರ್‌ಜೀವನಗೊಳಿಸುವ ಕಾರ್ಯ ಆರಂಭ

- ಸಣ್ಣ ನೀರಾವರಿ ಇಲಾಖೆಯಿಂದ 7.5 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ
- ಕೆರೆಯ ನೀರು ಸಂಪೂರ್ಣ ಹೊರ ಹಾಕಿ, ಹೂಳೆತ್ತುವ ಕಾರ್ಯ ಪ್ರಾರಂಭ
- ದೇವಿ ಸನ್ನಿಧಿಯ ಹಿನ್ನೆಲೆಯಲ್ಲಿ ವಿಶೇಷ ವಿನ್ಯಾಸದಲ್ಲಿ ಅಭಿವೃದ್ಧಿಗೆ ನೀಲನಕ್ಷೆ
- ದೇವಿಕೆರೆಗೆ ಆಧುನಿಕ ಸ್ಪರ್ಶ ನೀಡುವುದಕ್ಕೆ ಪರಿಸರವಾದಿಗಳ ಆಕ್ಷೇಪ



ದೇವಿಕೆರೆ ಅಭಿವೃದ್ಧಿಯ ನೀಲನಕ್ಷೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜ.9– ಚಾಮುಂಡಿಬೆಟ್ಟದಲ್ಲಿ ಧಾರ್ಮಿಕ ಸನ್ನಿಧಿಯ ಮಹತ್ವದ ಕುರುಹಾಗಿರುವ ದೇವಿಕೆರೆಗೆ ಹೊಸ ರೂಪ ನೀಡಲು 7.5 ಕೋಟಿ ರೂ. ವೆಚ್ಚದಲ್ಲಿ ಸಣ್ಣ ನೀರಾವರಿ ಇಲಾಖೆ ಅಭಿವೃದ್ಧಿ ಕಾರ್ಯ ಆರಂಭಿಸಿದೆ.

ನವರಾತ್ರಿ ಬಳಿಕ ನಡೆಯುವ ತೆಪ್ಪೋತ್ಸವ ಸೇರಿದಂತೆ ಹಲವು ಸಂದರ್ಭಗಳಲ್ಲಿ ಚಾಮುಂಡೇಶ್ವರಿ ದೇವಿಯ ಪೂಜಾ ಕಾರ್ಯದಲ್ಲಿ ದೇವಿಕೆರೆಗೆ ಮಹತ್ವದ ಸ್ಥಾನವಿದೆ. ದೇವಿಕೆರೆಯಲ್ಲಿನ ನೀರನ್ನು ಬೆಟ್ಟದ ದೇವಾಲಯಕ್ಕೆ ತಂದು ಪೂಜಾಕಾರ್ಯದಲ್ಲಿ ಬಳಸುವ ಸಂಪ್ರದಾಯವಿದ್ದು, ಕೆಲ ವರ್ಷಗಳಿಂದ ಚಾಮುಂಡಿಬೆಟ್ಟದ ವಿವಿಧ ಬೀದಿಗಳಿಂದ ಕೊಳಚೆ ನೀರು ಇಳಿಜಾರಿನ ಪ್ರದೇಶದಲ್ಲಿ ಹರಿದು ದೇವಿಕೆರೆ ಸೇರುತ್ತಿತ್ತು ಎನ್ನಲಾಗಿದೆ. ಜೊತೆಗೆ ಕಳೆದ 6–7 ದಶಕದಿಂದ ದೇವಿಕೆರೆಯಲ್ಲಿ ತುಂಬಿಕೊಂಡಿದ್ದ ಹೂಳು ಹಾಗೂ ಕೊಳಚೆ ನೀರಿನಿಂದ ಕೆರೆಯ ತಳ ಸೇರಿದ್ದ ಪರಿಸರಕ್ಕೆ ಮಾರಕವಾದ ತ್ಯಾಜ್ಯವನ್ನು ಇದೀಗ ಹೂಳಿನೊಂದಿಗೆ ಮೇಲೆತ್ತಲಾಗುತ್ತಿದೆ. ಅಲ್ಲದೆ, ಕೆರೆಯ ಹಲವು ಭಾಗದಲ್ಲಿ ಕುಸಿದಿದ್ದ ಮೆಟ್ಟಿಲುಗಳನ್ನು ಕರಾರುವಕ್ಕಾಗಿ ಜೋಡಣೆ ▶ 6ನೇ ಪುಟಕ್ಕೆ



ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ಹೂಳೆತ್ತುವ ಕಾಮಗಾರಿ ಭರದಿಂದ ಸಾಗಿದೆ

ಡ್ರೋಣ್ ಸರ್ವೆ ಮೂಲಕ ಭೂ ವ್ಯಾಜ್ಯಗಳಿಗೆ ತಿಲಾಂಜಲಿ

ಜನರಿಗೆ ನಿಖರ ಭೂ ದಾಖಲೆ

ಕಂದಾಯ ಇಲಾಖೆಯಿಂದ ಮಹತ್ವದ ನಿರ್ಧಾರ

ವರ್ಷದಲ್ಲಿ ಜನತೆಗೆ ಡಿಜಿಟಲ್ ಭೂ ನಕ್ಷೆ ಕಲ್ಪಿಸುವ ಉದ್ದೇಶ ಸಫಲ

ಪತ್ರಿಕಾಗೋಷ್ಠಿಯಲ್ಲಿ ಕಂದಾಯ ಸಚಿವ ಅಶೋಕ್ ವಿವರಣೆ



ಬೆಂಗಳೂರು, ಜ.9(ಕೆಎಂಶಿ)– ರಾಜ್ಯದಲ್ಲಿ ಭೂ ವ್ಯಾಜ್ಯಗಳಿಗೆ ತಿಲಾಂಜಲಿ ಹಾಕುವ ಹಾಗೂ ಭೂ ಮಾಲೀಕರಿಗೆ ಸಮರ್ಪಕ ದಾಖಲೆ ಒದಗಿಸುವ ಉದ್ದೇಶದಿಂದ ಡ್ರೋಣ್ ಕ್ಯಾಮೆರಾ ಮೂಲಕ ಸರ್ವೆ ನಡೆಸಿ ನಕ್ಷೆ ಸಿದ್ಧಪಡಿಸಲು ಸರ್ಕಾರ ಮುಂದಾಗಿದೆ.

ಇನ್ನೊಂದು ವರ್ಷದಲ್ಲಿ ಸರ್ವೆ ಅಂತಿಮಗೊಳಿಸಿ ಡಿಜಿಟಲ್ ವ್ಯವಸ್ಥೆ ಮೂಲಕ ಸಾರ್ವಜನಿಕರಿಗೆ ಭೂ ನಕ್ಷೆ ಒದಗಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ರೀತಿಯ ಸರ್ವೆ ಕಾರ್ಯವು ಖಾಸಗಿ ಮತ್ತು ಸರ್ಕಾರಿ ಆಸ್ತಿಗಳೆರಡಕ್ಕೂ ಮಾಡಲಾಗುವುದು. ಆ ಮೂಲಕ ಮಾಲೀಕರಿಗೆ ಸುಲಭವಾಗಿ ನಕಾಶೆಗಳು ದೊರೆಯುವಂತೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ ಮತ್ತು ಭೂ ವ್ಯಾಜ್ಯಗಳನ್ನು ಮುಕ್ತಗೊಳಿಸುವುದರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಕನಸು ನನಸು ಮಾಡಲು ಸರ್ಕಾರ ಈ ಕಾರ್ಯಕ್ಕೆ ಚಾಲನೆ ನೀಡಿದೆ.

ಈಗಾಗಲೇ ರಾಮನಗರ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಡ್ರೋಣ್ ಮೂಲಕ ಪ್ರಾಯೋಗಿಕ ಸರ್ವೆ ಕಾರ್ಯ ಆರಂಭಗೊಂಡಿದ್ದು, ಜಮೀನುಗಳ ನಕ್ಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಇಡೀ ರಾಜ್ಯಾದ್ಯಂತ ಈ ರೀತಿಯ ಸರ್ವೆ ನಡೆಸಿ, ನಕ್ಷೆಗಳನ್ನು ಸಿದ್ಧಪಡಿಸಲು ಟೆಂಡರ್ ಕರೆಯಲಾಗಿದೆ. ಇದಕ್ಕಾಗಿ ಸರ್ಕಾರ 258 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ತಿಳಿಸಿದ್ದಾರೆ.

ಪ್ರತಿ ಜಿಲ್ಲೆಗೂ ಪ್ರತ್ಯೇಕ ಟೆಂಡರ್ ಕರೆದು ಸರ್ವೆ ಮತ್ತು ನಕ್ಷೆ ಸಿದ್ಧಪಡಿಸಿ, ದಾಖಲೆಗಳನ್ನು ಕ್ರೋಢೀಕರಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರ ಉದ್ದೇಶದಂತೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ ರೈತರು ಮತ್ತು ಭೂ ಒಡೆಯರಿಗೆ ▶ 8ನೇ ಪುಟಕ್ಕೆ



ಜನವರಿಯಲ್ಲೇ ರಾಜ್ಯದಲ್ಲಿ ಮೂರು ದಿನ ಪ್ರಧಾನಿ ಮೋದಿ ಪ್ರವಾಸ

ನಾನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ 'ಚುನಾವಣಾ ಪೂರ್ವ' ಭಾಷಣ



ಬೆಂಗಳೂರು, ಜ.9(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆ ಸಮೀಪವಾಗುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ ತಿಂಗಳಲ್ಲಿ ಮೂರು ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಮೋದಿ ಅವರ ವರ್ಚಸ್ಸನ್ನೇ ನಂಬಿರುವ ರಾಜ್ಯ ಬಿಜೆಪಿ ನಾಯಕರು ಪ್ರಧಾನಿಯವರನ್ನು ಸರ್ಕಾರಿ ಕಾರ್ಯಕ್ರಮದ ನೆಪದಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವ ವ್ಯವಸ್ಥೆ ಮಾಡಿದ್ದಾರೆ.


ರಾಷ್ಟ್ರೀಯ ಯುವಜನ ಸಮಾವೇಶದಲ್ಲಿ ಪಾಲ್ಗೊಳ್ಳಲು ಜನವರಿ 12ರಂದು ಹುಬ್ಬಳ್ಳಿ–ಧಾರವಾಡಕ್ಕೆ ಆಗಮಿಸುವ ಪ್ರಧಾನಿಯವರು ಜನವರಿ 19 ರಂದು ಕಲಬುರಗಿಯಲ್ಲಿ ಲಂಬಾಣಿ ಸಮಾಜಕ್ಕೆ ಹಕ್ಕುಪತ್ರ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದೇ ಬಾಗಲಕೋಟೆಯಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಚಾಲನೆ ನೀಡಲಿದ್ದಾರೆ. ▶ 8ನೇ ಪುಟಕ್ಕೆ

ಕೋಲಾರದಿಂದ ಸ್ಪರ್ಧೆ: ಸಿದ್ದರಾಮಯ್ಯ ಘೋಷಣೆ

ಆದರೆ ಹೈಕಮಾಂಡ್ ಅನುಮೋದನೆ ಬೇಕು

ಕೋಲಾರ, ಜ. 9–ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕೋಲಾರದಿಂದ ಸ್ಪರ್ಧಿಸಲು ತಾವು ತೀರ್ಮಾನಿಸಿರುವುದಾಗಿ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಘೋಷಿಸಿದರು.

ಕೋಲಾರದಲ್ಲಿ ಇಂದು ಏರ್ಪಡಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾರಂಭದಲ್ಲಿ ಭಾರೀ ಕರಘೋಷದ ನಡುವೆ ತಾವು ಕೋಲಾರದಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ ಸಿದ್ದರಾಮಯ್ಯ, ಆದರೆ ತಮ್ಮ ಸ್ಪರ್ಧೆಗೆ ಹೈಕಮಾಂಡ್ ಅನುಮೋದನೆ ಬೇಕಾಗುತ್ತದೆ ಹೇಳಿದರು. ನಾನೇ ಅಭ್ಯರ್ಥಿ ಎಂದು ನಾನೇ ಘೋಷಿಸಿಕೊಳ್ಳಲು ಸಾಧ್ಯವಿಲ್ಲ. ಪಕ್ಷದಲ್ಲಿ ಒಂದು ನಿಯಮವಿದೆ. ಆ ನಿಯಮದಂತೆಯೇ ಅಭ್ಯರ್ಥಿ ಘೋಷಣೆ ಆಗಬೇಕು. ನನಗಾಗಿ ನಿಯಮದಲ್ಲಿ ಯಾವುದೇ ಸಡಿಲಿಕೆ ಇಲ್ಲ. ಹೀಗಾಗಿ ಕೋಲಾರದಲ್ಲಿ ಸ್ಪರ್ಧಿಸಲು ನಾನು ನಿರ್ಧಾರ ಮಾಡಿದ್ದರೂ ಅದನ್ನು ಹೈಕಮಾಂಡ್ ಅನುಮೋದಿಸಬೇಕಾಗಿದೆ ಎಂದರು. ಹೈಕಮಾಂಡ್ ಅನುಮೋದನೆ ನೀಡಿ, ನಿಮ್ಮ ಆಶೀರ್ವಾದದಿಂದ ನಾನು ಇಲ್ಲಿನ ಶಾಸಕನಾದರೆ ▶ 8ನೇ ಪುಟಕ್ಕೆ



'ಸಿದ್ದು ನಿಜಕನಸುಗಳು' ಪುಸ್ತಕ ಬಿಡುಗಡೆಗೆ ತಡೆ

ಬೆಂಗಳೂರು, ಜ.9(ಕೆಎಂಶಿ)– ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ಮೂರೂ ರಾಜಕೀಯ ಪಕ್ಷಗಳು ಎದುರಾಳಿಗಳನ್ನು ಗುರಿಯಾಗಿಸಿಕೊಂಡು ದಾಳ ಉರುಳಿಸುತ್ತಿವೆ. ರಾಜ್ಯ ಬಿಜೆಪಿ ನಾಯಕರಿಗೆ ಸಿದ್ದರಾಮಯ್ಯ ಪ್ರಬಲ ವಿರೋಧಿಯಾಗಿದ್ದು, ಅವರನ್ನು ಗುರಿಯಾಗಿಸಿಕೊಂಡು 'ಸಿದ್ದು ನಿಜ ಕನಸುಗಳು' ಪುಸ್ತಕ ಬಿಡುಗಡೆ ಮಾಡಲು ಬಿಜೆಪಿ ಮುಂದಾಗಿತ್ತು. ಆದರೆ ಬಿಜೆಪಿಯ 'ಸಿದ್ದು ನಿಜ ಕನಸುಗಳು' ಪುಸ್ತಕ ಬಿಡುಗಡೆಗೆ ಬೆಂಗಳೂರಿನ 60ನೇ ಸಿಸಿಹೆಚ್ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ. ಹಾಗೇ ಸಚಿವ ಡಾ.ಅಶ್ವತ್ಥ ನಾರಾಯಣ ಮತ್ತಿತರರಿಗೆ ಕೋರ್ಟ್ ನೋಟಿಸ್ ನೀಡಿದೆ. ಪುಸ್ತಕ ಬಿಡುಗಡೆಗೆ ತಡೆ ಕೋರಿ ಸಿದ್ದರಾಮಯ್ಯ ಪುತ್ರ, ವರುಣಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅರ್ಜಿ ಸಲ್ಲಿಸಿದ್ದರು. ತಂದೆಯ ವಿರುದ್ಧ ಮಾನಹಾನಿಕರ ವಿಷಯಗಳು ಪುಸ್ತಕದಲ್ಲಿವೆ. ಪುಸ್ತಕ ಬಿಡುಗಡೆ ಮಾಡಿದರೆ ತಂದೆಯ ಘನತೆಗೆ ಧಕ್ಕೆಯಾಗುತ್ತದೆ. ಅದರಲ್ಲಿ ಸಿದ್ದರಾಮಯ್ಯನವರ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ವಿಷಯಗಳಿವೆ. ಹೀಗಾಗಿ ಇದಕ್ಕೆ ತಡೆಯಾಜ್ಞೆ ನೀಡುವಂತೆ ಡಾ.ಯತೀಂದ್ರ ಸಿದ್ದರಾಮಯ್ಯ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಮೈಸೂರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಹಂಚ್ಯಾ ಸಾತಗಳ್ಳಿಯಲ್ಲಿ ಭೂಮಿ


ಬಹುಮಹಡಿ ವಾಹನ ನಿಲ್ದಾಣ ಸಂಕೀರ್ಣ ನಿರ್ಮಾಣಕ್ಕೆ ಪಾಲಿಕೆಗೆ ಭೂಮಿ ಮಂಜೂರು

- ಮುಡಾ ಸಭೆಯಲ್ಲಿ ಹಲವು ಮಹತ್ವದ ನಿರ್ಣಯ
- ಸುದ್ದಿಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಮಾಹಿತಿ

ಮೈಸೂರು,ಜ.9(ಪಿಎಂ)–ನಗರದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಬಹುಮಹಡಿ ವಾಹನ ನಿಲ್ದಾಣ ಕಟ್ಟಡ (ಮಲ್ಟಿ ಲೆವೆಲ್ ವೆಹಿಕಲ್ ಪಾರ್ಕಿಂಗ್ ಕಾಂಪ್ಲೆಕ್ಸ್) ನಿರ್ಮಿಸಲು ಪಾಲಿಕೆಗೆ ಭೂಮಿ ಮಂಜೂರು, ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಭೂಮಿ ನಿಗದಿ, ಸಾವಿರ ಎಕರೆಯಲ್ಲಿ ನಿವೇಶನಗಳ ನಿರ್ಮಾಣ ಯೋಜನೆಗೆ ಕ್ರಮ ವಹಿಸುವುದೂ ಸೇರಿದಂತೆ ನಗರದ ಅಭಿವೃದ್ಧಿಗೆ ಪೂರಕವಾಗಿ ಹಲವು ಮಹತ್ವದ ನಿರ್ಣಯಗಳನ್ನು ಇತ್ತೀಚೆಗೆ ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸಭೆಯಲ್ಲಿ ಕೈಗೊಳ್ಳಲಾಗಿದೆ.

ಮುಡಾ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಜ.7ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ನಗರದ ಅಭಿವೃದ್ಧಿಗೆ ಪೂರಕವಾಗಿ ಹಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಮೈಸೂರು ಮಹಾನಗರ ಪಾಲಿಕೆಗೆ ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಮೈಸೂರು ನಗರದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಮೈಸೂರಿನ ದಕ್ಷಿಣ ಭಾಗದಿಂದ ಆಗಮಿಸುವ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಪಾಲಿಕೆ ವತಿಯಿಂದ ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕೆ ಮೈಸೂರು ಕಸಬಾ ಗ್ರಾಮದ ಸರ್ವೆ ನಂ.69ರ ಬ್ಲಾಕ್ ನಂ.2ರಲ್ಲಿ 1 ಎಕರೆ 20 ಗುಂಟೆ ಭೂಮಿ ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಸದರಿ ಭೂಮಿಯು ನಂಜನಗೂಡು ರಸ್ತೆಯ ಶಕ್ತಿಧಾಮದ ಎದುರಲ್ಲಿದೆ. ಅಲ್ಲದೆ, ಮೈಸೂರು ಮಹಾನಗರ ▶ 6ನೇ ಪುಟಕ್ಕೆ



ಮೈಸೂರು ಮುಡಾ ಸಭಾಂಗಣದಲ್ಲಿ ಸೋಮವಾರ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಮತ್ತು ಮೇಯರ್ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರೈತರ ಸಹಭಾಗಿತ್ವದಡಿ 50:50 ಅನುಪಾತದಲ್ಲಿ ಬಡಾವಣೆ ನಿರ್ಮಾಣ

ಮೈಸೂರು,ಜ.9(ಪಿಎಂ)–ತಾಲೂಕಿನ ದಾರಿಪುರ ಗ್ರಾಮ ಹಾಗೂ ಬೊಮ್ಮೇನಹಳ್ಳಿಯಲ್ಲಿ ಒಟ್ಟು ಸಾವಿರ ಎಕರೆ ಭೂಮಿಯಲ್ಲಿ ರೈತರ ಸಹಭಾಗಿತ್ವದಡಿ 50:50 ಅನುಪಾತದಲ್ಲಿ ಬಡಾವಣೆಗಳನ್ನು ನಿರ್ಮಿಸಲು ನಿರ್ಣಯಿಸಲಾಗಿದೆ ಎಂದು ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು. ಈಗಾಗಲೇ ಇದಕ್ಕೆ 25 ಮಂದಿ ರೈತರು ಒಪ್ಪಿಗೆ ನೀಡಿದ್ದಾರೆ. 100 ಎಕರೆ ಭೂಮಿ ಸ್ವಾಧೀನಕ್ಕೆ ಸಿಗುತ್ತಿದ್ದಂತೆ ಬಡಾವಣೆ ನಿರ್ಮಾಣ ಕಾಮಗಾರಿ ಆರಂಭಗೊಳ್ಳಲಿದೆ. ಇದರಿಂದ ವಿವಿಧ ವಿಸ್ತೀರ್ಣದ ಕನಿಷ್ಠ 15 ಸಾವಿರ ನಿವೇಶನಗಳನ್ನು ನಿರ್ಮಿಸಲು ಸಾಧ್ಯವಾಗಲಿದೆ. ರೈತರಿಗೆ 10 ಲಕ್ಷ ಪ್ರೋತ್ಸಾಹ ಧನ ಕೊಡುತ್ತೇವೆ. ಅದನ್ನು ಅವರು ಹಿಂತಿರುಗಿಸಬೇಕಾಗುತ್ತದೆ. ಅಲ್ಲದೆ, ಗುಂಪು ಮನೆ ವಸತಿ ಯೋಜನೆ ಸಂಬಂಧ ವಿಜಯನಗರ 4ನೇ ಹಂತದಲ್ಲಿ 560 ಮನೆಗಳು ಮತ್ತು ದಟ್ಟಗಳ್ಳಿಯಲ್ಲಿ 392 ಮನೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಶೀಘ್ರದಲ್ಲಿ ಈ ಯೋಜನೆಗೆ ಸರ್ಕಾರದ ಅನುಮೋದನೆ ದೊರೆಯಲಿದೆ ಎಂದು ಹೇಳಿದರು.

ರಿಂಗ್ ರಸ್ತೆಯಲ್ಲಿ ಸೇತುವೆಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ

ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ರಿಂಗ್ ರಸ್ತೆಯಲ್ಲಿ ಒಂದು ಮೇಲ್ಸೇತುವೆ ಹಾಗೂ ಎರಡು ಕೆಳಸೇತುವೆ ನಿರ್ಮಿಸಲು ನಿರ್ಧರಿಸಲಾಗಿದೆ. ಮುಂದಿನ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಿ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮುಡಾ ಅಧ್ಯಕ್ಷರು ತಿಳಿಸಿದರು. ವಿಜಯನಗರದ ಹಿನಕಲ್ ಬಳಿಯ ರಿಂಗ್ ರಸ್ತೆ ಜಂಕ್ಷನ್ ಮತ್ತು ಜೆಪಿ ನಗರದ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಕೆಳಸೇತುವೆ ನಿರ್ಮಾಣ ಹಾಗೂ ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

ವ್ಯವಸ್ಥಿತ ಫುಡ್‌ಜೋನ್ ನಿರ್ಮಿಸಲು ಮುಡಾದಿಂದ ಭೂಮಿ; ಮೇಯರ್ ಶಿವಕುಮಾರ್

ಮೈಸೂರು,ಜ.9(ಪಿಎಂ)–ಮೈಸೂರು ನಗರದಲ್ಲಿ ಫುಡ್‌ಜೋನ್ ನಿಗದಿಯಾಗಿದ್ದರೂ ವ್ಯವಸ್ಥಿತ ರೀತಿಯಲ್ಲಿ ಇಲ್ಲ. ಈ ನಿಟ್ಟಿನಲ್ಲಿ ವ್ಯವಸ್ಥಿತ ಫುಡ್‌ಜೋನ್ ನಿರ್ಮಿಸಲು ಮುಡಾದಿಂದ ಅಗತ್ಯ ಭೂಮಿ ನೀಡಲು ಕೋರಿದ್ದೆವು. ಅದಕ್ಕೂ ಮುಡಾ ಅಧ್ಯಕ್ಷರು ಸ್ಪಂದಿಸಿ ಮಂಜೂರು ಮಾಡಿದ್ದಾರೆ. ನಮ್ಮ ಬಹುತೇಕ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮೇಯರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫುಡ್‌ಜೋನ್‌ಗಾಗಿ ಸೂಕ್ತ ಸ್ಥಳದಲ್ಲಿ ಅಗತ್ಯವಿರುವ ಭೂಮಿ ಗುರುತಿಸಿ ನೀಡಲು ಸಮ್ಮತಿಸಲಾಗಿದೆ 2016ರಿಂದ ಈವರೆಗೆ 48 ಬಡಾವಣೆಗಳನ್ನು ಮುಡಾದಿಂದ ಪಾಲಿಕೆಗೆ ಹಸ್ತಾಂತರ ಮಾಡಿಕೊಳ್ಳಲಾಗಿದೆ. ಅದರಲ್ಲಿ ಹಲವು ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯಗಳು ಪರಿಪೂರ್ಣವಾಗಿಲ್ಲ. ಹಾಗಾಗಿ ಅಂತಹ ಬಡಾವಣೆಗಳ ಅಭಿವೃದ್ಧಿಗೂ ಮುಡಾದಿಂದ ಗಮನ ನೀಡಬೇಕು ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು. ಉದ್ದೇಶಿತ ಮೂರು ಅಂತಸ್ತಿನ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡವನ್ನು ಕೇವಲ 100 ದಿನಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಪಾಲಿಕೆಯಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಉದ್ದೇಶಿಸಿದ್ದೆವು. ಅದಕ್ಕೂ ಸೂಕ್ತ ಸ್ಥಳದಲ್ಲಿ ನಿವೇಶನ ಕೊಡುವುದಾಗಿ ಮುಡಾದಲ್ಲಿ ತೀರ್ಮಾನವಾಗಿದೆ ಎಂದರಲ್ಲದೆ, ಮಯೂರ ಸಂಕೀರ್ಣವನ್ನು ಮಹಿಳಾ ಭವನವಾಗಿ ಪರಿವರ್ತಿಸಿ, ಮಹಿಳೆಯರ ವಾಣಿಜ್ಯ ಚಟುವಟಿಕೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಶಾಸಕ ಎಸ್.ಎ.ರಾಮದಾಸ್ ಅವರ ವಿಶೇಷ ಅನುದಾನದಲ್ಲಿ ಹಣ ಮೀಸಲಿಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೈಸೂರು ಮಿತ್ರ ಮಂಗಳವಾರ 10 ಜನವರಿ 2023



ಮೈಸೂರು ನಗರಪಾಲಿಕೆ ಕಚೇರಿಗೆ ಸೋಮವಾರ ಭೇಟಿ ನೀಡಿದ ಯುನಿಡೋ ಸಂಸ್ಥೆಯ ಸದಸ್ಯ ಪೀಟರ್ ಡೇವಿಸ್ ಮತ್ತು ತಂಡದವರೊಂದಿಗೆ ಪಾಲಿಕೆ ಆದಾಯ ಕ್ರೋಡೀಕರಣವೂ ಸೇರಿದಂತೆ ಹಲವು ವಿಷಯಗಳ ಕುರಿತು ಮೇಯರ್ ಶಿವಕುಮಾರ್ ಚರ್ಚಿಸಿದರು. ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೂಟಗಳ್ಳಿ ಮಹಾ ಶಕ್ತಿ ಕೇಂದ್ರದಿಂದ ಹೌಸಿಂಗ್ ಬೋರ್ಡ್ (45ನೇ ಬೂತ್)ನಲ್ಲಿ ಬೂತ್ ವಿಜಯ ದಿವಸ್ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ಮುಖಂಡ ಮುತ್ತುರಾಜು, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು. ಮುಖಂಡರಾದ ಗೋಪಾಲರಾವ್, ಲಾರಿ ಶ್ರೀನಿವಾಸ್, ದೇವರಾಜ್, ಗಂಗನಗೌಡ, ಗುರುಸ್ವಾಮಿ, ಕೇಂದ್ರದ ಉಸ್ತುವಾರಿ ರಾಜಕುಮಾರ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಮಂಜುಳಾ, ಮಹಾ ಶಕ್ತಿ ಕೇಂದ್ರ ಅಧ್ಯಕ್ಷೆ ಅಶ್ವಿನಿ, ಕಾರ್ಯದರ್ಶಿ ಕುಮಾರ್, ಮೋನಿಕಾ ಇನ್ನಿತರರಿದ್ದರು.

'ಸಾಂಬಶಿವ ಪ್ರಹಸನ' ನಾಟಕದಲ್ಲಿ ಸಿದ್ದರಾಮಯ್ಯ, ಡಿಕೆಶಿ ಅವಹೇಳನ ಖಂಡಿಸಿ ಮುತ್ತಿಗೆ ಉದ್ದೇಶ ಹಿನ್ನೆಲೆ

ಇಂದು ಬೆಳಗ್ಗೆ 6ರಿಂದ ಸಂಜೆ 6ವರೆಗೆ ರಂಗಾಯಣ ಸುತ್ತಮುತ್ತ ನಿಷೇಧಾಜ್ಞೆ

ಮೈಸೂರು, ಜ.9(ಎಸ್‌ಬಿಡಿ)–ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಅವಹೇಳನ ಮಾಡಿರುವುದಾಗಿ ಮಂಗಳವಾರ ಮೈಸೂರು ರಂಗಾಯಣಕ್ಕೆ ಸಹಸ್ರಾರು ಜನ ಮುತ್ತಿಗೆ ಹಾಕಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ಮಂಗಳವಾರ(ಜ.10) ಬೆಳಗ್ಗೆ 6ರಿಂದ ಸಂಜೆ 6ರವರೆಗೆ ರಂಗಾಯಣ ಹಾಗೂ ಕಲಾಮಂದಿರ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಪ್ರತಿಭಟನೆ, ಮೆರವಣಿಗೆ ಹಾಗೂ ಮುತ್ತಿಗೆ ಚಳವಳಿ ನಿಷೇಧಿಸಲಾಗಿದೆ. ಕೌಟಿಲ್ಯ ವೃತ್ತ, ವಿಎಂಡಿ ಜಂಕ್ಷನ್, ಪದ್ಮಾ ವೃತ್ತ, ಡಿಸಿ ಕಚೇರಿ ಆರ್ಚ್ ಗೇಟ್ ಹಾಗೂ ವಾಲ್ಮೀಕಿ ವೃತ್ತದಿಂದ ರಂಗಾಯಣದ ಕಡೆಗೆ ಸಾರ್ವಜನಿಕರು ಅಥವಾ ಯಾವುದೇ ಸಂಘಟನೆ ನಿಷೇಧಾಜ್ಞೆ ಉಲ್ಲಂಘಿಸಿ, ಪ್ರತಿಭಟನೆ, ಮೆರವಣಿಗೆ ನಡೆಸಲು ಪ್ರಯತ್ನಿಸಿದರೆ ಅದನ್ನು ಅಕ್ರಮ ಕೂಟವೆಂದು ಪರಿಗಣಿಸಿ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.





'ಸಾಂಬಶಿವ ಪ್ರಹಸನ' ನಾಟಕದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರನ್ನು ಅವಹೇಳನ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಕುರುಬರ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ರಂಗಾಯಣಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದು, ಇದಕ್ಕೆ ಕರ್ನಾಟಕ ರಾಜ್ಯ ಹಿಂದುಳಿದ ಜಾಗೃತಿ ವೇದಿಕೆ, ಕಾಂಗ್ರೆಸ್ ಮುಖಂಡರು ಮತ್ತಿತರರು ಸೇರಿ ಸುಮಾರು 10 ಸಾವಿರ ಮಂದಿ ಭಾಗವಹಿಸುವ ಮಾಹಿತಿ ಇದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನದ ರಂಗಾಯಣ ಸಂಸ್ಥೆಯಲ್ಲಿ ನಿರ್ದೇಶಕರು, ಉಪನಿರ್ದೇಶಕರು, ಆಡಳಿತಾಧಿಕಾರಿಗಳು, ಸಿಬ್ಬಂದಿ, ಕಲಾವಿದರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅಲ್ಲಿನ ರಂಗವೇದಿಕೆಗಳಲ್ಲಿ ನಿತ್ಯ ನೂರಾರು ಸಂಖ್ಯೆಯಲ್ಲಿ ಕಲಾವಿದರು, ವಿದ್ಯಾರ್ಥಿಗಳು ನಾಟಕದ ಪೂರ್ವಾಭ್ಯಾಸ ನಡೆಸುತ್ತಿರುತ್ತಾರೆ. ನಾಟಕ ವೀಕ್ಷಿಸಲು ನೂರಾರು ರಂಗಾಸಕ್ತರು ಆಗಮಿಸುತ್ತಾರೆ. ಹಾಗಾಗಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸುವಂತೆ ಜಯಲಕ್ಷ್ಮಿಪುರಂ ಠಾಣೆ ಇನ್‌ಸ್ಪೆಕ್ಟರ್ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಕೋರಿದ್ದಾಗಿ ತಿಳಿಸಲಾಗಿದೆ.

ಓವಲ್ ಗ್ರೌಂಡ್‌ನಿಂದ ರಂಗಾಯಣದವರೆಗೆ ಮೆರವಣಿಗೆ



ರಂಗಾಯಣದಲ್ಲಿ ನಡೆದ 'ಸಾಂಬ ಶಿವ ಪ್ರಹಸನ' ನಾಟಕದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಿರುವುದನ್ನು ಖಂಡಿಸಿ ಸ್ವಾಭಿಮಾನಿ ಹೋರಾಟ ಸಮಿತಿ ವತಿಯಿಂದ ನಾಳೆ(ಜ.10) ಬೆಳಗ್ಗೆ 10 ಗಂಟೆಗೆ ಮೈಸೂರಿನ ವಿವಿ ಓವಲ್ ಗ್ರೌಂಡ್ ಬಳಿ ಸಮಾವೇಶಗೊಂಡು ನಂತರ ಮೆರವಣಿಗೆ ಮೂಲಕ ತೆರಳಿ ರಂಗಾಯಣಕ್ಕೆ ಮುತ್ತಿಗೆ ಹಾಕಲು ತೀರ್ಮಾನಿಸಿದ್ದು, ಈ ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕರು, ಸಾಹಿತಿಗಳು, ನಿವೃತ್ತ ಅಧಿಕಾರಿಗಳು, ಕಾಂಗ್ರೆಸ್ ಮುಖಂಡರು, ವಾರ್ಡ್ ಅಧ್ಯಕ್ಷರು, ಪಾಲಿಕೆ ಹಾಲಿ ಮತ್ತು ಮಾಜಿ ಸದಸ್ಯರು, ಬ್ಲಾಕ್ ಅಧ್ಯಕ್ಷರು, ವಿವಿಧ ಘಟಕಗಳ ಅಧ್ಯಕ್ಷರು, ಕಾರ್ಯಕರ್ತರು, ವಿವಿಧ ಸಂಘಟನೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪಾಲಿಷ್ ಮಾಡಲು ಕೊಟ್ಟ ಚಿನ್ನದೊಂದಿಗೆ ಕಾರ್ಮಿಕ ಪರಾರಿ

ಮಾಲೀಕನಿಂದ ಪೊಲೀಸರಿಗೆ ದೂರು

ಮೈಸೂರು,ಜ.9–ಪಶ್ಚಿಮ ಬಂಗಾಳದ ಚಿನ್ನದ ಪಾಲಿಷ್ ಮಾಡುವ ಕಾರ್ಮಿಕ ತನ್ನ ಮಾಲೀಕನನ್ನು ವಂಚಿಸಿ 185 ಗ್ರಾಂ ತೂಕದ ಚಿನ್ನಾಭರಣ ಕಬಳಿಸಿ ಪರಾರಿಯಾಗಿದ್ದಾನೆ. ಈ ಪ್ರಕರಣ ಮೈಸೂರಿನ ಇರ್ವಿನ್ ರಸ್ತೆಯಲ್ಲಿ ತಡವಾಗಿ ವರದಿಯಾಗಿದೆ.

ಕ್ರೈಂ ಬಾಕ್ಸ್

ಚಿನ್ನದ ಆಭರಣ ಪಾಲಿಷ್ ಮತ್ತು ಕಟಿಂಗ್ ಮಾಡುವ ಎಂ.ಡಿ.ಅಬ್ಬೂಸ್ ಸಲಾಂ (37) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಪಶ್ಚಿಮ ಬಂಗಾಳದ ಐವರು ಕಾರ್ಮಿಕರನ್ನಿಟ್ಟುಕೊಂಡು ಇರ್ವಿನ್ ರಸ್ತೆಯ ಮನೆಯೊಂದರಲ್ಲಿ ಕೆಲಸ ಮಾಡಿಸುತ್ತಿದ್ದರು. ಕಾರ್ಮಿಕ ಸೈಫುದ್ದೀನ್ ಖಾನ್(39) ಎಂಬಾತ 2022ರ ಡಿ.2ರಂದು ಎಎಸ್‌ಕೆ ಜುವೆಲ್ಲರ್ಸ್‌ನಿಂದ 185 ಗ್ರಾಂ ತೂಕದ ಆರು ಚಿನ್ನದ ಬ್ರೇಸ್‌ಲೆಟ್‌ಗಳನ್ನು ಪಾಲಿಷ್ ಮಾಡಲು ತಂದಿದ್ದಾನೆ. ಈತ ಡಿಸೆಂಬರ್ 5ರಿಂದ ನಾಪತ್ತೆಯಾಗಿದ್ದು, ಪಾಲಿಷ್ ಮಾಡಲು ತಂದಿದ್ದ ಚಿನ್ನಾಭರಣವನ್ನೂ ಕೂಡ ಕೊಂಡೊಯ್ದಿದ್ದಾನೆ ಎಂದು ಜ.6ರಂದು ಅಬ್ಬೂಸ್ ಸಲಿಂ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಫ್ಲೈ ಬಸ್‌ನಲ್ಲಿ ಪ್ರಯಾಣಿಕರ 285 ಗ್ರಾಂ ಚಿನ್ನಾಭರಣ ಕಳವು

ಮೈಸೂರು,ಜ.9–ಬೆಂಗಳೂರಿನ ಕೆಂಪೇಗೌಡ ಏರ್‌ಪೋರ್ಟ್‌ನಿಂದ ಮೈಸೂರಿಗೆ ಸಂಚರಿಸುವ ಫ್ಲೈಬಸ್‌ನಲ್ಲಿ ಪ್ರಯಾಣಿಕರೊಬ್ಬರ ಬ್ಯಾಗ್ ಅನ್ನು ಕತ್ತರಿಸಿ 285 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಬೆಂಗಳೂರಿಂದ ಮೈಸೂರಿಗೆ ಬರುವಾಗ ನಡೆದ ಕೃತ್ಯ

ಮೈಸೂರಿನ ಯಾದವಗಿರಿಯಲ್ಲಿರುವ ವೈಷ್ಣವಿ ಸರೋವರ ಅಪಾರ್ಟ್‌ಮೆಂಟ್ ನಿವಾಸಿ ನಿತಿತ್ ಹುಯಿಲ್‌ಗೋಳ್(50) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಮೈಸೂರಿನ ಕುವೆಂಪುನಗರದಲ್ಲಿರುವ ಎಜಿಪಿ ಸಿಟಿ ಗ್ಯಾಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್ ಆಗಿರುವ ಇವರು, 2022 ಡಿಸೆಂಬರ್ 31ರಂದು ಕುಟುಂಬ ಸಮೇತ ಪುಣೆಗೆ ಹೋಗಿದ್ದರು. ಜ.1ರಂದು ಬೆಳಗ್ಗಿನ ಜಾವ ಪುಣೆಯಿಂದ ವಿಮಾನದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ಕೆಎಸ್‌ಆರ್‌ಟಿಸಿ ಫ್ಲೈಬಸ್‌ನಲ್ಲಿ ಮೈಸೂರಿಗೆ ಬೆಳಗ್ಗೆ 5.45ಕ್ಕೆ ತಲುಪಿದ್ದಾರೆ. ಅವರು ತಮ್ಮ ಲಗೇಜ್ ನೋಡಿದಾಗ ಖದೀಮರು ಬ್ಯಾಗ್ ಅನ್ನು ಬ್ಲೇಡ್‌ನಿಂದ ಕತ್ತರಿಸಿ, 14.25 ಲಕ್ಷ ರೂ. ಮೌಲ್ಯದ 285 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಜೀತ ಪದ್ಧತಿಯಿಂದ 21 ಮಂದಿ ಕಾರ್ಮಿಕರ ರಕ್ಷಣೆ

ಮೈಸೂರು, ಜ. 9–ಮೈಸೂರು ಜಿಲ್ಲೆಯಲ್ಲಿ ಜೀತ ಪದ್ಧತಿ ಜೀವಂತವಾಗಿರುವುದು ಬೆಳಕಿಗೆ ಬಂದಿದ್ದು, ಹೆಚ್.ಡಿ.ಕೋಟೆ ಠಾಣೆ ಸರಹದ್ದಿನಲ್ಲಿ ನಾಲ್ವರು ಕಾರ್ಮಿಕರು ಹಾಗೂ ಸರಗೂರು ಠಾಣಾ ಸರಹದ್ದಿನಲ್ಲಿ 17 ಕಾರ್ಮಿಕರನ್ನು ರಕ್ಷಿಸಿರುವ ಕಂದಾಯ ಇಲಾಖೆ ಅಧಿಕಾರಿಗಳು 21 ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಇಟ್ನಾ ಗ್ರಾಮದ ನಿಂಗರಾಜು, ಬಸವನಾಯಕ, ಭೀಮನಹಳ್ಳಿ ಗ್ರಾಮದ ಪಾಲಾಕ್ಷ ಆರಾಧ್ಯ ಮತ್ತು ಸವ್ವೆ ಗ್ರಾಮದ ಸೋಮಯ್ಯ ವಿರುದ್ಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸರಗೂರು ತಾಲೂಕು ಹೆಗ್ಗನೂರು ಗ್ರಾಮದ ಕಾಳೇಗೌಡ, ಜೆ.ಕೆ.ಮಂಜುನಾಥ್, ಬಿದರಹಳ್ಳಿ ಗ್ರಾಮದ ಕೂಸೆಗೌಡ, ಹಿರೇಹಳ್ಳಿ ಗ್ರಾಮದ ಪ್ರಾದೇಶ, ನಂದಕುಮಾರ್, ಸತೀಶ್‌ಕುಮಾರ್, ಸತೀಶ್ ಗೌಡಪ್ಪ, ವಿನೋದ್‌ಕುಮಾರ್, ಮಹದೇವಯ್ಯ, ಬಂಕವಾಡಿ ಗ್ರಾಮದ ಚಿಕ್ಕಸ್ವಾಮಪ್ಪ, ಬಾಡಗ ಗ್ರಾಮದ ಬಸವರಾಜಪ್ಪ, ಕೊತ್ತೇಗಾಲದ ದಂಡರಾಜು, ಕಲ್ಲಂಬಾಳು ಗ್ರಾಮದ ಪುಟ್ಟನಾಗಪ್ಪ, ನಂಜುಂಡಸ್ವಾಮಿ, ನಾಗಪ್ಪ ಮತ್ತು ಮುಳ್ಳೂರು ಗ್ರಾಮದ ಶಿವಮಲ್ಲಪ್ಪ ವಿರುದ್ಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಿನಲ್ಲಿದ್ದ ಲ್ಯಾಪ್‌ಟಾಪ್, ಐ ಫೋನ್ ಕಳವು

ಮೈಸೂರು, ಜ. 9– ಕಾರಿನಲ್ಲಿದ್ದ ಲ್ಯಾಪ್‌ಟಾಪ್ ಹಾಗೂ ಐ ಫೋನ್ ಕಳವು ಮಾಡಿರುವ ಘಟನೆ ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್‌ನಲ್ಲಿ ನಡೆದಿದೆ.



ಬೆಂಗಳೂರಿನ ಕೆಂಪಣ್ಣ ಲೇಔಟ್ ನಿವಾಸಿ ಪಿ.ಗೋವಿಂದರಾಜು(36) ಲ್ಯಾಪ್‌ಟಾಪ್ ಕಳೆದುಕೊಂಡವರಾಗಿದ್ದು, ಕೆಲಸದ ನಿಮಿತ್ತ ಜನವರಿ 7ರಂದು ಮೈಸೂರಿಗೆ ಬಂದಿದ್ದ ಇವರು, ಅಂದು ಮಧ್ಯಾಹ್ನ 2.45ರಲ್ಲಿ ತಮ್ಮ ಸ್ನೇಹಿತ ಪರಶುರಾಮ್ ಎಂಬುವರ ಕಾರಿನಲ್ಲಿ ಸರಸ್ವತಿಪುರಂ ಜವರೇಗೌಡ ಪಾರ್ಕ್ ಎದುರಿನಲ್ಲಿರುವ ಕುಕ್ಕರಹಳ್ಳಿ ಫಿಶ್‌ಲ್ಯಾಂಡ್‌ಗೆ ಹೋಗಿ ಊಟ ಮಾಡಿ 3.30ರ ವೇಳೆಗೆ ಹಿಂತಿರುಗಿದಾಗ ಕಾರಿನ ಬಾಗಿಲು ತೆರೆದಿತ್ತು. ಒಳಗಿದ್ದ ಲ್ಯಾಪ್‌ಟಾಪ್ ಹಾಗೂ ಐ ಫೋನ್ ಅನ್ನು ಖದೀಮರು ಕಳವು ಮಾಡಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲಿಂಗಾಂಬುದಿಪಾಳ್ಯದ ಕೆರೆ ಅಂಚಿನಲ್ಲಿ ಅಪರಿಚಿತ ಶವ ಪತ್ತೆ

ಮೈಸೂರು,ಜ.9(ಎಂಕೆ)–ಮೈಸೂರಿನ ಲಿಂಗಾಂಬುದಿಪಾಳ್ಯದ ಕೆರೆ ಅಂಚಿನಲ್ಲಿ ಅಪರಿಚಿತ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದೆ. ಕೆರೆಯ ಪಶ್ಚಿಮ ದಿಕ್ಕಿನ ಅಂಚಿನಲ್ಲಿ ಪೊದೆಗಳ ನಡುವೆ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿದೆ. ದೇಹದ ಕೆಲ ಭಾಗವನ್ನು ಜಲಚರ ಕ್ರಿಮಿಕೀಟಗಳು ತಿಂದಿದ್ದು, ಮೂಳೆಗಳು ಕಾಣುತ್ತಿವೆ. ತಿಂಗಳ ಹಿಂದೆಯೇ ಮೃತಪಟ್ಟಿರಬಹುದು ಎಂದು ಕುವೆಂಪುನಗರ ಠಾಣೆ ಪೊಲೀಸರು ತಿಳಿಸಿದ್ದಾರೆ. ವಾರಸುದಾರರು ಇದ್ದಲ್ಲಿ ದೂ.ಸಂಖ್ಯೆ.0521–2418324, ಮೊ.ನಂ. 9480802247ಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾವೈಕ್ಯತಾ ಜಾಥಾ ಮೈಸೂರಲ್ಲಿ ಸ್ವಾಗತ; ಬಹಿರಂಗ ಸಭೆ

ಇದು ಜನಪ್ರತಿನಿಧಿ ಸರ್ಕಾರವಲ್ಲ, ಹಣ ಪ್ರತಿನಿಧಿ ಸರ್ಕಾರ

ಹಿರಿಯ ಸಾಹಿತಿ ದೇವನೂರ ಮಹಾದೇವ ಟೀಕಾ ಪ್ರಹಾರ

ಮೈಸೂರು,ಜ.9(ಪಿಎಂ)– ಜನತೆಯ ಬವಣೆಗಳನ್ನು ಕೇಳಲು ಈ ಸರ್ಕಾರ ಸಿದ್ಧವಿಲ್ಲ. ಏಕೆಂದರೆ ಇದು ಜನಪ್ರತಿನಿಧಿ ಸರ್ಕಾರವಲ್ಲ. ಬದಲಿಗೆ ಇದು ಹಣ ಪ್ರತಿನಿಧಿ ಸರ್ಕಾರ ಎಂದು ದೇವನೂರ ಮಹಾದೇವ ಕಿಡಿಕಾರಿದರು.

ಜನಾಂದೋಲನಗಳ ಮಹಾ ಮೈತ್ರಿ ಕರ್ನಾಟಕ, ಸಿಟಿಜನ್ ಫಾರ್ ಡೆಮಾಕ್ರಸಿ, ಜನತಂತ್ರ ಪ್ರಯೋಗ ಮತ್ತು ಸಂಯುಕ್ತ ಹೋರಾಟ–ಕರ್ನಾಟಕದ ಸಂಯುಕ್ತಾಶ್ರಯದಲ್ಲಿ ಮಂಗಳೂರಿನಿಂದ ಬೆಂಗಳೂರು ಫ್ರೀಡಂ ಪಾರ್ಕ್‌ವರೆಗೆ ಹಮ್ಮಿಕೊಂಡಿರುವ ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆ (ಭಾವೈಕ್ಯತಾ ಜಾಥಾ) ಸೋಮವಾರ ನಗರಕ್ಕೆ ಆಗಮಿಸಿದ ವೇಳೆ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ದೊಡ್ಡ ಮಟ್ಟದಲ್ಲಿ ಹೋರಾಟ ನಡೆದರೂ ಸರ್ಕಾರ ಸ್ಪಂದಿಸಿಲ್ಲ. ಈ ಕಾಯ್ದೆಗಳನ್ನು ಹಿಂಪಡೆಯುವಂತೆ ಪ್ರತಿ ಹಳ್ಳಿಹಳ್ಳಿಯಲ್ಲಿ ಮತ ನಿರಾಕರಣೆ ಪ್ರತಿಜ್ಞೆ ಕೈಗೊಳ್ಳುವ ನಿರ್ಣಾಯಕ ಹೋರಾಟ ಅಗತ್ಯವಿದೆ. ಮೂರೇ ದಿನಗಳಲ್ಲಿ ಸಾಮಾಜಿಕವಾಗಿ ಮುಂದುವರಿದ ಮೇಲ್ವರ್ಗದವರಿಗೆ ಇಡಬ್ಲ್ಯೂಎಸ್ ಹೆಸರಿನಲ್ಲಿ ಮೀಸಲಾತಿ ಕೊಟ್ಟಂತೆ ಮೂರೇ ದಿನಗಳಲ್ಲಿ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಹಿಂಪಡೆಯದಿದ್ದರೆ ಮತ ಕೊಡುವುದಿಲ್ಲ ಎಂಬ ಪ್ರತಿಜ್ಞೆ ಕೈಗೊಳ್ಳಬೇಕು ಎಂದರು. ನಮ್ಮ ಕೈಯಲ್ಲಿರುವ ಮತದಾನದ ಅಸ್ತ್ರವನ್ನು ಬಳಸುವ ಎಚ್ಚರಿಕೆ ನೀಡಬೇಕು. ನಮ್ಮ ಮತವನ್ನು ನಿಮಗೆ ಕೊಡುವುದಿಲ್ಲ ಎಂದು ಹಳ್ಳಿ ಹಳ್ಳಿಯಲ್ಲಿ ಪ್ರತಿಜ್ಞೆ ಮಾಡಿದರೆ 3 ದಿನಗಳಲ್ಲೇ ಈ ಸರ್ಕಾರ ಜಗ್ಗಬಹುದು. ಈ ಕಾಯ್ದೆಗಳು ನೋಡಲು ಚೆಂದ. ಆದರೆ ಒಳಗೆ ಹುಳುಕಿದೆ, ವಿಷವಿದೆ. ಸುಧಾರಣೆ ಹೆಸರಿನಲ್ಲಿ ರೈತರನ್ನು ಸಾಯಿಸುವ ಕಾಯ್ದೆಗ ಳಿವು. ಕೃಷಿ ಉತ್ಪನ್ನಗಳಿಗೆ ದರ ಏರಿಕೆಗೆ ರೈತರು ಒತ್ತಾಯಿಸುತ್ತಿದ್ದಾರೆ. ಹೀಗಾಗಿ, ಅವರನ್ನು ಭೂಮಿಯಿಂದ ಕಿತ್ತು ಬೀದಿಗೆ ಎಸೆದು ಬಿಟ್ಟರೆ ಬೆಲೆ ಏರಿಸುವ ಅಗತ್ಯವೇ ಇಲ್ಲ ಎಂಬಂತೆ ಸರ್ಕಾರ ವರ್ತಿಸುತ್ತಿದೆ ಈ ಸರ್ಕಾರ ನಿರ್ಮಾಣ ಮಾಡುತ್ತಿಲ್ಲ, ನಿರ್ನಾಮ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮುಖಂಡರಾದ ನೇತ್ರಾವತಿ, ಅಭಿರುಚಿ ಗಣೇಶ್, ನಗರ್ಲೆ ವಿಜಯಕುಮಾರ್, ಶಿರಮಳ್ಳಿ ಸಿದ್ದಪ್ಪ, ಬೊಕ್ಕಳ್ಳಿ ನಂಜುಂಡಸ್ವಾಮಿ, ಕೆ.ವಿ.ಭಟ್, ಟಿ.ಆರ್.ಸುನಿಲ್, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಉಚಿತ ಧ್ಯಾನ, ಚಿಕಿತ್ಸಾ ಶಿಬಿರ

ಮೈಸೂರು, ಜ.9– ಮೈಸೂರು ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಬುದ್ಧ ಧ್ಯಾನಕೇಂದ್ರದಲ್ಲಿ ಉಚಿತ ಧ್ಯಾನ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ಇಲ್ಲಿ ಮನೋ ಮತ್ತು ದೈಹಿಕ ಖಾಯಿಲೆ, ಸಕ್ಕರೆ ಖಾಯಿಲೆ, ನರ ದೌರ್ಬಲ್ಯ, ನಿರುತ್ಸಾಹ, ಬೆನ್ನು ನೋವು, ಪಾರ್ಶ್ವ ವಾಯು, ಮೂಲವ್ಯಾಧಿ, ಕತ್ತು ನೋವು, ನಿದ್ರಾಹೀನತೆ, ಮಂಡಿ ನೋವು ಸೇರಿದಂತೆ ಎಲ್ಲಾ ತರಹದ ಖಾಯಿಲೆಗಳಿಗೆ ಉಚಿತ ಧ್ಯಾನ ಮತ್ತು ಚಿಕಿತ್ಸೆ ನೀಡಲಾಗುವುದು.

ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ಈ ವೇಳೆ ಸಂಜೆ 4ರಿಂದ 5 ಗಂಟೆಯವರೆಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಮೊ: 96321–21680, 97418–42697 ಅನ್ನು ಸಂಪರ್ಕಿಸಬಹುದು.

ಲಿಂಗತ್ವ ಅಲ್ಪಸಂಖ್ಯಾತರ ಸ್ವಾವಲಂಬಿ ಬದುಕಿಗೆ ಸ್ವ–ಸಹಾಯ ಸಂಘಗಳು ಸಹಕಾರಿ

ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪೂರ್ಣಿಮಾ ಅಭಿಮತ

ಮೈಸೂರು,ಜ.9(ಎಂಕೆ)–ಸ್ವ–ಸಹಾಯ ಸಂಘಗಳಂತೆ ಲಿಂಗತ್ವ ಅಲ್ಪಸಂಖ್ಯಾತರ ಸಂಘ ನಿರ್ಮಿಸಿಕೊಳ್ಳಲು ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶವಿದ್ದು, ಸ್ವಾವಲಂಬಿ ಜೀವನ ನಡೆಸಲು ಸ್ವ–ಸಹಾಯ ಸಂಘಗಳು ಸಹಾಯಕವಾಗುತ್ತವೆ. ಈ ಮೂಲಕ ಲಿಂಗತ್ವ ಅಲ್ಪಸಂಖ್ಯಾತರ ಸರ್ಕಾರದ ಸವಲತ್ತುಗಳನ್ನು ಪಡೆದು ಮುಖ್ಯವಾಹಿನಿಗೆ ಬರಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ತಿಳಿಸಿದರು.

ಮೈಸೂರು ಜಿಪಂ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಆಯೋಜಿಸಿದ್ದ ಲಿಂಗತ್ವ ಅಲ್ಪಸಂಖ್ಯಾತರಿಗೆ ಮತದಾರರ ಜಾಗೃತಿ ಸಭೆಯಲ್ಲಿ ಮಾತನಾಡಿದ ಅವರು, ಮತದಾರರ ಗುರುತಿನ ಚೀಟಿ ಪಡೆದರೆ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಹಾಗೂ ಇತರೆ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅವಕಾಶವಾಗುತ್ತದೆ ಎಂದರು.




ಮೈಸೂರು ಜಿಪಂ ಕಚೇರಿ ಸಭಾಂಗಣದಲ್ಲಿ ನಡೆದ ಲಿಂಗತ್ವ ಅಲ್ಪಸಂಖ್ಯಾತರ ಮತದಾರರ ಜಾಗೃತಿ ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಮಾತನಾಡಿದರು. ಚಿತ್ರದಲ್ಲಿ ಇಲಾಖೆ ಅಧಿಕಾರಿಗಳನ್ನು ಕಾಣಬಹುದು.

ಲಿಂಗತ್ವ ಅಲ್ಪಸಂಖ್ಯಾತರಿಗೂ ನರೇಗಾದಡಿ ಅವಕಾಶ...

"ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಪ್ರತ್ಯೇಕ ಜಾಬ್ ಕಾರ್ಡ್ ನೀಡುವ ಮೂಲಕ ನರೇಗಾ ಕಾಮಗಾರಿಯಲ್ಲಿ ಕೆಲಸ ಮಾಡಿದರೆ ಕೂಲಿ ಪಡೆಯಬಹುದು. ಕೆಲಸದ ಸ್ಥಳದಲ್ಲಿ ಯಾವುದೇ ಭೇದ–ಭಾವವಿಲ್ಲದೇ ದುಡಿಯಲು ಅವಕಾಶವಿದೆ. ತಮ್ಮ ಹತ್ತಿರದ ಗ್ರಾಪಂಗಳಿಗೆ ಭೇಟಿ ನೀಡಿ ಜಾಬ್ ಕಾರ್ಡ್ ಪಡೆದು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. **– ಡಾ.ಎಂ.ಕೃಷ್ಣರಾಜು, ಜಿಪಂ ಉಪಕಾರ್ಯದರ್ಶಿ(ಅಭಿವೃದ್ಧಿ)**

ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಈಗಾಗಲೇ ಕೆಲವರು ಮತದಾನ ಗುರುತಿನ ಚೀಟಿ ಹೊಂದಿದ್ದಾರೆ. ಪಡೆಯದೇ ಇರುವವರು ಮತದಾರರ ಚೀಟಿ ಪಡೆದು ಕಡ್ಡಾಯವಾಗಿ ಮತ ಚಲಾಯಿಸಬೇಕು. ಸ್ವ–ಸಹಾಯ ಸಂಘಗಳಂತೆ ಲಿಂಗತ್ವ ಅಲ್ಪಸಂಖ್ಯಾತರ ಸಂಘ ನಿರ್ಮಿಸಿಕೊಳ್ಳಲು ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶವಿದೆ. ಸ್ವಾವಲಂಬಿ ಜೀವನ ನಡೆಸಲು ಸ್ವ–ಸಹಾಯ ಸಂಘಗಳು ಸಹಾಯಕವಾಗುತ್ತವೆ. ಅದರಂತೆ ಲಿಂಗತ್ವ ಅಲ್ಪಸಂಖ್ಯಾತರು ಸಂಘ ನಿರ್ಮಿಸಿಕೊಳ್ಳುವ ಮೂಲಕ ಇತರೆ ಸೌಲಭ್ಯಗಳನ್ನು ಪಡೆಯುವ ಜತೆಗೆ ಆರ್ಥಿಕವಾಗಿ ಸಬಲರಾಗ ಬಹುದು ಎಂದರು. ಸಭೆಯಲ್ಲಿ ಸ್ವೀಪ್ ಸಮಿತಿಯ ಸಹಾಯಕ ಕಾರ್ಯದರ್ಶಿಗಳಾದ ಕೃಷ್ಣ, ಕೆ.ಎನ್.ಪ್ರವೀಣ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು ಸೇರಿದಂತೆ ಎಲ್ಲಾ ತಾಲೂಕಿನ ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ಮುಖ್ಯಸ್ಥರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.1.2023 ಮಂಗಳವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ,
ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ, ಶಾರದಾ ವಿಲಾಸ ಕಾಲೇಜು:** ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಚಾಮುಂಡಿ ವಲಯ ಕಬಡ್ಡಿ ಪಂದ್ಯಾವಳಿ, ಮುಖ್ಯ ಅತಿಥಿಗಳು: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಉದ್ಘಾಟನೆ: ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯೆ ಜಿ.ಗೀತಾ, ಗೌರವ ಅತಿಥಿಗಳು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್.ಚಂದ್ರಶೇಖರ್, ಅಧ್ಯಕ್ಷತೆ: ಡಾ.ಎಂ.ದೇವಿಕಾ, ಸ್ಥಳ: ಎಸ್‌ವಿಸಿ ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಕರ್ನಾಟಕ ರಾಜ್ಯ ಇಪಿಎಸ್ ನಿವೃತ್ತ ನೌಕರರ ಒಕ್ಕೂಟ:** ಮೈಸೂರು ವಿಭಾಗ ಮಟ್ಟದ ಸಮಾವೇಶ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ಪಿ.ನಿಂಗೇಗೌಡ, ಉಪಸ್ಥಿತರು: ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್ ಉಪಾಧ್ಯಕ್ಷ ವಿ.ಈಶ್ವರರಾವ್, ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಜಿ.ಮೋಹನ್‌ಕೃಷ್ಣ, ರಾಷ್ಟ್ರೀಯ ಭವಿಷ್ಯ ನಿಧಿ ಸದಸ್ಯ ಕಾಂ.ವಿ.ಕೆ.ಪದ್ಮನಾಭನ್, ಮುಖ್ಯ ಅತಿಥಿಗಳು: ಮಾಜಿ ಶಾಸಕ ವಾಸು, ಮಾಜಿ ಮೇಯರ್ ಭೈರಪ್ಪ, ಕೆ.ವಿವೇಕಾನಂದ, ಕೆ.ಟಿ.ಚೆಲುವೇಗೌಡ, ಹರೀಶ್‌ಗೌಡ, ಸಿ.ಮಹದೇಶ್, ಕೆ.ವಿ.ಶ್ರೀಧರ್, ಪ್ರೇಮ ಶಂಕರೇಗೌಡ, ಪೈ.ಶ್ರೀನಿವಾಸ್, ಎಸ್‌ಬಿಎಂ ಮಂಜು, ಎಂ. ಶಿವಣ್ಣ, ವಿಕ್ರಾಂತ್ ಪಿ.ದೇವೇಗೌಡ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.

■ **ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ :** Studies in South Indian Coins-Vol. XXX 2021 **ಪುಸ್ತಕ ಬಿಡುಗಡೆ ಸಮಾರಂಭ,** ಪುಸ್ತಕ ಬಿಡುಗಡೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಅಧ್ಯಕ್ಷರಾದ ಶ್ರೀಮತಿ ರಾಜಲಕ್ಷ್ಮಿ ಕೃಷ್ಣಮೂರ್ತಿ, ಡಾ. ರಾಜರೆಡ್ಡಿ, ಸಂಪಾದಕರಾದ ಡಾ. ಎ.ವಿ. ನರಸಿಂಹಮೂರ್ತಿ ಮತ್ತು ಡಾ. ಟಿ. ಸತ್ಯಮೂರ್ತಿ, ಸ್ಥಳ: ಮೈಸೂರು ಅಂಬಾ ವಿಲಾಸ ಅರಮನೆ ಆವರಣ, ಬೆಳಗ್ಗೆ 10.30ಕ್ಕೆ.

■ **ಮಹಾಜನ ಪದವಿಪೂರ್ವ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ನಾಗಮಲ್ಲೇಶ್, ಉಪಸ್ಥಿತರು : ಡಾ. ವಿಜಯಲಕ್ಷ್ಮಿ ಟಿ. ಮುರಳೀಧರ್, ಪ್ರೊ. ಪಿ. ಸರೋಜಮ್ಮ, ಪ್ರಾಚಾರ್ಯರಾದ ಎಸ್. ಉಮಾರಾಣಿ, ಸ್ಥಳ: ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ :** ನೂತನ ದಿನದರ್ಶಿಕೆ ಬಿಡುಗಡೆ ಸಮಾರಂಭ, ದಿನದರ್ಶಿಕೆ ಬಿಡುಗಡೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಆವರಣ, ಶಿವರಾಂಪೇಟೆ, ಬೆಳಗ್ಗೆ 11.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಭಾಷಣ ಹಾಗೂ ವೇಷಭೂಷಣ ಸ್ಪರ್ಧೆ, ಉದ್ಘಾಟನೆ : ಪತ್ರಕರ್ತ ಎಂ.ಆರ್. ಸತ್ಯನಾರಾಯಣ, ಸಾಹಿತಿ ಪ್ರೊ. ರಾಜಶೇಖರ ಜಮದಂಡಿ ಅವರಿಂದ ಜ್ಞಾನವೇ ಕ್ರಿಯೆ, ಕ್ರಿಯೆಯೇ ಜ್ಞಾನ ಕುರಿತು ಉಪನ್ಯಾಸ, ಬಹುಮಾನ ವಿತರಣೆ : ಪ್ರಾಂಶುಪಾಲ ಎ.ಆರ್. ಕಾಂತರಾಜು, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ವಿಜಯನಗರ 2ನೇ ಹಂತ, ಮಧ್ಯಾಹ್ನ 2ಕ್ಕೆ

■ **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು) :** ರಾಜ್ಯ ಮಟ್ಟದ ಸಂಚಲನ, ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವ, ಉಪಸ್ಥಿತರು : ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಗ್ಲೋಬಲ್ ಎಜುಕೇಷನ್ ಸಂಸ್ಥೆ ಅಧ್ಯಕ್ಷ ಪಿ. ಜಯಚಂದ್ರ ರಾಜು, ರಂಗಕರ್ಮಿ ಶ್ರೀಮತಿ ಇಂದಿರಾ ನಾಯರ್, ಚಲನಚಿತ್ರ ನಟ ಮನ್ವಿತ್, ಅಪೂರ್ವ ಮತ್ತು ತನಿಸ್ವರ ಅವರಿಂದ ಹಸಿರು ಹಬ್ಬಲಿ–ನೃತ್ಯ ಪ್ರದರ್ಶನ, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ಮಕ್ಕಳಿಂದ ಜಾನಪದ ಗೀತೆಗಳು, ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಮಕ್ಕಳಿಂದ ಒಗಟಿನ ರಾಣಿ ನಾಟಕ ಪ್ರದರ್ಶನ, ರಚನೆ : ಕೆ. ರಾಮಯ್ಯ, ಸಂಗೀತ : ಚಂದ್ರಶೇಖರಾಚಾರ್ ಹೆಗ್ಗೋಠಾರ್, ನಿರ್ದೇಶನ : ಶಕುಂತಲ ಹೆಗಡೆ, ಸ್ಥಳ: ಕಿರುರಂಗ ಮಂದಿರ, ಸಂಜೆ 6ರಿಂದ.

■ **ಶ್ರೀ ಅಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಅಂಡಾಳ್ ಮಂದಿರಂ ಆವರಣ, ವಿ.ವಿ.ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ.ಕಮಲಾರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ರಾಮಮಂದಿರ, ಸಂಜೆ 6.15ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ 'ಮೈಸೂರು ಸುತ್ತಲಿನ ದೇಗುಲಗಳ ಪರಿಚಯ' ಪ್ರಸ್ತುತಿ– ಡಾ.ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಅಂಬಯ್ಯನುಲಿ, ಜಿ.ಪುಷ್ಪಲತಾ ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ 6.50 ರೈತರಿಗೆ ಸಲಹೆ 7.15 ಕಾದಂಬರಿ ವಿಹಾರ– ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್. 8.30 "ಉಲಿ ಉಯ್ಯಾಲೆ" ಸರಣಿ ಪ್ರಸ್ತುತಿ–ಡಾ.ಮೈಸೂರು ಉಮೇಶ್ 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್.ವಸಂತಮಾಧವಿ ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು 10.30 ನಮ್ಮ ಆರೋಗ್ಯ– ಗರ್ಭಕಂಠದ ಕ್ಯಾನ್ಸರ್–ಲಕ್ಷಣಗಳು ಮತ್ತು ಚಿಕಿತ್ಸೆ ಭಾಗವಹಿಸುವ ತಜ್ಞರು–ಡಾ.ಗಿರೀಶ್ ಎಂ.ಎಸ್. ಮಧ್ಯಾಹ್ನ: 12.30 ದೇವರನಾಮ –ಎಂ.ರಾಘವೇಂದ್ರ, ಶಂಕರ್ ಶ್ಯಾನುಭೋಗ್ 12.45ಮಸಾಲ ಪದಾರ್ಥಗಳ ಉದ್ಯಮ–ಸಾಧ್ಯತೆ, ಸವಾಲುಗಳೂ ಕುರಿತು ಚೈತ್ರಾ ಆರ್. ಅವರೊಂದಿಗೆ ಸಂದರ್ಶನ 1.20 ಭಾವಗೀತೆಗಳು–ಡಾ.ಶಿಲ್ಪಾ ಹೆಗಡೆ 3.00 ಕೆ.ಎಸ್.ಹೇರಂಬ ಮತ್ತು ಕೆ.ಎಸ್.ಹೇಮಂತ್–ಯುಗಳ ವೇಣುವಾದನ 4.00 ಕಥಾ ಕಾಲಕ್ಷೇಪ "ಅಯೋಧ್ಯಾಕಾಂಡ" ಪ್ರಸ್ತುತಿ– ವಿದ್ವಾನ್ ಆರ್.ಗುರುರಾಜುಲು ನಾಯ್ಡು 6.50 ಕೃಷಿರಂಗ– ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಡಿ.ರಂಗನಾಥ್ ಅವರೊಡನೆ ಸಂದರ್ಶನ 9.15 ಯಕ್ಷಗಾನದ ಹಾಡುಗಳು–ಕೆ.ಜೆ.ಗಣೇಶ್ ಮತ್ತು ಸಂಗಡಿಗರು 9.30 ಬಾಂಬೆ ಜಯಶ್ರೀ–ಹಾಡುಗಾರಿಕೆ 10.00 ಗಮಕ ವ್ಯಾಖ್ಯಾನ–ವಾಚನ–ಧನ್ಯಾಪಡ್ಯಾಣಿ, ವ್ಯಾಖ್ಯಾನ– ಮುಳಿಯ ಶಂಕರ್ ಭಟ್

ಮೈಸೂರು ವಿವಿ ಸ್ವಚ್ಛತಾ, ಸಫಾಯಿ ಕಾರ್ಮಿಕರಿಂದ ಇಂದಿನಿಂದ ಧರಣಿ

ಕನಿಷ್ಠ ವೇತನ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಜ.9(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಚ್ಛತಾ ಹಾಗೂ ಸಫಾಯಿ ಕಾರ್ಮಿಕರಿಗೆ ಕನಿಷ್ಠ ವೇತನ, ಇಎಸ್‌ಐ, ಪಿಎಫ್ ಸೌಲಭ್ಯ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ಜ.11ರಂದು ಬೆಳಗ್ಗೆ 11 ಗಂಟೆಯಿಂದ ಮೈಸೂರು ವಿವಿಯ ದ್ವಾರದ ಕುವೆಂಪು ಪ್ರತಿಮೆ ಮುಂದೆ ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತಿರುವುದಾಗಿ ಎಐಯುಟಿಯುಸಿ ಕಾರ್ಯದರ್ಶಿ ಚಂದ್ರಶೇಖರ ಮೇಟಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ವಿವಿ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವ ಸ್ವಚ್ಛತಾ ಹಾಗೂ ಸಫಾಯಿ ಕಾರ್ಮಿಕರ ನಾನಾ ಬೇಡಿಕೆ ಈಡೇರಿಸುವಲ್ಲಿ ಮೈಸೂರು ವಿವಿ ನಿರ್ಲಕ್ಷ್ಯ ಧೋರಣೆ ತಾಳುತ್ತಿದೆ. ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ವಿಶ್ವ ವಿದ್ಯಾನಿಲಯ ಸ್ವಚ್ಛತಾ ಕಾರ್ಯ ನೌಕರರ ಸಂಘದ ಅಡಿಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ. ಸ್ವಚ್ಛತಾ, ಸಫಾಯಿ ಕಾರ್ಮಿಕರಿಗೆ ವೇತನವನ್ನು ಅವರ ಖಾತೆಗಳಿಗೆ ವರ್ಗಾಯಿಸಬೇಕು. ವಿವಿಯಲ್ಲಿ ಕೆಲಸ ಮಾಡುತ್ತಿರುವ ಪೌರ, ಸಫಾಯಿ ಕಾರ್ಮಿಕರಿಗೆ ಕನಿಷ್ಠ ವೇತನ, ಪಿಎಫ್, ಇಎಸ್‌ಐ ಕಲ್ಪಿಸುವುದರ ಜೊತೆಗೆ ಇತರೆ ಅಗತ್ಯ ಸುರಕ್ಷತಾ ಪರಿಕರ ನೀಡಬೇಕು. ಅಲ್ಲದೆ, ಕಾರ್ಮಿಕರಿಗೆ ಕನಿಷ್ಠ ವೇತನದ ಹಿಂಬಾಕಿ, ಮೈಸೂರು ವಿವಿಯಿಂದ ಜಪ್ತಿಯಾಗಿ ಪಿಎಫ್ ಹಣವನ್ನು ಕಾರ್ಮಿಕರ ಖಾತೆಗಳಿಗೆ ವರ್ಗಾಯಿಸಲು ಬೇಕಾದ ದಾಖಲೆ ನೀಡಬೇಕು. ಕಾಲಕಾಲಕ್ಕೆ ಪರಿಷ್ಕರಣೆಯಾಗುವ ಕನಿಷ್ಠ ವೇತನ ಹಾಗೂ ತುಟ್ಟಿಭತ್ಯೆ ಪಾವತಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಎಐಯುಟಿಯುಸಿ ಪದಾಧಿಕಾರಿಗಳಾದ ಯಶೋಧರ್, ಸುಮಾ, ಮೇರಿ, ಸತೀಶ್ ಹಾಗೂ ಮುದ್ದುಕೃಷ್ಣ ಉಪಸ್ಥಿತರಿದ್ದರು.

ಪ್ರತಿ ತಾಲೂಕಲ್ಲೂ ಆಧಾರ್ ನೋಂದಣಿ ಕೇಂದ್ರ ನಿರ್ಮಾಣ



ಮೈಸೂರು,ಜ.9–ಆಧಾರ್‌ಗೆ ಸಂಬಂಧಿತ ಪ್ರತಿಯೊಂದು ವಿಚಾರಗಳ್ನು ಜಿಲ್ಲೆಗಳಲ್ಲಿನ ಆಧಾರ್ ಕೇಂದ್ರಗಳಿಗೆ ಬಂದು ತಿದ್ದುಪಡಿ ಮಾಡಿಸುವುದು ಸಾರ್ವಜನಿಕರಿಗೆ ಸಮಸ್ಯೆ ಆಗುತ್ತದೆ. ಹೀಗಾಗಿ ಪ್ರತಿ ತಾಲೂಕಿನಲ್ಲಿಯೇ ಹೊಸ ಆಧಾರ್ ಜೋಡಣೆ, ತಿದ್ದುಪಡಿ ಮತ್ತು ಆಧಾರ್‌ಗೆ ಸಂಬಂಧಿತ ಕೇಂದ್ರಗಳನ್ನು ಸ್ಥಾಪನೆ ಮಾಡುವುದು ಉತ್ತಮ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಂದು ತಾಲೂಕಿನಲ್ಲಿ ಆಧಾರ್ ಕೇಂದ್ರಗಳನ್ನು ಸ್ಥಾಪಿಸಿ ಅದಕ್ಕೆ ಬೇಕಿರುವ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ದೂರದ ಊರುಗಳಿಂದ ಬರುವ ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಆಧಾರ್ ಕೇಂದ್ರದ ಸಿಬ್ಬಂದಿಗೆ ತರಬೇತಿಯನ್ನು ನೀಡಿ ಉತ್ತಮ ಸೇವೆ ಒದಗಿಸುವಂತೆ ತಿಳಿಸಿದರು. 10 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಆಧಾರ್‌ಗೆ ಸಂಬಂಧಿತ ನವೀಕರಣವನ್ನು ಮಾಡಿಸುವುದು ಕಡ್ಡಾಯವಾಗಿದೆ. ನಿಮ್ಮ ಆಧಾರ್‌ಗೆ ಸಂಬಂಧಿತ ಯಾವುದೇ ಸಮಸ್ಯೆಗಳಿದ್ದರೂ ನಿಮ್ಮ ಹತ್ತಿರದ ಆಧಾರ್ ಸೇವಾ ಕೇಂದ್ರಕ್ಕೆ ಬಂದು ಸರಿಪಡಿಸಿಕೊಳ್ಳುವುದು ಮತ್ತು ಸೇವೆಯನ್ನು ಪಡೆಯುವುದು ಸಾರ್ವಜನಿಕರ ಹಕ್ಕು ಎಂದು ತಿಳಿಸಿದರು.

ಆಧಾರ್‌ಗೆ ಸಂಬಂಧಿತ ಜಾಹೀರಾತನ್ನು ಪಾಲಿಕೆಗಳು ಮತ್ತು ತಾಲೂಕು ಮಟ್ಟದ ಪುರಸಭೆ, ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಚಾರಪಡಿಸಿ ಆಧಾರ್‌ಗೆ ಸಂಬಂಧಿತವಾಗಿ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸಬೇಕು, ಪ್ರತಿಯೊಬ್ಬರು ಆಧಾರ್ ಪಡೆದುಕೊಳ್ಳುವುದು ಉತ್ತಮ ಎಂದು ತಿಳಿಸಿದರು.

ಆಧಾರ್ ಕಳೆದುಕೊಂಡ ಸಾರ್ವಜನಿಕರಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಧಾರ್ ಸಂಬಂಧಿತ ಸೇವೆಗೆ ಅವಕಾಶ ಕಲ್ಪಿಸಬೇಕೆಂದು ಮೈಸೂರು ವಿಭಾಗದ ಆಧಾರ್ ಮುಖ್ಯ ಅಧಿಕಾರಿಗಳಿಗೆ ಸೂಚಿಸಿದ್ದು, ಮುಂದಿನ ದಿನಗಳಲ್ಲಿ ಆಧಾರ್ ಕಳೆದುಕೊಂಡವರಿಗೆ ಜಿಲ್ಲಾಧಿಕಾರಿಗಳ ಕಚೇರಿಯ ಆಧಾರ್ ಕೇಂದ್ರದಲ್ಲಿ ಸೇವೆಯನ್ನು ನೀಡುವುದರ ವ್ಯವಸ್ಥೆ ಮಾಡಲಾಗುವುದು ಎಂದರು. ಸಭೆಯಲ್ಲಿ ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ವಿವಿಧ ಇಲಾಖೆ ಅಧಿಕಾರಿಗಳು, ಆಧಾರ್ ಸಂಬಂಧಿತ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮುಂದಿನ ವರ್ಷದಿಂದ ಶಾಲೆಗಳಲ್ಲಿ ನೈತಿಕ ಶಿಕ್ಷಣ ಜಾರಿ



ಬೆಂಗಳೂರು: ಶಾಲಾ ಪಠ್ಯದಲ್ಲಿ ನೈತಿಕ ಶಿಕ್ಷಣ ಜಾರಿಗೆ ಸರ್ಕಾರ ಮೊದಲ ಹೆಜ್ಜೆ ಇಟ್ಟಿದೆ. ಧರ್ಮಗುರುಗಳ ನೇತೃತ್ವದಲ್ಲಿ ಸೋಮವಾರ ಮಹತ್ವದ ಸಭೆ ನಡೆದಿದ್ದು, ಧರ್ಮಾತೀತವಾಗಿ ಎಲ್ಲಾ ಗುರುಗಳು ಶಾಲಾ ಪಠ್ಯದಲ್ಲಿ ನೈತಿಕ ಶಿಕ್ಷಣ ಜಾರಿಯಾಗಬೇಕು ಎಂದು ಸಲಹೆ ನೀಡಿದ್ದಾರೆ.

ಶಾಲಾ ಪಠ್ಯದಲ್ಲಿ ನೈತಿಕ ಶಿಕ್ಷಣ ಅಳವಡಿಸುವ ಸರ್ಕಾರದ ನಿರ್ಧಾರಕ್ಕೆ ಧರ್ಮಾತೀತವಾಗಿ ಧರ್ಮಗುರುಗಳು ಸಹಮತ ವ್ಯಕ್ತಪಡಿಸಿದರು. ಶಿಕ್ಷಣ ಸಚಿವ ಬಿಸಿ ನಾಗೇಶ್ ನೇತೃತ್ವದಲ್ಲಿ ವಿಧಾನಸೌಧದಲ್ಲಿ ನಡೆದ ಮಠಾಧೀಶರು, ಧರ್ಮಗುರುಗಳು, ಶಿಕ್ಷಣ ತಜ್ಞರ ದುಂಡು ಮೇಜಿನ ಸಭೆಯಲ್ಲಿ ಶಾಲಾ ಹಂತದಲ್ಲಿ ಕಡ್ಡಾಯವಾಗಿ ನೈತಿಕ ಶಿಕ್ಷಣ ಅವಶ್ಯಕತೆ ಇದೆ ಎಂದು ಧರ್ಮ ಗುರುಗಳು ಸಲಹೆ ನೀಡಿದ್ದಾರೆ. ಅಲ್ಲದೆ ನೈತಿಕ ಶಿಕ್ಷಣದಲ್ಲಿ ಯಾವ ಯಾವ ಮೌಲ್ಯಯುತ ಅಂಶಗಳು ಸೇರಿಸಬೇಕು ಎಂದು ಸಚಿವ ನಾಗೇಶ್ ಹೇಳಿದ್ದಾರೆ.

ಸಭೆಯಲ್ಲಿ ಸುತ್ತೂರು ಶ್ರೀಗಳು, ಆದಿಚುಂಚನಗಿರಿ ಶ್ರೀಗಳು, ಸಿರಿಗೆರೆ ಶ್ರೀಗಳು, ರವಿಶಂಕರ್ ಗುರೂಜಿ, ಪೇಜಾವರ ಶ್ರೀಗಳು, ಮಾದಾರ ಚೆನ್ನಯ್ಯ ಶ್ರೀಗಳು, ರಾಘವೇಶ್ವರ ಶ್ರೀಗಳು, ಪೀಟರ್ ಮ್ಯಾಚಾರೋ, ಡಾ. ಕಸ್ತೂರಿ ರಂಗನ್, ಅಬ್ದುಲ್ ರಹೀಂ ಸೇರಿ ಹಲವು ಧರ್ಮಗಳ ಧರ್ಮಗುರುಗಳು ಭಾಗವಹಿಸಿ ಅಭಿಪ್ರಾಯ ತಿಳಿಸಿದರು. ಸುತ್ತೂರು ಶ್ರೀಗಳು ರಾಮಾಯಣ, ಮಹಾಭಾರತ ನೀತಿ ಪಾಠದ ಜೊತೆ ಮಕ್ಕಳ ಮೊಬೈಲ್ ಗೀಳಿನ ಬಗ್ಗೆ ಪ್ರಸ್ತಾಪ ಮಾಡಿದರು. ಸಿರಿಗೆರೆ ಶ್ರೀಗಳು ಸಭೆಯಲ್ಲಿ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಂಡರು. ಆದಿಚುಂಚನಗಿರಿಶ್ರೀಗಳು ಬಾಲ್ಯದಿಂದ ಮೌಲ್ಯ ಶಿಕ್ಷಣ ಸಿಗಬೇಕು ಎಂದರು. ಮುಸ್ಲಿಂ ಧರ್ಮ ಗುರುಗಳು, ಕ್ರೈಸ್ತ ಧರ್ಮಗುರುಗಳು ನೈತಿಕ ಶಿಕ್ಷಣದ ಅವಶ್ಯಕತೆ ಎಂದರು. ಸುಮಾರು 4 ಗಂಟೆಗಳ ಕಾಲ ಸಭೆ ನಡೆದಿದ್ದು, ಎಲ್ಲಾ ಧರ್ಮಗುರುಗಳ ಅಭಿಪ್ರಾಯಗಳನ್ನು ಶಿಕ್ಷಣ ಸಚಿವರು ಪಡೆದರು. ಸಭೆ ಬಳಿಕ ಮಾತನಾಡಿದ ಸಚಿವ ಬಿಸಿ ನಾಗೇಶ್, ಶ್ರೀಗಳು, ಧರ್ಮಗುರುಗಳ ಅಭಿಪ್ರಾಯ ಪಡೆಯಲಾಗಿದೆ. ನೈತಿಕ ಶಿಕ್ಷಣ ಜಾರಿ ಪ್ರಕ್ರಿಯೆಗೆ ಸಮಿತಿ ಮಾಡಲಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಹಂತದಲ್ಲಿ ನೈತಿಕ ಶಿಕ್ಷಣ ಜಾರಿ ಮಾಡುವುದಾಗಿ ತಿಳಿಸಿದರು.

ಜೆಡಿಎಸ್ ಅಧಿಕಾರಕ್ಕೆ ಬಂದರೆ ಈ ಬಾರಿಯೂ ರೈತರ ಸಾಲ ಮನ್ನಾ

ಕಲಬುರಗಿ: ಜೆಡಿಎಸ್ ಅಧಿಕಾರಕ್ಕೆ ಬಂದ್ರೆ ಈ ಬಾರಿಯೂ ಸಾವಿರಾರು ರೈತರ ಸಾಲ ಮನ್ನಾ ಮಾಡುವುದಾಗಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ.



ಜಿಲ್ಲೆಯ ಆಳಂದ ತಾಲೂಕಿನ ಖಜೂರಿ ಗ್ರಾಮದಲ್ಲಿ ಪಂಚರತ್ನ ಯಾತ್ರೆಗೆ ಚಾಲನೆ ನೀಡಿ, ಮಾತನಾಡಿದ ಅವರು, ಕೆಲವರ ಕಪಿಮುಷ್ಠಿಯಲ್ಲಿ ಖಜೂರಿ ರಾಜಕಾರಣ ಇದೆ. ಅದರಿಂದ ಖಜೂರಿ ಗ್ರಾಮವನ್ನು ಮುಕ್ತಗೊಳಿಸಬೇಕಿದೆ. ಆಳಂದ ಕ್ಷೇತ್ರ ಸೇರಿದಂತೆ ಜಿಲ್ಲೆಯಾದ್ಯಂತ ಹಲವು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ಮುಂದೆ ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಶರಣಾಗಬಾರದು ಎಂದು ಮನವಿ ಮಾಡಿದ್ದಾರೆ. ರಾಜ್ಯದ ರೈತರನ್ನು ಕಷ್ಟಕ್ಕೆ ದೂಡಲು ನಮ್ಮ ಪಕ್ಷ ಬಿಡುವುದಿಲ್ಲ. ಇಡೀ ರಾಜ್ಯ ಹಾಗೂ ರೈತರ ದಿಕ್ಕನ್ನು ಬದಲಿಸಲು ಪಂಚರತ್ನ ಯೋಜನೆಗಳನ್ನ ಜಾರಿ ಮಾಡಲಾಗಿದೆ. ನನ್ನ ಮುಖ್ಯಮಂತ್ರಿ ಅವಧಿಯಲ್ಲಿ 25 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದ್ದೇನೆ. ಆದ್ರೆ ಬಿಜೆಪಿ ಸರ್ಕಾರ ಸುಮಾರು 7 ಸಾವಿರ ಕೋಟಿ ಹಣವನ್ನು ಡೈವರ್ಟ್ ಮಾಡಿದೆ ಎಂದು ಆರೋಪಿಸಿದ್ದಾರೆ. ಇದೇ ವೇಳೆ ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬಂದಲ್ಲಿ ಇನ್ನೂ ಸಾವಿರಾರು ರೈತರ ಸಾಲಮನ್ನಾ ಮಾಡುತ್ತೇನೆ ಎಂದು ಭರವಸೆ ನೀಡಿದ್ದಾರೆ. ಪಂಚರತ್ನ ಯಾತ್ರೆ ವೇಳೆ ಆಳಂದ ಕ್ಷೇತ್ರದ ಆಕಾಂಕ್ಷಿ ಮಹೇಶ್ವರಿ ವಾಲಿ ಇನ್ನಿತರರಿದ್ದರು.

ಬ್ರಾಂಡೆಡ್ ಫುಟ್‌ವೇರ್ಸ್, ರೆಡಿಮೇಡ್ ಗಾರ್ಮೆಂಟ್ಸ್ ಮೇಲೆ ಭಾರೀ ರಿಯಾಯಿತಿ



ಮೈಸೂರು, ಜ.9– ಮೈಸೂರು ನಗರದ ಕಾಂತರಾಜ ಅರಸ್ ರಸ್ತೆಯಲ್ಲಿರುವ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಬ್ರಾಂಡೆಡ್ ಫುಟ್‌ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್, ಜಾಕೆಟ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್‌ಗಳು ಇಲ್ಲಿ ಲಭ್ಯವಿದೆ.

ಮಹಿಳೆಯರ ಬ್ರಾಂಡೆಡ್ ಕುರ್ತಿಗಳು ಲೇಡಿಸ್ ಟಾಪ್, ಜಾಕೆಟ್ಸ್, ಸ್ವೆಟರ್ಸ್, ಟ್ರಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಲಭ್ಯವಿದ್ದು, ಬ್ರಾಂಡೆಡ್ ಆಡಿದಾಸ್, ನೈಕಿ, ಪೂಮಾ, ರೋಡ್ ಸ್ಟಾರ್, ರೀಬಾಕ್, ಎಚ್‌ಆರ್ ಎಕ್ಸ್ ವಾನ್ಸ್, ಯುಸಿಬಿ, ಮಸ್ತ್ ಅಂಡ್ ಹರ್ಬರ್, ಲೊಟ್ಟೊ, ಸಹಿತ ವಿವಿಧ ಕಂಪನಿಗಳ ಉತ್ಪನ್ನಗಳು ಸಹ ಭಾರೀ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿವೆ. ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ. ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುವುದೆಂದು ಆಯೋಜಕ ಸುನೀಲ್ ತಿಳಿಸಿದ್ದಾರೆ.

ಧಾರ್ಮಿಕ ಮತಾಂತರ ಗಂಭೀರ ವಿಷಯ

ನವದೆಹಲಿ: ಧಾರ್ಮಿಕ ಮತಾಂತರ ಗಂಭೀರವಾದ ವಿಷಯ ಎಂದು ಸುಪ್ರೀಂ ಕೋರ್ಟ್ ಹೇಳಿದ್ದು, ಈ ವಿಷಯಕ್ಕೆ ರಾಜಕೀಯ ಬಣ್ಣ ನೀಡಬಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಅಕ್ರಮ ಧಾರ್ಮಿಕ ಮತಾಂತರದ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡುವ ಸಂಬಂಧದ ಅರ್ಜಿಯ ಬಗ್ಗೆ ಸುಪ್ರೀಂಕೋರ್ಟ್ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಹಾಜರಾಗಬೇಕೆಂದು ಸೂಚಿಸಿದೆ.



ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಂಆರ್ ಷಾ, ಸಿ.ಟಿ. ರವಿಕುಮಾರ್ ಅವರಿದ್ದ ಪೀಠ, ವೆಂಕಟರಮಣಿ ಅವರಿಗೆ ಹಾಜರಾಗಲು ಸೂಚಿಸಿದ್ದಷ್ಟೇ ಅಲ್ಲದೆ, ಈ ವಿಷಯದಲ್ಲಿ ಅಟಾರ್ನಿ ಜನರಲ್ ಅವರ ಸಹಾಯವನ್ನೂ ಕೋರ್ಟ್ ಕೋರಿದೆ. ಒತ್ತಾಯಪೂರ್ವಕ, ಉಡುಗೊರೆಗಳು ಮತ್ತು ವಿತ್ತೀಯ ಪ್ರಯೋಜನಗಳ ಮೂಲಕ ಬೆದರಿಕೆ, ಮೋಸಗೊಳಿಸುವ ಆಮಿಷದ ಮೂಲಕ ಮತಾಂತರ ಮಾಡುವುದನ್ನು ತಡೆಗಟ್ಟಬೇಕು ಎಂದು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್, ಆಕರ್ಷಣೆಯಿಂದ ಮತಾಂತರ ನಡೆಯುತ್ತಿದ್ದರೆ, ಅದಕ್ಕೆ ಪರಿಹಾರವಾಗಿ ಏನು ಮಾಡಬೇಕು, ಸರಿಪಡಿಸುವ ಕ್ರಮಗಳೇನು ಎಂದು ಸುಪ್ರೀಂಕೋರ್ಟ್ ಪ್ರಶ್ನಿಸಿದೆ.

ನಾಳೆ ವಿವಿಧೆಡೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು,ಜ.9–ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.11 ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ವಾರ್ಡ್ ನಂ.9ರಿಂದ 16, 28ರಿಂದ 39, 52, 53 ಪ್ರದೇಶ ವ್ಯಾಪ್ತಿಯ ಕೆಸರೆ, ರಾಜೇಂದ್ರನಗರ, ಸುಭಾಷ್ ನಗರ, ಎನ್.ಆರ್.ಮೊಹಲ್ಲಾ, ಗಾಂಧಿ ನಗರ, ಉದಯಗಿರಿ, ಯರಗನಹಳ್ಳಿ, ಸಿದ್ಧಾರ್ಥನಗರ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಸೇರಿದಂತೆ ಇತರೆ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ.

ವಿಧಾನಸೌಧದ ಆವರಣದಲ್ಲಿ ಜಗಜ್ಯೋತಿ ಬಸವಣ್ಣ, ನಾಡಪ್ರಭು ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಜ.13, ಭೂಮಿಪೂಜೆ

ಬೆಂಗಳೂರು,ಜ.9(ಕೆಎಂಶಿ)–ವಿಧಾನಸೌಧದ ಬಳಿ ಜಗಜ್ಯೋತಿ ಬಸವಣ್ಣ ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳನ್ನು ಸ್ಥಾಪಿಸುತ್ತಿದ್ದು, ಇದಕ್ಕೆ ಸಂಬಂಧಿಸಿದ ಭೂಮಿಪೂಜೆ ಜ.13ರಂದು ನಡೆಯಲಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು. ಭೂಮಿಪೂಜೆ ಕಾರ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪೇಜಾವರ ಶ್ರೀಗಳು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳು, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗೆ ಸ್ವಾಮೀಜಿ, ನಂಜಾವಧೂತ ಸ್ವಾಮಿಗಳು, ಮಾದಾರ ಚೆನ್ನಯ್ಯ ಸ್ವಾಮಿಗಳು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಈಗಾಗಲೇ ನಾನು ಮತ್ತು ಸಚಿವ ಸಿಸಿ ಪಾಟೀಲ್ ಇಬ್ಬರು ಮಹಾನ್ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸಲು ಸ್ಥಳ ಪರಿಶೀಲಿಸಿ, ಒಪ್ಪಿಗೆ ನೀಡಿದ್ದೇವೆ ಎಂದರು.

ದಾವೂದ್‌ಗೆ ನೆರವು: ಉದ್ಯಮಿ ಜೋಶಿ ಸೇರಿ ಮೂವರಿಗೆ 10 ವರ್ಷ ಜೈಲು ಶಿಕ್ಷೆ

ಮುಂಬೈ: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಸಹಚರರಿಗೆ ಪಾಕಿಸ್ತಾನದ ಕರಾಚಿಯಲ್ಲಿ ಗುಟ್ಕಾ ಉತ್ಪಾದಕ ಘಟಕ ಸ್ಥಾಪಿಸಲು ನೆರವು ನೀಡಿದ ಪ್ರಕರಣದಲ್ಲಿ ಉದ್ಯಮಿ ಜೆ.ಎಂ.ಜೋಶಿ ಮತ್ತು ಇಬ್ಬರಿಗೆ ಇಲ್ಲಿನ ವಿಶೇಷ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಜೋಶಿ, ಜಮೀರುದ್ದೀನ್ ಅನ್ಸಾರಿ, ಫಾರುಖ್ ಮನ್ಸೂರಿ ಅವರನ್ನು ನ್ಯಾಯಾಲಯ ದೋಷಿಗಳೆಂದು ಪರಿಗಣಿಸಿ ತೀರ್ಪು ನೀಡಿದೆ. ಜೋಶಿ ಮತ್ತು ಆರೋಪಿ ರಸಿಕ್‌ಲಾಲ್ ಧಾರಿವಾಲ್ ನಡುವೆ ಹಣಕಾಸು ವಿಚಾರದಲ್ಲಿ ಸಂಘರ್ಷ ಏರ್ಪಟ್ಟಿತ್ತು. ಇದನ್ನು ಸರಿಪಡಿಸಲು ಅವರು ಇಬ್ರಾಹಿಂ ನೆರವು ಕೇಳಿದ್ದರು. ಇದಕ್ಕೆ ಪ್ರತಿಯಾಗಿ ಕರಾಚಿಯಲ್ಲಿ ಗುಟ್ಕಾ ಘಟಕ ಸ್ಥಾಪನೆಗೆ ನೆರವು ನೀಡುವಂತೆ 2002ರಲ್ಲಿ ಇಬ್ರಾಹಿಂ ಬೇಡಿಕೆ ಇಟ್ಟಿದ್ದ. ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ ಧರಿವಾಲ್ ಮೃತಪಟ್ಟಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಜ.9–2022–23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆಮಾರಿ, ಪ್ರವರ್ಗ–1ರ ವಿದ್ಯಾರ್ಥಿಗಳಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಕೋರಿ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಯಿಂದ ಮನವಿ ಮಾಡಿಕೊಂಡಿರುವ ಪ್ರಯುಕ್ತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಜ.20ವರೆಗೆ ವಿಸ್ತರಿಸಿದೆ. ಮಾಹಿತಿಗೆ https://bcwd.karnataka.gov.in, ದೂ.ಸಂ: 8050770005 ಸಂಪರ್ಕಿಸಿ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:2022–23 ದಿನಾಂಕ: 09.01.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೋಕು, ಜಯಪುರ ಹೋಬಳಿ, ಕಡಕೋಳ ಗ್ರಾಮದ ಸರ್ವೆ ನಂ. 317/1ರಲ್ಲಿ 01 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಟಿ. ಶ್ಯಾಮ್ ಬಿನ್ ಎನ್ ತೇಗೋಜಿ ರಾವ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **"ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ದೊರೆಯುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



Land in Question

ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ನಕ್ಕರೆ ಅದೇ ಸ್ವರ್ಗ

ಆತ : ಐ ಲವ್ ಯು ಟೂ ಮಚ್"
ಆಕೆ : ಐ ಲವ್ ಯು ಟೂ. ಆದರೆ ವರದಕ್ಷಿಣೆ ವಿಷಯ ಎತ್ತಬಾರದು ಆಯ್ತಾ?
ಆತ : ಅಯ್ಯೋ... ವರದಕ್ಷಿಣೆ ವಿಷಯ ಏಕೆ...! ಮದ್ವೆ ವಿಷಯಾನೇ ಎತ್ತೋಲ್ಲ ಬಿಡು!

ಮೈಸೂರು ಮಿತ್ರ
ಮಂಗಳವಾರ, 10 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........
ಮನುಷ್ಯನಿಗೆ ಒಮ್ಮೆ ಸಂಶಯ ಪಿಶಾಚಿ ಹಿಡಿಯಿತೆಂದರೆ ತೀರಿತು, ಸರಿ ತಪ್ಪುಗಳ ವಿಚಾರವಾಗಿ ಯೋಚಿಸುವ ತಾಳ್ಮೆ ಇರುವುದಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಣೆಯಲ್ಲಿ ಬರೆದದ್ದು ಅಣುವಿನಷ್ಟು ತಪ್ಪದು

ನಿಮ್ಮ ಪತ್ರಗಳು

ಕಸ ತೆರವುಗೊಳಿಸಲು ಮನವಿ

ಮಾನ್ಯರೆ,
ಸಾಂಸ್ಕೃತಿಕ ನಗರಿಯಾದ ಮೈಸೂರಿಗೆ ಸ್ವಚ್ಛತೆಯಲ್ಲಿ ಎರಡು ಬಾರಿ ಪ್ರಥಮ ಸ್ಥಾನ ಸಿಕ್ಕಿರುವುದು ಸಂತೋಷದ ವಿಚಾರ. ಆದರೆ ದಕ್ಕಿರುವ ಸ್ಥಾನವನ್ನು ಕಾಪಾಡುವುದು



ಮೈಸೂರು ಜನತೆಯ ಕರ್ತವ್ಯವೂ ಕೂಡ ಆಗಿರುತ್ತದೆ ಎಂಬುದನ್ನು ಮೈಸೂರು ಜನತೆ ಮರೆಯಬಾರದು. ನಗರದ ಪ್ರಮುಖ ರಸ್ತೆಯಲ್ಲಿ ಸ್ವಚ್ಛತೆ ಇದ್ದರೆ ಸಾಲದು, ಮೈಸೂರಿನಾದ್ಯಂತ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಬೇಕು. ಮೈಸೂರಿನ ಇಲವಾಲ ಹೋಬಳಿಯ ಬಸವನಹಳ್ಳಿ ರಸ್ತೆಯ ಖಾಲಿ ಜಾಗದಲ್ಲಿ ಕಸ ಸುರಿದಿರುವುದರಿಂದ ಅಕ್ಕಪಕ್ಕದ ನಿವಾಸಿಗಳು, ವಿದ್ಯಾರ್ಥಿಗಳಿಗೆ ದುರ್ವಾಸನೆ ಬೀರುತ್ತಿದ್ದು, ಸೊಳ್ಳೆಗಳಿಂದ ಹಾಗೂ ಅನೇಕ ರೋಗಗಳು ಹರಡುವ ಭೀತಿಯಿಂದ ಜನ ಆತಂಕದಲ್ಲೇ ಜೀವನ ಸಾಗಿಸುವಂತಾಗಿದೆ. ಕೂಡಲೇ ಈ ಕಸವನ್ನು ತೆರವುಗೊಳಿಸಿ ನಿವಾಸಿಗಳ ನೆಮ್ಮದಿಯ ಜೀವನಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದುಸ್ಥಿತಿಯಲ್ಲಿರುವ ಕಟ್ಟಡಗಳು





ಮಾನ್ಯರೆ,
ಮೈಸೂರಿನ ಸೌಂದರ್ಯವನ್ನು ಇಲ್ಲಿಯವರೆಗೂ ಕಾಪಾಡಿಕೊಂಡು ಸಾಂಸ್ಕೃತಿಕ ನಗರ ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡು ಬಂದಿರುವುದು ಮೈಸೂರು ಸಂಸ್ಥಾನದ ಮಹಾರಾಜರು ಕಟ್ಟಿಸಿದ ಪಶ್ಚಿಮದಿಂದ ಪೂರ್ವದವರೆಗಿನ ವಿಶ್ವವಿದ್ಯಾಲಯದ ಕಟ್ಟಡಗಳಿಂದ ಪ್ರಾರಂಭವಾಗಿ ಲಲಿತಮಹಲ್ ಪ್ಯಾಲೇಸ್‌ವರೆಗೆ ಇರುವ ಹಲವಾರು ಮನಮೋಹಕ ಪಾರಂಪರಿಕ ಕಟ್ಟಡಗಳು ಹಾಗೂ ಮಹಲುಗಳು. ಇವುಗಳಲ್ಲಿ ಕೆಲವು ಕುಸಿದು ನೆಲಸಮವಾಗಿವೆ. ಇನ್ನು ಕೆಲವು ಸಮರ್ಪಕವಾದ ನಿರ್ವಹಣೆ ಇಲ್ಲದೆ ಕುಸಿಯುವ ಹಂತ ತಲುಪಿವೆ. ಬಹುತೇಕ ಪಾರಂಪರಿಕ ಕಟ್ಟಡಗಳ ದುಸ್ಥಿತಿಯನ್ನು ನೋಡಿದರೆ ಇಂದೋ, ನಾಳೆಯೋ ನೆಲಸಮಗೊಳ್ಳುವ ಸ್ಥಿತಿಯಲ್ಲಿ ಆಸ್ಪತ್ರೆಯ ಬೆಡ್ ಮೇಲೆ ಮಲಗಿರುವ ರೋಗಿಗಳಂತೆ ಕಂಡುಬರುತ್ತವೆ.

ಸದ್ಯಕ್ಕೆ ಇಲ್ಲಿ ಎರಡು ಕಟ್ಟಡಗಳ ಬಗ್ಗೆ ಹೇಳಲಿಚ್ಛಿಸುವೆ: ಆಶೋಕ ರಸ್ತೆ ಮತ್ತು ಇರ್ವಿನ್ ರಸ್ತೆ ಸೇರುವ ವೃತ್ತದಲ್ಲಿ ಇರುವ ಎಸ್‌ಬಿಐ ಬ್ಯಾಂಕಿನ ಕಟ್ಟಡದ ಮೇಲ್ಛಾವಣಿಯಲ್ಲಿ ಎರಡು ಅರಳಿ ಮರಗಳು ಬೆಳೆದು ನಿಂತಿವೆ. ಅದರಲ್ಲೊಂದು ಅಂದಾಜು ಎಂಟು ಅಡಿಗಳಿಗಿಂತಲೂ ಎತ್ತರಕ್ಕೆ ಬೆಳೆದು ವಿರಾಜಮಾನವಾಗಿ ತಲೆಯೆತ್ತಿ ನೋಡುಗರ ಮನಸೆಳೆಯುತ್ತಿದೆ. ಮತ್ತೊಂದು ಕಟ್ಟಡ ಶಿವರಾಂಪೇಟೆ ರಸ್ತೆಯಲ್ಲಿ ಇರುವ ಇವನಿಂಗ್ ಬಜಾರ್ ಕಟ್ಟಡದ ಮೇಲೆ ಹಲವಾರು ಗಿಡಮರಗಳು ಸೊಂಪಾಗಿ ಬೆಳೆದು ಹಸಿರುಚಪ್ಪರ ಹೊದಿಕೆಯಂತಿದೆ. ಈ ಕಟ್ಟಡದಲ್ಲಿ ಹಲವಾರು ಅಂಗಡಿಗಳು ವ್ಯಾಪಾರ–ವಹಿವಾಟು ನಡೆಸುತ್ತಿವೆ. ಎರಡೂ ಕಟ್ಟಡಗಳು ಜನನಿಬಿಡ ರಸ್ತೆಯಲ್ಲಿ ಇದ್ದು ನಿತ್ಯವೂ ನೂರಾರು ಜನರು ವ್ಯಾಪಾರ–ವಹಿವಾಟಿಗಾಗಿ ಕಟ್ಟಡದ ಒಳಕ್ಕೆ ಹೋಗಿಬರುತ್ತಾರೆ, ದೈವಕೃಪೆ ಇಲ್ಲಿಯವರೆಗೂ ಏನೂ ಆಗಿಲ್ಲ. ಮುಂದೆ ಬಾರಿ ದುರಂತ ಸಂಭವಿಸುವ ಮೊದಲು ಸಂಬಂಧಿಸಿದವರು ಕ್ರಮ ವಹಿಸುವುದು ಸೂಕ್ತ ಲ್ಯಾನ್ಸ್‌ಡೌನ್ ಕಟ್ಟಡ, ಅಗ್ನಿಶಾಮಕ ಕಟ್ಟಡ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳು ಕುಸಿದು ಅನಾಹುತ ಆಗಿರುವುದು ನಮ್ಮ ಕಣ್ಣ ಮುಂದಿದೆ, ಮುಂದಿನ ದಿನಗಳಲ್ಲಿ ಶಿಥಿಲಾವಸ್ಥೆಯಲ್ಲಿ ಇರುವ ಇನ್ನಿತರೆ ಕಟ್ಟಡಗಳು ಕುಸಿದು ಸಾವುನೋವುಗಳು ಆಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಿದೆ, ಇಲ್ಲದಿದ್ದಲ್ಲಿ ಊಹಿಸಲಾಗದ ನಷ್ಟ ಆಗುವುದರಲ್ಲಿ ಸಂಶಯವಿಲ್ಲ!. ಈಗಾಗಲೇ ಕುಸಿದಿರುವ ಕಟ್ಟಡಗಳನ್ನು ತ್ವರಿತವಾಗಿ ಪುನರ್‌ನಿರ್ಮಿಸಲು ಹಾಗೂ ಪಾರಂಪರಿಕ ಕಟ್ಟಡಗಳ ಶಿಸ್ತುಬದ್ಧ ನಿರ್ವಹಣೆಗೆ ಸಮಗ್ರ ಯೋಜನೆಯನ್ನು ತಯಾರಿಸಲು ಸಂಬಂಧಿಸಿದವರು ಕ್ರಮವಹಿಸಿ ಮೈಸೂರಿನ ಸಾಂಸ್ಕೃತಿಕ ನಗರಿಯ ಹೆಸರು ಸ್ಥಿರವಾಗಿ ಉಳಿಯುವಂತೆ ಮಾಡುವರೆ?!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಹಿರಿಯ ನಾಗರಿಕರ ಎಫ್‌ಡಿ ಬಡ್ಡಿದರ ಏರಿಕೆ ಸ್ವಾಗತಾರ್ಹ

ಮಾನ್ಯರೆ,
ಅರವತ್ತು ವರ್ಷ ದಾಟಿದ ಪ್ರತಿಯೊಬ್ಬರನ್ನು ಹಿರಿಯ ನಾಗರಿಕರೆಂದು ಪರಿಗಣಿಸಲಾಗುತ್ತದೆ ಮತ್ತು ಇವರ ಮನಸ್ಸು ಮಕ್ಕಳಂತೆ ಮುಗ್ಧವಾಗಿರುತ್ತದೆ. ಸರ್ಕಾರಿ ನೌಕರರು, ಕೂಲಿ ಕಾರ್ಮಿಕರು ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಕಷ್ಟಪಟ್ಟು ದುಡಿದು ಮನೆಯ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಮದುವೆ ಮುಂತಾದ ಸಮಸ್ಯೆಗಳನ್ನು ಎದುರಿಸಿ ಉಳಿಸಿದ ಹಣವನ್ನು ಬ್ಯಾಂಕ್‌ನ ನಿಖರ ಠೇವಣಿ (ಫಿಕ್ಸೆಡ್ ಡೆಪಾಸಿಟ್) ಖಾತೆಯಲ್ಲಿ ತಮ್ಮ ಜೀವನದ ಸಂಧ್ಯಾ ಸಮಯದಲ್ಲಿನ ಕಷ್ಟಗಳಿಗೆ ಉಳಿತಾಯ ಮಾಡಿರುತ್ತಾರೆ.

ಇಂತಹ ಹಿರಿಯ ನಾಗರಿಕರ ಎಫ್‌ಡಿ ಉಳಿತಾಯದ ಬಡ್ಡಿಯ ದರವನ್ನು ಪ್ರಸ್ತುತ ಹೆಚ್ಚಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಕೊರೊನಾ ಸಮಯದಲ್ಲಿ ಬ್ಯಾಂಕುಗಳು ಬಡ್ಡಿ ದರವನ್ನು ಶೇ. 5.5 ಕಡಿಮೆ ದರಕ್ಕೆ ಇಳಿಸಿದ್ದವು. ಇದರಿಂದಾಗಿ ಈ ಬಡ್ಡಿಯ ಹಣವನ್ನೇ ನೆಚ್ಚಿಕೊಂಡಿದ್ದ ಹಿರಿಯ ಜೀವಗಳಿಗೆ ತೊಂದರೆಯಾಗುತ್ತಿತ್ತು.

ಆದರೆ ಹೊಸ ವರ್ಷದ ಉಡುಗೊರೆಯಾಗಿ ಬ್ಯಾಂಕುಗಳು ಬಡ್ಡಿಯ ದರವನ್ನು ಏರಿಕೆ ಮಾಡಿದ್ದು, ಹಿರಿಯ ನಾಗರಿಕರು ನೆಮ್ಮದಿಯಿಂದ ಬದುಕಬಹುದಾಗಿದೆ. ನಿಖರ ಠೇವಣಿಯ ಬಡ್ಡಿಯ ದರ 8% ಏರಿಕೆಯಾಗಿರುವುದು ಸಂತಸದ ವಿಷಯವಾಗಿದೆ.

ವಿವಿಧ ಬ್ಯಾಂಕುಗಳಲ್ಲಿನ ಹಿರಿಯ ನಾಗರಿಕರ ನಿಖರ ಠೇವಣಿಯ ಬಡ್ಡಿದರ ಅಲ್ಪ ಪ್ರಮಾಣದ ವ್ಯತ್ಯಾಸವಿದ್ದರೂ ಬಡ್ಡಿಯ ದರ ಕಡಿಮೆಯಾಗಿಲ್ಲ. ಉದಾಹರಣೆಗೆ ಡಿಸಿಬಿಯಲ್ಲಿ 8.25% , ಪಿಎನ್‌ಬಿ 8%, ಐಡಿಎಫ್‌ಸಿ ಪಸ್ಟ್ 8% , ಎಸ್ ಬ್ಯಾಂಕ್ 8%, ಇಂಡಸ್ ಇಂಡ್ ಬ್ಯಾಂಕ್ 7.85% , ಸೆಂಟ್ರಲ್ ಬ್ಯಾಂಕ್ 7.85%, ಹೆಚ್‌ಡಿಎಫ್‌ಸಿ 7.75%, ಆಕ್ಸಿಸ್ ಬ್ಯಾಂಕ್ 7.75%, ಬ್ಯಾಂಕ್ ಆಫ್ ಬರೋಡಾ 7.75%, ಎಸ್‌ಬಿಐ 7.75% ಹೆಚ್ಚಾಗಿರುವುದು ಹಿರಿಯ ನಾಗರಿಕರ ಪಾಲಿಗೆ ಸಂತಸದ ವಿಷಯವಾಗಿದೆ.

ಯಾವುದೇ ರೀತಿಯ ಬಡ್ಡಿಯ ದರ ಕಡಿಮೆಯಾದರೂ ಯಾವುದೇ ತೊಂದರೆಯಾಗುವುದಿಲ್ಲ. ಆದರೆ ಹಿರಿಯ ನಾಗರಿಕರ ಬಡ್ಡಿ ದರ ಕಡಿಮೆಯಾಗದಂತೆ ಸ್ಥಿರವಾಗಿರುವಂತಹ ಕಾನೂನನ್ನು ಭಾರತೀಯ ರಿಸರ್ವ್ ಬ್ಯಾಂಕ್ ಜಾರಿಗೆ ತರಬೇಕು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167


ಬಹುಮುಖಿ

ರಾಷ್ಟ್ರೀಯ ಯುವ ದಿನದ ಸ್ಫೂರ್ತಿಯೇ ವಿವೇಕಾನಂದರು

ಏನೇ ಆಗಲಿ ಗುರಿ ಸ್ಥಿರವಾಗಿರಬೇಕು. ಎಂತಹ ಕಠಿಣ ಸಂದರ್ಭದಲ್ಲೂ ಮಾಡುವ ಪ್ರಯತ್ನದಲ್ಲಿ ರಾಜೀ ಇರಕೂಡದು. ಅದಾದಾಗಲೇ ಯಶಸ್ಸು ನಮ್ಮದಾಗುತ್ತದೆ ಎಂಬ ತನ್ನ ಅಂತರಂಗದ ಮಹಾಗುರು ಶ್ರೀ ರಾಮಕೃಷ್ಣ ಪರಮಹಂಸರ ಸೂಕ್ತಿಗಳನ್ನು, ಅಮೃತ ನುಡಿಗಳನ್ನು ನಡೆಯಲ್ಲಿ, ನುಡಿಯಲ್ಲಿ ಅಕ್ಷರಶಃ ಆಚರಿಸಿ ಜಗತ್ತಿಗೆ ತೋರಿಸಿ ಜನಕೋಟಿಯ ಹೃನ್ಮನದಲ್ಲಿ ಜಾಗೃತಿಯ ಬೆಳಕು ಚೆಲ್ಲಿ ಸ್ಫೂರ್ತಿಯ ಶಿಖರ ಏರಿದವರು ವೀರಸನ್ಯಾಸಿ ವಿವೇಕಾನಂದರು. ಸಿಂಹದೋಪಾದಿಯಲ್ಲಿ ದೃಢ ಸಂಕಲ್ಪದೊಂದಿಗೆ ದಿಟ್ಟ ಹೆಜ್ಜೆಯಿಡುವ ಯುವ ಸಮೂಹಕ್ಕೆ ಅವರು ದಾರಿದೀಪ. ಅಷ್ಟೇ ಅಲ್ಲ ಮಹಾನ್ ದಿಕ್ಸೂಚಿ. ಭವಿಷ್ಯದ ಯುವ ಜನಾಂಗಕ್ಕೆ ಚೈತನ್ಯದ, ಒಳಿತಿನ ಉದಾತ್ತ ಭಾವನೆಗಳ ಮಹಾ ಭಂಡಾರ ಕೊಟ್ಟ ಮಹಾ ದಾರ್ಶನಿಕರು.

ಭಾರತದ ಸಂಸ್ಕೃತಿಯ ಪ್ರತೀಕವಾದ ಸಹೋದರ, ಸಹೋದರಿಯರ ಪ್ರೀತಿಯ ಸಂಕೇತವಾದ ವಿವೇಕಾನಂದರು ತಮ್ಮ ವಜ್ರ ಕಂಠದಿಂದ "ನನ್ನ ಪ್ರಿಯ ಸಹೋದರ, ಸಹೋದರಿಯರೇ..." ಎಂಬ ಪಾಂಚಜನ್ಯ ವೊಳಗಿಸಿದ ಪ್ರೀತಿಯ ಕರೆ ಅಮೆರಿಕೆಯ ಚಿಕಾಗೋ ನಗರ ಮಾತ್ರವಲ್ಲ ಇಡೀ ಪ್ರಪಂಚವನ್ನೇ ಸೂಜಿಗಲ್ಲಿನಂತೆ ಸೆಳೆದದ್ದು, ವಿಶ್ವ ಜನಸಾಗರವನ್ನು ಮೂಕವಿಸ್ಮಯಗೊಳಿಸಿದ್ದು ಈಗ ಇತಿಹಾಸ. ಅಷ್ಟೇ ಅಲ್ಲ ತನ್ಮೂಲಕ ವಿಶ್ವದ ಮಹನೀಯರ ಮನ ಗೆದ್ದು ವಿಶ್ವವಿಜೇತ ವಿವೇಕಾನಂದ ಎನಿಸಿದ್ದು ಮಹತ್ವ ಪೂರ್ಣ ಚರಿತ್ರೆಯಾಗಿದೆ. ಭಾರತದ ಮಹೋನ್ನತ ಮೌಲ್ಯಗಳನ್ನು, ಆಚಾರ ವಿಚಾರಗಳನ್ನು ಪ್ರತಿಯೊಬ್ಬರ ಹೃದಯ ತುಂಬಿ ಬರುವಂತೆ ವಿಶ್ವದ ಭೂಪಟದಲ್ಲಿ ಅಚ್ಚೊತ್ತಿದ ವಿವೇಕಾನಂದರಿಂದ ಇವತ್ತಿಗೂ ಪಾಶ್ಚಾತ್ಯರಲ್ಲಿ ನಮ್ಮ ಭಾರತ ದೇಶದ ಬಗ್ಗೆ ಬಹುದೊಡ್ಡ ಗೌರವವಿದೆ. ವಿವೇಕಾನಂದರ ವಾಣಿ ಎಂದರೆ ಅಮೃತದಲ್ಲಿ ಅದ್ದಿ ತೆಗೆದ ನುಡಿ ಮಾಲೆ. ಚೈತನ್ಯ ತುಂಬಿದ ಈ ಅಮೃತ ನುಡಿ ಮಾಲೆಯನ್ನು ವಿಶ್ವ ಮಾತೆಯ ಕೊರಳಿಗೆ ಅಲಂಕರಿಸಿ ಮಾನವಕುಲವನ್ನು ಬೆಳಕಿನತ್ತ ಮುನ್ನಡೆಸಿದ ಮಹಾ ಮಾನವತಾವಾದಿ ವಿವೇಕಾನಂದರು ಭಾರತದ ಹೆಮ್ಮೆ ಮಾತ್ರವಲ್ಲ ವಿಶ್ವದ ಹಿರಿಮೆಯೂ ಹೌದು.

ಐದು ಸಾವಿರ ವರ್ಷಗಳಿಗೂ ಮಿಗಿಲಾದ ಭವ್ಯ ಇತಿಹಾಸ, ದಿವ್ಯ ಸಂಸ್ಕೃತಿ, ಮಹೋನ್ನತ ಪರಂಪರೆಗಳುಳ್ಳ ದೇಶ ನಮ್ಮದು. ಇಲ್ಲಿ ಪ್ರಾಚೀನ, ಅರ್ವಾಚೀನ ಮಹಾಪುರುಷರು, ಸಂತರು, ದಾರ್ಶನಿಕರು, ಆಧ್ಯಾತ್ಮ ವೀರರು, ಜ್ಞಾನಿಗಳು ನಿರಂತರವಾಗಿ ಚೈತನ್ಯ ತುಂಬುತ್ತ ಬಂದಿದ್ದಾರೆ. ಇವರೆಲ್ಲರೂ ಸರ್ವರ ಸುಖಕ್ಕಾಗಿ, ಸರ್ವರ ಏಳಿಗೆಗಾಗಿ, ಸರ್ವ ಜೀವರಾಶಿಗಳಿಗೂ ಒಳಿತನ್ನೇ ಬಯಸುವುದಕ್ಕಾಗಿ ಮನುಷ್ಯ ಮನಸ್ಸುಗಳನ್ನು ಜಾಗೃತಿಗೊಳಿಸಿ ಹದವಾದ ಪಾಕಕ್ಕೆ ತರುವುದರಲ್ಲೇ ತಮ್ಮ ಆಯುಷ್ಯ ತೆತ್ತವರು. ಅಲ್ಪಾಯುಷ್ಯದಲ್ಲೇ ಅಗಾಧವಾದ ಸಾಧನೆಗೈದು ದೇಶಕ್ಕೆ ಮುಂಬೆಳಕು ನೀಡಿದವರು. ಇವರಲ್ಲಿ ಅಧ್ಯಾತ್ಮವೀರರಾಗಿ, ಜ್ಞಾನ ಸೂರ್ಯರಾಗಿ, ವಿವೇಕ ಪ್ರಭೆಯಾಗಿ ವಿಶ್ವದೆತ್ತರಕ್ಕೂ ಭಾರತದ ಹಿರಿಮೆಯನ್ನು ಎತ್ತಿ ಹಿಡಿದ ಕೀರ್ತಿ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ.



ನೀನು, ಭಾರತವನ್ನು ತಿಳಿದುಕೊಳ್ಳಬೇಕೆಂದರೆ ಮೊದಲು ವಿವೇಕಾನಂದರನ್ನು ಕುರಿತು ಅಧ್ಯಯನ ಮಾಡು– ಇದು ರವೀಂದ್ರನಾಥ ಟ್ಯಾಗೂರ್ ಅವರ ಮಾತು. ಅಕ್ಷರಶಃ ನಿಜ. ಏಕೆಂದರೆ ವಿವೇಕಾನಂದರು ಭಾರತಾಂಬೆಯ ಸುಪುತ್ರರಾಗಿ ಭಾರತದ ಸಂಸ್ಕೃತಿ ಸಂಪನ್ನತೆಯ ಮೌಲ್ಯವನ್ನೆಲ್ಲಾ ತಮ್ಮೊಳಗೆ ಮೇಳೈಸಿಕೊಂಡು ಒಂದು ರೀತಿ ಇಡೀ ಭಾರತವೇ ಅವರಾಗಿದ್ದರು. ಅಲ್ಲಿ ಭಾರತದ ವಿರಾಟ್ ದರ್ಶನವಿತ್ತು.

ವಿವೇಕಾನಂದರೆಂದರೆ ಒಳಿತಿನ ಹೊಳಪು. ಸಂಸ್ಕೃತಿಯ ಮಹಾಬೆಳಕು. ಸರ್ವಧರ್ಮಗಳಲ್ಲಿನ ಲೇಸನ್ನೆಲ್ಲಾ ಹೀರಿಕೊಂಡು ಮೈ ತಳೆದ ಮಹಾ ಮಾನವತಾವಾದಿ. ಮಾನವಪರ ಕಾಳಜಿಯ ತಮ್ಮ 'ವಿವೇಕ ಚಿಂತನೆ'ಯ ಬೆಳಕಿನ ಅಸ್ತ್ರದಿಂದಲೇ ಇಡೀ ವಿಶ್ವವನ್ನು ಗೆದ್ದವರು. ನಮಗಿಂದು ಶಕ್ತಿ, ಶಕ್ತಿಬೇಕು ಎಂದು ಪದೇ ಪದೇ ಹೇಳುವೆನು. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಪ್ರಪಂಚಕ್ಕೆಲ್ಲಾ ದಾನ ಮಾಡುವಷ್ಟು ಶಕ್ತಿ ಅದರಲ್ಲಿದೆ. ಇಡೀ ಪ್ರಪಂಚವನ್ನೇ ಅದರಿಂದ ಜಾಗೃತಗೊಳಿಸಬಹುದು. ಇಡೀ ಪ್ರಪಂಚಕ್ಕೆ ಶಕ್ತಿಯನ್ನು ನೀಡಬಹುದು ...... ಎಂದು ಸಾರಿದ ಸ್ವಾಮಿ ವಿವೇಕಾನಂದರು ವಿಶೇಷವಾಗಿ ಭಾರತದ ಘನತೆ, ಗೌರವ, ಆಶೋತ್ತರ, ಭವಿಷ್ಯಗಳೆಲ್ಲವೂ ದೇಶದ ಯುವಶಕ್ತಿಯ ಕೈಯಲ್ಲಿದೆಯೆಂದೂ, ರಾಷ್ಟ್ರನಿರ್ಮಾಣದಲ್ಲಿ ಯುವ ಜನಾಂಗದ ಪಾತ್ರ ಬಹು ಮಹತ್ತರವಾದುದೆಂದೂ, ಸತ್ತಂತಿಹ ಯುವ ಶಕ್ತಿಯನ್ನು ಬಡಿದೆಚ್ಚರಿಸಿದ ಭವ್ಯ ತೇಜರು. ನೇತಾಜಿ ಸುಭಾಷ್ ಚಂದ್ರಬೋಸ್‌ರಂಥ ಸ್ವಾತಂತ್ರ್ಯ ಸೇನಾನಿಗಳಿಗೇ ಆಧ್ಯಾತ್ಮಿಕ ಗುರುವಾಗಿದ್ದವರು. ಯುವಜನರಿಗೆ ಸದಾ ಸ್ಫೂರ್ತಿದಾಯಕರು.

ಜನವರಿ 12, ರಾಷ್ಟ್ರೀಯ ಯುವ ದಿನ. ತನ್ನಿಮಿತ್ತ ಈ ಲೇಖನ.

ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ನಿಲ್ಲದಿರಿ. ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ, ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ ಎಂದು ಕರೆ ನೀಡಿದ ಈ ವಿವೇಕ ವಾಣಿಯೇ ವಿವೇಕಾನಂದರನ್ನು ಬೇರೆಲ್ಲರಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ. ಹಾಗೆಯೇ ಜನರಲ್ಲಿ ಅದರಲ್ಲೂ ಯುವಜನರಲ್ಲಿ ಸ್ಫೂರ್ತಿಯ ಸೆಲೆಯಾಗಿ ಉತ್ಸಾಹ ತುಂಬಿ ನವ ಚೈತನ್ಯ ತರುತ್ತದೆ. ಅರಿವಿರುವವರಿಗೆ ಅವರ ಈ ಮಾತುಗಳೇ ಸಾಕು. ಸಾಧನೆಯ ಶಿಖರವನ್ನು ಕಟ್ಟಲೂ ಬಹುದು, ಏರಲೂಬಹುದು. ಆದ್ದರಿಂದಲೇ ಯುವ ಶಕ್ತಿಯ ಸಾಧನೆಯ ಸಂಕೇತದಂತಿರುವ ವಿವೇಕಾ ನಂದರ ಜನ್ಮದಿನವಾದ ಜನವರಿ ಹನ್ನೆರಡನ್ನು ಅರ್ಥಾತ್ ವಿವೇಕಾನಂದ ಜಯಂತಿಯನ್ನು ರಾಷ್ಟ್ರೀಯ ಯುವ ದಿನವಾಗಿ ದೇಶ ಹೆಮ್ಮೆಯಿಂದ ಆಚರಿಸುತ್ತದೆ.

ಈ ರಾಷ್ಟ್ರೀಯ ಯುವ ದಿನಾಚರಣೆ ನಿಜಕ್ಕೂ ಸಾರ್ಥಕವಾಗಬೇಕಾದರೆ ವಿವೇಕಾನಂದರ ಚಿಂತನೆಗಳನ್ನು ಪ್ರತಿಯೊಬ್ಬರೂ ಅದರಲ್ಲೂ ಯುವ ಸಮೂಹ ಮೈಗೂಡಿಸಿಕೊಳ್ಳಬೇಕು. ವಿವೇಕಾನಂದರು ನಿರೀಕ್ಷಿಸಿದ್ದ ಭಾರತೀಯರು ನಾವಾಗಬೇಕು. ಅವರು ಆಶಿಸಿದ್ದ ಸಶಕ್ತ ಭವ್ಯ ಭಾರತವನ್ನು ನಾವಿಂದು ಕಟ್ಟಬೇಕು. ದೀನದೇವೋಭವ, ದಲಿತ ದೇವೋಭವ, ದರಿದ್ರ ದೇವೋಭವ ಎಂಬ ವಿವೇಕೋಕ್ತಿ ಗಳನ್ನು ಪಾಲಿಸಬೇಕು. ವಿವೇಕಾನಂದರು ಕಂಡ ಕನಸುಗಳನ್ನು ನನಸುಗೊಳಿಸುವ ಸನ್ಮಾರ್ಗದಲ್ಲಿ ನಾವು ಸಾಗ ಬೇಕು. ವಿಶ್ವದ ಯಾವುದೇ ದೇಶದ ಮುಂದೆ ಯಾವತ್ತೂ ನಮ್ಮ ಭಾರತ ತಲೆಬಾಗದೆ ತಲೆ ಎತ್ತಿನಿಲ್ಲುವಂತೆ ಪ್ರತಿಯೊಬ್ಬರೂ ದೇಶ ಕಟ್ಟಬೇಕು. ಇದೇ ನಾವು ವೀರ ಸನ್ಯಾಸಿ ವಿವೇಕಾನಂದರಿಗೆ ಸಲ್ಲಿಸುವ ಬಹುದೊಡ್ಡ ಸೆಲ್ಯೂಟ್. ಅಷ್ಟೇ ಅಲ್ಲ, ಇದು ಬ್ರಿಟೀಷರ ಸಂಕೋಲೆ ಯಲ್ಲಿ ನಲುಗಿದ್ದ ಭಾರತವನ್ನು ಪುನಶ್ಚೇತನಗೊಳಿಸು ವಲ್ಲಿ ಅವಿತರವಾಗಿ ಶ್ರಮಿಸಿದ, ಸ್ವಾಭಿಮಾನ ಶೂನ್ಯ ರಾಗಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯ ಲ್ಲಿದ್ದ ಭಾರತೀಯರಿಗೆ ವಿವೇಕದ ಅಮೃತ ಕುಡಿಸಿ ಹಿಂದೂ ಧರ್ಮವನ್ನು ಸಂರಕ್ಷಿಸುವಲ್ಲಿ ಹಾಗೂ ಅದರ ಸಾರವನ್ನು ತಿಳಿಸುವಲ್ಲಿ ಒಂದು ವೇದಿಕೆಯಂತೆ ಕೆಲಸ ಮಾಡಿ ತಾಯಿ ಭಾರತಿಗೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡಿದ್ದ ದೇಶಕಂಡ ಮಹಾಚೇತನ, ಪುರುಷ ಸಿಂಹ ಸ್ವಾಮಿ ವಿವೇಕಾನಂದರಿಗೆ ನಾವು ನೀಡುವ ಮಹಾ ಗೌರವವೂ ಹೌದು.

ಇಂಥ ಧೀರೋದ್ಧಾತ ದಿವ್ಯ ಪುರುಷ, ಮಹಾ ಚೇತನ, ಮಹಾಚೈತನ್ಯ, ವಿಶ್ವವಿಜೇತ ಸ್ವಾಮಿ ವಿವೇಕಾನಂದರು ಜಗತ್ತಿಗೆ ಅವತರಿಸಿದ್ದು 1863ರ ಜನವರಿ 12ರಂದು ಕೊಲ್ಕತ್ತಾದ ಆಗರ್ಭ ಶ್ರೀಮಂತ ದತ್ತ ಮನೆತನದಲ್ಲಿ. ತಂದೆ ವಿಶ್ವಾಥದತ್ತ, ತಾಯಿ ಭುವನೇಶ್ವರಿ ದೇವಿ. ವಿವೇಕಾನಂದರು ಕಾಶಿ ವಿಶ್ವನಾಥನ ವರದಿಂದ ಜನಿಸಿದವರೆಂದು ನಂಬಿದ್ದರಿಂದ ಇವರನ್ನು ಮೊದಮೊದಲು ವಿಶ್ವೇಶ್ವರನೆಂದು ಕರೆಯಲಾಗುತ್ತಿತ್ತು. ಮುಂದೆ ನರೇಂದ್ರ, ನರೇಂದ್ರನಾಥ ಎಂದು ಕರೆಯಲಾಯಿತು. ಶ್ರೀರಾಮಕೃಷ್ಣಪರಮಹಂಸರ ಶಿಷ್ಯರಾಗಿ ಸನ್ಯಾಸ ಸ್ವೀಕರಿಸಿದ ಮೇಲೆ ಇವರು 'ವಿವೇಕಾನಂದ' ಎಂಬ ಹೆಸರನ್ನು ಪಡೆದು ವಿಶ್ವವಿಖ್ಯಾತರಾದರು. ಶ್ರೀರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ಗುರುಶಿಷ್ಯ ಸಂಬಂಧ ಇಡೀ ಜಗತ್ತಿಗೆ ಮಾದರಿಯಾಗುವಂತಾದ್ದು! ಇಂಥ ಮಹಾ ಗುರುವನ್ನು ಪಡೆದದ್ದಕ್ಕೆ ವಿವೇಕಾನಂದರೂ, ಇಂಥ ಮಹಾಶಿಷ್ಯನನ್ನು ಪಡೆದದ್ದಕ್ಕೆ ಶ್ರೀರಾಮಕೃಷ್ಣರೂ ಒಬ್ಬರಿಗೊಬ್ಬರು ಮಹಾಭಾಗ್ಯಶಾಲಿಗಳಾಗಿದ್ದರು. ಒಟ್ಟಾರೆ ಇಂಥ ಮಹಾನ್ ಚೇತನಶಕ್ತಿಗಳನ್ನು ಪಡೆಯಲು ಇಡೀ ಪ್ರಪಂಚವೇ ಪುಣ್ಯ ಮಾಡಿತ್ತು!

ವಿವೇಕಾನಂದರು ತಮ್ಮದೇ ರೀತಿಯಲ್ಲಿ ಬಹುದೊಡ್ಡ ಚಿಂತಕರಾಗಿ ಪ್ರಸಿದ್ಧಿ ಪಡೆದವರು. ಅವರ ಮುಖ್ಯ ಕೊಡುಗೆ ಎಂದರೆ, ಅದ್ವೈತ ಸಿದ್ಧಾಂತ ಕೇವಲ ತಾತ್ವಿಕವಾಗಿ ಉಚ್ಚ ತಂತ್ರಜ್ಞಾನ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯುಕ್ತ ಎಂಬುದನ್ನು ತೋರಿಸಿಕೊಟ್ಟರು. ಅವರ ಅಭಿಪ್ರಾಯದಂತೆ ರಾಮಕೃಷ್ಣಪರಮಹಂಸರಿಂದ ಅವರು ಪಡೆದ ಮುಖ್ಯ ಬೋಧನೆಗಳಲ್ಲಿ ಒಂದೆಂದರೆ 'ಎಲ್ಲರಲ್ಲಿಯೂ ದೇವರಿದ್ದಾರೆ' ಎಂಬುದು. ಇದೇ ವಿವೇಕಾನಂದರ ಮಂತ್ರವಾಯಿತಲ್ಲದೆ ಇವರ 'ದರಿದ್ರನಾರಾಯಣ ಸೇವೆ' ಎಂಬ ತತ್ವಕ್ಕೆ ಮಾರ್ಗಸೂಚಿ ಮಾಡಿಕೊಟ್ಟಿತು. ಈ ತತ್ವದಂತೆಯೇ ದೀನದಲಿತರ, ಬಡಜನರ ಸೇವೆಯಲ್ಲಿಯೇ ದೇವರ ಸೇವೆಯನ್ನು ಮಾಡುವ ಮಾರ್ಗವನ್ನು ಅವರು ಪಾಲಿಸಿದರು. ಎಲ್ಲರಲ್ಲಿಯೂ ದೇವರಿದ್ದು, ಎಲ್ಲರೂ ಸಮಾನರೆಂದಾದ ಮೇಲೆ ಕೆಲವರಿಗೆ ಮಾತ್ರ ಏಕೆ ಹೆಚ್ಚು ಬೆಲೆ ಬರಬೇಕು ಎಂಬ ಪ್ರಶ್ನೆಯನ್ನು ವಿವೇಕಾನಂದರು ಕೇಳಿಕೊಂಡರು. ಅವರ ಅಂತಿಮವಾದ ತೀರ್ಪೆಂದರೆ ಭಕ್ತನು ಮೋಕ್ಷವನ್ನು ಅನುಭವಿಸಿದಾಗ ನಮ್ಮಲ್ಲಿರುವ ಎಲ್ಲ ಭೇದ–ಭಾವಗಳು ಇಲ್ಲವಾಗಿ, ಉಳಿಯುವುದೆಂದರೆ ಬ್ರಹ್ಮನೊಂದಿಗೆ ತಮ್ಮ ಐಕ್ಯವನ್ನು ಅರಿಯದ ಮತ್ತು ಕೆಳತುಳಿಯಲ್ಪಟ್ಟಿರುವ ತಳಸ್ತರದ ಜನರ ಬಗೆಗೆ ಸಂತಾಪ ಹಾಗೂ ಅವರಿಗೆ ಸಹಾಯ ಮಾಡುವ ಸದೃಢ ನಿರ್ಧಾರ!

ನಿನ್ನನ್ನು ದುರ್ಬಲಗೊಳಿಸುವ ಆಲೋಚನೆಗಳು ನಿನ್ನ ಬಳಿ ಬರಲು ಬಿಡಬೇಡಿಯೆನ್ನುತ್ತಾರೆ ವಿವೇಕಾನಂದರು. ಮನುಷ್ಯ ಜೀವನದಲ್ಲಿ ಎದುರಾಗುವ ಪ್ರತಿಯೊಂದು ಸಮಸ್ಯೆಗೂ ವಿವೇಕಾನಂದರ ಮಾತುಗಳಲ್ಲಿ ಮದ್ದುಂಟು. ಇದೊಂದು ರೀತಿ ದಿವ್ಯೌಷಧಿ. ಭವ್ಯ ಔಷಧಿ ಕೂಡ. ಇವರ ಆತ್ಮವಿಶ್ವಾಸ, ಆತ್ಮಸ್ಥೈರ್ಯ, ಮನೋವಿಕಾಸ ಎಂಬುದು ಭವ್ಯ ಭವಿಷ್ಯದ ಬಂಗಾರದ ಬದುಕಿನ ನಿರೀಕ್ಷೆಯಲ್ಲಿರುವ ಯುವ ಸಮುದಾಯಕ್ಕೆ ಸಂಜೀವಿನಿ ಇದ್ದಂತೆ. ಯುವಜನರು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ನಿತ್ರಾಣಗೊಂಡಾಗ, ನಿರಾಶೆಯಿಂದ ಕುಗ್ಗಿ ಹೋದಾಗ ವಿವೇಕಾನಂದರ ಸೂಕ್ತಿಗಳು ಆಮ್ಲಜನಕದಂತೆ ಚೈತನ್ಯಗೊಳಿಸುತ್ತವೆ. ಜ್ಞಾನ ಜ್ಯೋತಿಯಾಗಿ ಯುವ ಪೀಳಿಗೆ ಮುನ್ನಡೆಯಲು, ಸಮಸ್ಯೆಗಳಿಂದ ಮುಕ್ತಿ ಹೊಂದಲು ದಾರಿದೀವಿಗೆಯಾಗುತ್ತದೆ.

ಸ್ವಾಮಿ ವಿವೇಕಾನಂದರ ತತ್ವಾದರ್ಶಗಳೇ ಹಾಗೆ, ಮಾನವ ಕೋಟಿಯನ್ನು ಉದ್ಧರಿಸಲೆಂದೇ ಹುಟ್ಟಿದವು. ದರಿದ್ರ ದೇವೋಭವ ಎಂದು ದರಿದ್ರರಲ್ಲೂ ದೈವತ್ವ ಕಂಡ ವಿವೇಕಾನಂದರೂ ಸಹ ಮನುಷ್ಯರನ್ನು ಉದ್ಧಾರ ಮಾಡಲೆಂದೇ ಅವತರಿಸಿದ ಮಹಾಪುರುಷರು.

ಪ್ರತಿ ಬೂತ್ ಮತದಾರರ ಮನ ಗೆದ್ದರೆ ಇಡೀ ಕ್ಷೇತ್ರ ಗೆದ್ದಂತೆ

ಎನ್.ಆರ್.ಕ್ಷೇತ್ರದ ಬೂತ್ ವಿಜಯ ಅಭಿಯಾನದಲ್ಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಭಿಮತ

ಮೈಸೂರು,ಜ.9(ಎಸ್‌ಪಿಎನ್)– ಬೂತ್ ವ್ಯಾಪ್ತಿಯ ಮತದಾರರನ್ನು ಮನವೊಲಿಸಿದರೆ ಇಡೀ ಕ್ಷೇತ್ರ ಗೆದ್ದಂತೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಭಿಪ್ರಾಯಪಟ್ಟರು.

ಮೈಸೂರು ಹೆಚ್‌ಪಿಓ ಅಂಡ್ ಆರ್‌ಎಂಎಸ್ ಲೇಔಟ್(ವಾರ್ಡ್ ನಂ.35)ನ ಶಕ್ತಿ ಗಣಪತಿ ದೇವಸ್ಥಾನ ಆವರಣದಲ್ಲಿ ಬಿಜೆಪಿ ಎನ್.ಆರ್.ಕ್ಷೇತ್ರದ ವತಿಯಿಂದ ಆಯೋಜಿಸಿದ್ದ 'ಬೂತ್ ವಿಜಯ ಅಭಿಯಾನ'ಕ್ಕೆ ಚಾಲನೆ ನೀಡಿ ಮಾತನಾಡಿದರು.

ಎನ್.ಆರ್.ಕ್ಷೇತ್ರದಲ್ಲಿ ಬೂತ್ ಅಧ್ಯಕ್ಷರು, ಸದಸ್ಯರು, ಕ್ಷೇತ್ರ ಅಧ್ಯಕ್ಷರು ಹಾಗೂ ಪೇಜ್ ಪ್ರಮುಖ್ ಸೇರಿದಂತೆ ಇತರೆ ಕಾರ್ಯಕರ್ತರು ಒಂದು ಕುಟುಂಬವಾಗಿ ಕೆಲಸ ಮಾಡಿದರೆ, ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಪ್ರತಿ ಬೂತ್ ಗೆದ್ದರೆ, ದೇಶ ಗೆದ್ದಂತೆ ಎಂದು ಪ್ರತಿಬಾರಿ ಚುನಾವಣಾ ಭಾಷಣದಲ್ಲಿ ಹೇಳುತ್ತಿರುತ್ತಾರೆ. ಇದರ ಬಗ್ಗೆ ಈ ಭಾಗದ ಕಾರ್ಯ ಕರ್ತರು ಸಾಕಷ್ಟು ಗಮನಹರಿಸಿ, ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.



ಬಿಜೆಪಿ ಹಿರಿಯ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶಸ್ವಾಮಿ ಮಾತನಾಡಿ, ಬೂತ್‌ಮಟ್ಟದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಜನರಿಗೆ ತಲುಪುವಂತೆ ಮಾಡುವುದು ಕಾರ್ಯಕರ್ತರು ಮತ್ತು ಸ್ಥಳೀಯ ಮುಖಂಡರ ಜವಾಬ್ದಾರಿ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರ ಮಾರ್ಗದರ್ಶನದಂತೆ ಮತದಾರರ ಪ್ರತಿ ಮನೆಮನೆಗೆ ತೆರಳಿ ಮನವೊಲಿಸುವ ಕಾರ್ಯ ಬೂತ್‌ಮಟ್ಟದಿಂದ ಆಗಬೇಕು. ಆಗ ಮಾತ್ರ ಬೂತ್ ವಿಜಯ ಅಭಿಯಾನ ಯಶಸ್ವಿಗೊಳ್ಳುತ್ತದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಪಾಲಿಕೆ ಸದಸ್ಯ ಸಾತ್ವಿಕ್ ಸಂದೇಶ್ ಸ್ವಾಮಿ, ಭಾನು ಪ್ರಕಾಶ್, ಧನರಾಜ್ ಇತರರಿದ್ದರು.

ಮೈಲ್ಯಾಕ್ ಅಧ್ಯಕ್ಷ ಆರ್.ರಘುಗೆ ರಾಜ್ಯ ಸಚಿವ ಸ್ಥಾನಮಾನ

ಮೈಸೂರು: ಮೈಸೂರಿನ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಅವರಿಗೆ ರಾಜ್ಯ ಸಚಿವ ಸ್ಥಾನ ಮಾನ ನೀಡಿ, ರಾಜ್ಯ ಸರ್ಕಾರದ ಅಧೀನ ಕಾರ್ಯದರ್ಶಿ ಟಿ.ವಿ. ಸುನಂದಮ್ಮ ಆದೇಶ ಹೊರಡಿಸಿದ್ದಾರೆ. ಇತ್ತೀಚೆಗಷ್ಟೆ ಮೈಲ್ಯಾಕ್ ಸಂಸ್ಥೆ ಅಮೃತ ಮಹೋತ್ಸವ ಆಚರಿಸಿಕೊಂಡಿತ್ತು. ಈ ಹಿಂದೆಯೂ ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದಾಗಲೂ ರಘು ಅವರಿಗೆ ರಾಜ್ಯ ಸಚಿವ ಸ್ಥಾನಮಾನ ಕಲ್ಪಿಸಲಾಗಿತ್ತು.



ಆರ್. ರಘು ಕೌಟಿಲ್ಯ


ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ

ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ವಿಶ್ವಾಸ

ಮೈಸೂರು,ಜ.9(ಪಿಎಂ)– ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಜನವಿರೋಧಿ ನೀತಿ ಅನುಸರಿಸುತ್ತಿವೆ. ಇದರಿಂದ ಬೇಸತ್ತಿರುವ ರಾಜ್ಯದ ಜನತೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಲಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಇಲವಾಲದಲ್ಲಿ (ರಬನಿ ಮಸೀದಿ) ಸೋಮವಾರ ಹಮ್ಮಿಕೊಂಡಿದ್ದ ಬೆಳವಾಡಿ, ಕೂರ್ಗಳ್ಳಿ, ಹೂಟಗಳ್ಳಿ, ಗುಂಗ್ರಾಲ್ ಛತ್ರ, ಆನಂದೂರು, ನಾಗವಾಲ ಗ್ರಾಮಗಳ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದನ್ನು ಮಾಧ್ಯಮಗಳ ಅನೇಕ ಸಮೀಕ್ಷೆಗಳಲ್ಲಿಯೂ ಹೇಳಲಾಗಿದೆ. ಆದ್ದರಿಂದ ಪಕ್ಷದ ಮುಖಂಡರು ಗುಂಪುಗಾರಿಕೆಯನ್ನು ಬಿಟ್ಟು ಒಗ್ಗಟ್ಟಾಗಿ ಪ್ರತಿಯೊಬ್ಬರು ಪಕ್ಷದ ಪರವಾಗಿ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಸ್ವಾತಂತ್ರ್ಯ ತಂದು ಕೊಟ್ಟ ಪಕ್ಷ. ಈ ದೇಶವನ್ನು 60 ವರ್ಷಗಳ ಕಾಲ ಆಳಿದ ಕಾಂಗ್ರೆಸ್, ದೇಶದ ಸಮಗ್ರ ಅಭಿವೃದ್ಧಿ ಶ್ರಮಿಸಿದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶದ ಘನತೆಯನ್ನು ಎತ್ತಿಹಿಡಿದಿದೆ. ಎಲ್ಲಾ ವರ್ಗದ ಜನತೆಗೆ ಸಾಮಾಜಿಕ ನ್ಯಾಯ ಕಲ್ಪಿಸಿದೆ. ನೆಹರು ಆದಿಯಾಗಿ ಇಂದಿರಾ ಗಾಂಧಿ, ರಾಜೀವ್ ಗಾಂಧಿ, ನರಸಿಂಹರಾವ್, ಮನ್ ಮೋಹನ್ ಸಿಂಗ್ ಇವರ ಆಡಳಿತದಲ್ಲಿ ದೇಶದ ಸಮಗ್ರ ಅಭಿವೃದ್ಧಿ ಕಂಡಿದೆ ಎಂದು ತಿಳಿಸಿದರು.



ಇಂದಿರಾಗಾಂಧಿಯವರ ಕಾಲದಲ್ಲಿ 20 ಅಂಶಗಳ ಕಾರ್ಯಕ್ರಮ ಜಾರಿಗೆ ತಂದು ಎಲ್ಲಾ ಬಡ ಜನರಿಗೆ ಮೂಲ ಸೌಕರ್ಯವನ್ನು ಒದಗಿಸಲಾಯಿತು. ಡಾ. ಅಂಬೇಡ್ಕರ್ ಅವರ ಶ್ರೇಷ್ಠ ಸಂವಿಧಾನದ ಆಶಯದಂತೆ ಜನರು ಸುರಕ್ಷಿತವಾಗಿ ಬದುಕಲು ಅನುಕೂಲ ಮಾಡಿಕೊಟ್ಟ ಪಕ್ಷ ಕಾಂಗ್ರೆಸ್ ಎಂದು ಹೇಳಿದರು.

ಸಿದ್ದರಾಮಯ್ಯನವರ 5 ವರ್ಷದ ಆಡಳಿತದಲ್ಲಿ ಈ ರಾಜ್ಯದ ಎಲ್ಲಾ ಜನರ ಶ್ರೇಯೋಭಿವೃದ್ಧಿ ವಿವಿಧ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಈ ದೇಶ ಮತ್ತು ರಾಜ್ಯದ ಜನ ಕಾಂಗ್ರೆಸ್ ಪಕ್ಷದ ಬಗ್ಗೆ ಒಲವು ಹೊಂದಿದ್ದು, ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ಪಕ್ಷ ಸಂಘಟನೆ ಮಾಡಬೇಕೆಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಮುಖಂಡರು ಮನೆ ಮನೆಗೆ ಹೋಗಿ ಸಿದ್ದರಾಮಯ್ಯನವರ ಸರ್ಕಾರದ ಅವಧಿಯ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಿಳಿಸಬೇಕು. ಆ ಮೂಲಕ ಮನವಿ ಕಾಂಗ್ರೆಸ್ ಪಕ್ಷ ಬೆಂಬಲಿಸಲು ಅವರಲ್ಲಿ ಮನವಿ ಮಾಡಬೇಕೆಂದು ಸಲಹೆ ನೀಡಿದರು.

ನಂತರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿ ಗ್ರಾಪಂ ವ್ಯಾಪ್ತಿಯ ಕೇರಗಳ್ಳಿ ಗ್ರಾಮದ ಹೊಂಬಾಳಮ್ಮ ಸಿದ್ದರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಪಂಚಾಯತಿ ಮುಖಂಡರ ಹಾಗೂ ಕಾರ್ಯಕರ್ತರ ಸಭೆಯಲ್ಲಿಯೂ ಮರೀಗೌಡ ಮಾತನಾಡಿದರು.

ಬ್ಲಾಕ್ ಅಧ್ಯಕ್ಷರಾದ ಗುರುಸ್ವಾಮಿ, ಸತೀಶ್ ಕುಮಾರ್, ಮುಖಂಡರಾದ ಸಿದ್ದರಾಜು, ಅರುಣ್‌ಕುಮಾರ್, ಕೂರ್ಗಳ್ಳಿ ಮಹದೇವ, ಮೆಲ್ಲಹಳ್ಳಿ ಮಹದೇವಸ್ವಾಮಿ, ಆನಂದೂರು ರಾಮೇಗೌಡ, ಭಾಗ್ಯ ಲೋಕೇಶ್, ನಾಗರತ್ನ ಮಾತನಾಡಿದರು. ಮುಖಂಡರಾದ ಕೃಷ್ಣಕುಮಾರ್ ಸಾಗರ್, ಹೊಸಕಾಮನಕೊಪ್ಪಲು ಸ್ವಾಮಿ, ಸುರೇಶ್, ಪಾಷಾ, ವೈ.ಸಿ.ಸ್ವಾಮಿ, ಕರೀಗೌಡ ನಾಗವಾಲ, ಮಹೇಶ, ರಮೇಶ್, ಕೆಂಪೇಗೌಡ, ಚುಂಚೇಗೌಡ, ಮೈದನಹಳ್ಳಿ ರಾಜಣ್ಣ, ಶಿವಣ್ಣ, ನಟರಾಜು, ಬೊಮ್ಮೇನಹಳ್ಳಿ ಸಿದ್ದರಾಜು, ದಾಸೇಗೌಡ, ಚೆಲುವೇಗೌಡ, ಕೂರ್ಗಳ್ಳಿ ಚಿಕ್ಕಣ್ಣ, ಮಹೇಶ ಸೇರಿದಂತೆ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ತಿ.ನರಸೀಪುರದಲ್ಲಿ ಉದ್ಯಮಿಯ ಮನೆಯಲ್ಲಿ ಕೆ.ಜಿ.ಗಟ್ಟಲೆ ಚಿನ್ನಾಭರಣ, ಲಕ್ಷಾಂತರ ನಗದು ಲೂಟಿ ಪ್ರಕರಣ ಬಯಲು

● ಆಂಧ್ರದಲ್ಲಿ ಓರ್ವ ಖತರ್ನಾಕ್ ಖದೀಮನ ಬಂಧನ: ಹಾಸನ ಜೈಲಲ್ಲಿ ಇನ್ನೊರ್ವ, ಮತ್ತಿಬ್ಬರಿಗಾಗಿ ಶೋಧ ● ತೀವ್ರ ಕುತೂಹಲ ಕೆರಳಿಸಿದ್ದ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾದ ಮೈಸೂರು ಜಿಲ್ಲಾ ಪೊಲೀಸರ ಬಗ್ಗೆ ಎಸ್ಪಿ ಸೀಮಾ ಲಾಟ್ಕರ್ ಪ್ರಶಂಸೆ



ಮೈಸೂರು, ಜ. 9(ಎಂಟಿವೈ)– ತಿ.ನರಸೀಪುರದ ಉದ್ಯಮಿಯೊಬ್ಬರ ಮನೆ ಬಾಗಿಲು ಮೀಟಿ, ಡ್ರಿಲ್ಲಿಂಗ್ ಯಂತ್ರದಿಂದ ಡಿಜಿಟಲ್ ಲಾಕರ್ ತೆರೆದು ಕೆ.ಜಿ.ಗಟ್ಟಲೆ ಚಿನ್ನ, ಬೆಳ್ಳಿ ಹಾಗೂ 30 ಲಕ್ಷ ರೂ. ನಗದು ಕಳವು ಮಾಡಿದ್ದ ಖತರ್ನಾಕ್ ಕಳ್ಳನನ್ನು ನಂಜನಗೂಡು ಉಪ ವಿಭಾಗದ ಪೊಲೀಸರು, ಆಂಧ್ರಪ್ರದೇಶದಲ್ಲಿ ಬಂಧಿಸಿ, 790.510 ಗ್ರಾಂ ಚಿನ್ನಾಭರಣ, 499.260 ಗ್ರಾಂ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಸಂಬಂಧ ಮೈಸೂರಿನ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಅವರು, ನಾಲ್ವರು ಅಂತರ ಜಿಲ್ಲಾ ಖದೀಮರು ಈ ಕೃತ್ಯ ಎಸಗಿದ್ದು, ಆಂಧ್ರಪ್ರದೇಶದಲ್ಲಿ ದಾದಾ ಪೀರ್(35) ಎಂಬಾತನನ್ನು ಬಂಧಿಸಲಾಗಿದೆ. ಕಡೂರು ಖಾಲಿದ್ ಎಂಬಾತ ಹಾಸನದ ಜೈಲಿನಲ್ಲಿದ್ದಾನೆ. ಈತನ ಸಹೋದರ ಕಡೂರು ಸಾದಿಕ್ ಮತ್ತು ಮಂಗಳೂರಿನ ಅಮ್ಜಾ ಎಂಬುವರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ಮುಂದುವರೆಯಲಿದೆ ಎಂದರು.

ಕಳ್ಳತನವನ್ನೇ ವೃತ್ತಿಯಾಗಿಸಿಕೊಂಡಿರುವ ಈ ತಂಡ, ರಾಜ್ಯದ ಗದಗ ಜಿಲ್ಲೆಯಲ್ಲಿ ಒಂದು, ಬೈಲಹೊಂಗಲ, ನಿಪ್ಪಾಣಿಯಲ್ಲಿ ತಲಾ ಒಂದು ಮತ್ತು ತಿ.ನರಸೀಪುರದಲ್ಲಿ ಎರಡು ಪ್ರಕರಣಗಳಲ್ಲಿ ಭಾಗಿಯಾಗಿರುವುದು ಪ್ರಾಥಮಿಕ ವಿಚಾರಣೆಯಿಂದ ತಿಳಿದು ಬಂದಿದೆ. ಈ ಕುಖ್ಯಾತ ತಂಡ ಇನ್ನಷ್ಟು ಕೃತ್ಯಗಳಲ್ಲಿ ಭಾಗಿಯಾಗಿರುವ ಸಂಶಯವಿದ್ದು ಅದರ ಬಗ್ಗೆಯೂ ಗಮನಹರಿಸಲಾಗಿದೆ ಎಂದರು.

ವಿವರ: ತಿ.ನರಸೀಪುರದ ಶ್ರೀನಿಧಿ ಡಿಸ್ಟ್ರಿಬ್ಯೂಟರ್ಸ್ ಮಾಲೀಕ ಶ್ರೀನಿವಾಸ್ ಅವರು, 2022ರ ಆಗಸ್ಟ್ 21ರಂದು ಕುಟುಂಬ ಸಮೇತ ಮೈಸೂರಿಗೆ ಆಗಮಿಸಿದ್ದರು. ಅವರು ಹಿಂತಿರುಗಿದಾಗ ಮನೆಯ ಹಿಂಬಾಗಿಲು ಮೀಟಿ ಒಳನುಗ್ಗಿದ ಖದೀಮರು, ಡಿಜಿಟಲ್ ಲಾಕರ್‌ನಲ್ಲಿಟ್ಟಿದ್ದ 3.250 ಕೆ.ಜಿ. ಚಿನ್ನಾಭರಣ, 12 ಕೆಜಿ ಬೆಳ್ಳಿ ಪದಾರ್ಥ ಹಾಗೂ 30 ಲಕ್ಷ ರೂ. ನಗದು ಕಳವು ಮಾಡಿರುವುದು ಗೊತ್ತಾಗಿತ್ತು. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಯಾವುದೇ ಸುಳಿವಿಲ್ಲದ ಈ ಪ್ರಕರಣದ ಪತ್ತೆಗಾಗಿ ನಾಲ್ಕು ತಂಡಗಳನ್ನು ರಚಿಸಲಾಗಿತ್ತು. ತಾಂತ್ರಿಕ ತಂಡದ ಸದಸ್ಯರು ಉದ್ಯಮಿ ಶ್ರೀನಿವಾಸ್ ಅವರ ಮನೆ ಇದ್ದ ರಸ್ತೆಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿದಾಗ ಕಾರೊಂದು ಅನುಮಾನಾಸ್ಪದವಾಗಿ ಸಂಚರಿಸಿರುವುದು ಗೋಚರಿಸಿತ್ತು. ಈ ಕಾರಿನ ಚಲನ–ವಲನ ಬಗ್ಗೆ ಅರಿಯಲು ಪೊಲೀಸರು 50ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳ ಫುಟೇಜ್‌ಗಳನ್ನು ಪರಿಶೀಲಿಸಿದ್ದರು. ಅಲ್ಲದೇ, ಕಾರು ಚಲಿಸಿದ ರಸ್ತೆಗಳಲ್ಲಿನ ಮೊಬೈಲ್ ಟವರ್‌ಗಳಲ್ಲಿ ಕಾರ್ಯನಿರ್ವಹಿಸಿರುವ ಸಿಮ್‌ಗಳ ಮಾಹಿತಿಯನ್ನು ಕಲೆ ಹಾಕಿದ್ದರು. ಶ್ರೀನಿವಾಸ್‌ರವರ ಮನೆಯ ಬಳಿ ಇರುವ ಟವರ್‌ನಿಂದ ಕಾರ್ಯನಿರ್ವಹಿಸಿದ್ದ ಸಿಮ್, ಅನುಮಾನಾಸ್ಪದ ಕಾರು ಸಂಚರಿಸಿದ ಎಲ್ಲಾ ರಸ್ತೆಗಳಲ್ಲಿರುವ ಟವರ್‌ಗಳಲ್ಲೂ ಕಾರ್ಯನಿರ್ವಹಿಸಿರುವುದನ್ನು ಪತ್ತೆ ಮಾಡಿದ ಪೊಲೀಸರು, ಈ ಸುಳಿವಿನ ಆಧಾರದ ಮೇರೆಗೆ ಸದರಿ ಸಿಮ್ ಹೊಂದಿರುವ ವ್ಯಕ್ತಿ ಆಂಧ್ರಪ್ರದೇಶದಲ್ಲಿ ಇರುವುದನ್ನು ಖಚಿತಪಡಿಸಿಕೊಂಡು, ಅಲ್ಲಿನ ಹಿಂದೂಪುರ, ಬತ್ತಲಪತ್ತಿ, ಪೆನುಕೊಂಡ ಪುಟ್ಟಪರ್ತಿ, ಪರಗಿ ಧರ್ಮಾವರಂ, ಅನಂತಪುರಂ, ಹೈದರಾಬಾದ್ ಇನ್ನಿತರೆಡೆ ಸಂಚರಿಸಿ, ಕೊನೆಗೆ ಹಿಂದೂಪುರದಲ್ಲಿ ದಾದಾಪೀರ್‌ನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅಡಿಷನಲ್ ಎಸ್ಪಿ ನಂದಿನಿ, ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜು ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಿ.ನರಸೀಪುರ ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್‌ಕುಮಾರ್, ನಂಜನಗೂಡು ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್, ಲಕ್ಷ್ಮೀಕಾಂತ ತಳವಾರ್, ಸಾಲಿಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಜಯಪ್ರಕಾಶ್, ಆರತಿ, ಎಎಸ್‌ಐ ಸತೀಶ್, ಸಿಬ್ಬಂದಿಗಳಾದ ಭಾಸ್ಕರ್, ಅಶೋಕ್, ವಸಂತಕುಮಾರ್, ಜಯಕುಮಾರ್, ಅಶ್ವಿತಾ ಅವರನ್ನೊಳಗೊಂಡ ತಂಡವನ್ನು ಜಿಲ್ಲಾ ಎಸ್ಪಿ ಪ್ರಶಂಸಿಸಿದ್ದಾರೆ.

ಈ ಪ್ರಕರಣದ ಆರೋಪಿಗಳಲ್ಲೊಬ್ಬನಾದ ಕಡೂರು ಸಾದಿಖ್ ಎಂಬಾತ ಸುಮಾರು 10 ವರ್ಷದ ಹಿಂದೆ ಮೈಸೂರಿನ ವಿದ್ಯಾವಿಕಾಸ ಕಾಲೇಜಿನಲ್ಲಿ ನಡೆದಿದ್ದ ಸೆಕ್ಯೂರಿಟಿ ಗಾರ್ಡ್ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ಎಂದು ಜಿಲ್ಲಾ ಎಸ್ಪಿ ತಿಳಿಸಿದರು. ವಿದ್ಯಾ ವಿಕಾಸ ಕಾಲೇಜು ಆವರಣದಲ್ಲಿ ಶ್ರೀಗಂಧದ ಮರ ಕಳವು ಮಾಡಲು ತೆರಳಿದ್ದ ಖದೀಮರ ತಂಡ, ಪ್ರತಿರೋಧ ವ್ಯಕ್ತಪಡಿಸಿದ ಕಾಲೇಜಿನ ಸೆಕ್ಯೂರಿಟಿ ಗಾರ್ಡ್ ಅನ್ನು ಅಮಾನುಷವಾಗಿ ಹತ್ಯೆ ಮಾಡಿತ್ತು. ಈ ಪ್ರಕರಣದಲ್ಲಿ ಕಡೂರು ಸಾದಿಕ್ ಕೂಡ ಬಂಧಿತನಾಗಿದ್ದ. ಜಾಮೀನಿನ ಮೇಲೆ ಹೊರ ಬಂದ ನಂತರವೂ ದುಷ್ಕೃತ್ಯಗಳಲ್ಲಿ ಆತ ತೊಡಗಿದ್ದ ಎಂದು ಜಿಲ್ಲಾ ಎಸ್ಪಿ ತಿಳಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಸ್ನೇಹ; ಉಡುಗೊರೆ ಕಳಿಸುವ ನೆಪದಲ್ಲಿ ಲಕ್ಷಾಂತರ ರೂ. ವಂಚನೆ

● ಮೈಸೂರು ಪೊಲೀಸರಿಂದ ಪ್ರಕರಣ ಬಯಲು; ಬೆಂಗಳೂರಲ್ಲಿ ಮೂವರ ಬಂಧನ ● ನೈಜೀರಿಯಾ ಪ್ರಜೆ ಪ್ರಕರಣದ ಕಿಂಗ್‌ಪಿನ್; ಅಸ್ಸಾಂ ಯುವಕರ ಬಳಸಿಕೊಂಡು ದಂಧೆ ● ಇನ್‌ಸ್ಟಾಗ್ರಾಂನಲ್ಲಿ ನಕಲಿ ಖಾತೆ ತೆರೆದು ಅಮಾಯಕರಿಗೆ ವಂಚನೆ



"ಆನ್‌ಲೈನ್ ವಂಚಕರು ಕಾಲಕ್ಕೆ ತಕ್ಕಂತೆ ಅಪ್ಡೇಟ್ ಆಗುತ್ತಿದ್ದಾರೆ. ಎಷ್ಟೇ ಜಾಗೃತಿ ಮೂಡಿಸುತ್ತಿದ್ದರೂ ಆನ್‌ಲೈನ್ ವಂಚನೆ ಪ್ರಕರಣ ಹೆಚ್ಚಾಗುತ್ತಿದ್ದು, ಜನರು ಮೋಸ ಹೋಗುತ್ತಲೇ ಇದ್ದಾರೆ. ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುತ್ತಿರುವ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕಲು ಸೆನ್ ಪೊಲೀಸರು ಶ್ರಮಿಸುತ್ತಿದ್ದಾರೆ. ಹಣ ವರ್ಗಾವಣೆ, ಓಟಿಪಿ ನೀಡಿ ವಂಚನೆಯಾದರೆ ತಕ್ಷಣವೇ ಸಹಾಯವಾಣಿ ಸಂಖ್ಯೆ 1903ಗೆ ಕರೆ ಮಾಡಬೇಕಾಗಿದೆ. ಗೋಲ್ಡನ್ ಹವರ್‌ನಲ್ಲಿ ದೂರು ನೀಡಿದರೆ, ವಂಚನೆಯಾಗುವ ಹಣ ತಡೆಹಿಡಿಯುಬಹುದಾಗಿದೆ. ಈ ಪ್ರಕರಣದಲ್ಲಿ ಬಂಧಿತರಾಗಿರುವ ವಂಚಕರು ಬ್ಯಾಂಕ್‌ಗಳಿಗೆ ರಜೆ ಇರುವ ದಿನ, ವಾರಾಂತ್ಯದ ದಿನಗಳಲ್ಲಿ ಕೃತ್ಯ ನಡೆಸಿರುವುದು ಕಂಡುಬಂದಿದೆ. ಹೀಗಾಗಿ, ಸಾರ್ವಜನಿಕರು ಎಚ್ಚರ ವಹಿಸಬೇಕು.

- ಸೀಮಾ ಲಾಟ್ಕರ್, ಮೈಸೂರು ಎಸ್ಪಿ

ಮೈಸೂರು, ಜ. 9(ಎಂಟಿವೈ)– ಸಾಮಾಜಿಕ ಜಾಲತಾಣದಲ್ಲಿ ಸ್ನೇಹ ಬೆಳೆಸಿ, ವಿದೇಶದಿಂದ ಉಡುಗೊರೆ ಕಳುಹಿಸುವುದಾಗಿ ನಂಬಿಸಿ, ಅಮಾಯಕರನ್ನು ವಂಚಿಸುತ್ತಿದ್ದ ಪ್ರಕರಣವನ್ನು ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ಪತ್ತೆ ಹಚ್ಚಿದ್ದು, ಅಸ್ಸಾಂ ಮೂಲದ ಮೂವರನ್ನು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಮೈಸೂರಿನ ತಮ್ಮ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಅವರು ಮಾಹಿತಿ ನೀಡಿದರು. ಈ ಪ್ರಕರಣದಲ್ಲಿ ನೈಜೀರಿಯಾ ಪ್ರಜೆಯೋರ್ವ ಕಿಂಗ್‌ಪಿನ್ ಆಗಿದ್ದು, ಆತ ತಾನು ವಿವಾಹವಾಗಿರುವ ಅಸ್ಸಾಂ ಮೂಲದ ಯುವತಿಯ ಸಹೋದರಿ ಮೂಲಕ ಆ ರಾಜ್ಯದ ಕೆಲವರನ್ನು ಬಳಸಿಕೊಂಡು ಆನ್‌ಲೈನ್‌ನಲ್ಲಿ ವಂಚನೆ ಎಸಗುತ್ತಿದ್ದ ಎಂದು ತಿಳಿಸಿದರು.

ಅಸ್ಸಾಂನ ಕರೀಂ ಗಂಜ್ ಜಿಲ್ಲೆಯ ಸಿಂಬುಲಾಲ್ ಚೊರಾಯತ್(26), ಲಾಲ್ ಸಂಗೀಕರ್ ಚೊರಾಯಿತ್(23) ಮತ್ತು ಹರಿಲಾಲ್ ಚೊರಾಯಿತ್(22) ಬಂಧಿತರಾಗಿದ್ದು, ಇವರಿಂದ ಆರು ಮೊಬೈಲ್, ಎರಡು ಬ್ಯಾಂಕ್ ಪಾಸ್‌ಬುಕ್, ಮನೆಯ ಬಾಡಿಗೆ ಕರಾರು ಪತ್ರ, 26 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಪ್ರಾಥಮಿಕ ತನಿಖೆ ವೇಳೆ ಈ ವಂಚಕರು 39 ಇನ್‌ಸ್ಟಾಗ್ರಾಂ ನಕಲಿ ಖಾತೆಗಳ ಮೂಲಕ ವಂಚನೆ ಎಸಗುತ್ತಿದ್ದರು ಎಂಬುದು ಪತ್ತೆಯಾಗಿದ್ದು, ಆ ಎಲ್ಲಾ ಖಾತೆಗಳನ್ನೂ ಬ್ಲಾಕ್ ಮಾಡಿಸಲಾಗಿದೆ ಎಂದು ಎಸ್ಪಿ ತಿಳಿಸಿದರು.

ವಿವರ: ನಂಜನಗೂಡು ತಾಲೂಕು ಬದನವಾಳು ಗ್ರಾಮದ ಹಿಮಶ್ವೇತಾ ಎಂಬ ಯುವತಿಗೆ ರೋಬರ್ಟ್ ಎಡ್ಗರ್ ಎಂಬ ಹೆಸರಿನಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ವಂಚಕ ಕೆಲ ದಿನ ಚಾಟ್ ಮಾಡಿದ ನಂತರ ತಾನು ಇಂಗ್ಲೆಂಡ್‌ನಲ್ಲಿ ಇರುವುದಾಗಿಯೂ, ಯುವತಿಗೆ ಐಫೋನ್ ಸೇರಿದಂತೆ ಬೆಲೆ ಬಾಳುವ ಉಡುಗೊರೆಗಳನ್ನು ಕಳುಹಿಸಿರುವುದಾಗಿ ತಿಳಿಸಿದ್ದ.

ನಂತರ ಮೂರು ಪ್ರತ್ಯೇಕ ಮೊಬೈಲ್ ನಂಬರ್‌ಗಳಿಂದ ಕಾಲ್ ಮಾಡಿದ ವಂಚಕರು, ತಾವು ದೆಹಲಿ ಏರ್‌ಪೋರ್ಟ್‌ನಿಂದ ಮಾತನಾಡುವುದಾಗಿ ತಿಳಿಸಿದ್ದಲ್ಲದೇ ಇಂಗ್ಲೆಂಡ್‌ನಿಂದ ಬಂದಿರುವ ಉಡುಗೊರೆಗಳನ್ನು ಬಿಡಿಸಿಕೊಳ್ಳಲು ವಿವಿಧ ಶುಲ್ಕಗಳು ಎಂದು 2022ರ ಸೆ. 26ರಿಂದ ಅ. 6 ರವರೆಗೆ ಯುವತಿಯಿಂದ 4.77 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದರು. ಈ ಸಂಬಂಧ ಅಕ್ಟೋಬರ್ 14ರಂದು ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನೈಜೀರಿಯಾ ಪ್ರಜೆಯ ಕರಾಮತ್ತು: ಆನ್‌ಲೈನ್ ವಂಚನೆ ಪ್ರಕರಣದ ಕಿಂಗ್ ಪಿನ್ ಆಗಿ ಬೆಂಗಳೂರಿನಲ್ಲಿ ನೆಲೆಸಿರುವ ನೈಜೀರಿಯಾ ಪ್ರಜೆ ಕಾರ್ಯನಿರ್ವಹಿಸಿರುವುದು ಪತ್ತೆಯಾಗಿದೆ. ಅಸ್ಸಾಂನಿಂದ ಬೆಂಗಳೂರಿಗೆ ಬಂದಿದ್ದ ಯುವತಿಯನ್ನು ವಿವಾಹವಾಗಿದ್ದ ಈತ, ಬೆಂಗಳೂರಿನಲ್ಲೇ ಇರುವ ಆಕೆಯ ಸಹೋದರಿ ಸಿಯಂ ಮಯ್ ಹಾಲಂ ಎಂಬಾಕೆಯ ಸಹಕಾರದೊಂದಿಗೆ ಅಸ್ಸಾಂನ ಯುವಕರನ್ನು ಪರಿಚಯ ಮಾಡಿಕೊಂಡು ಅವರ ಮೂಲಕ ಆನ್‌ಲೈನ್ ವಂಚನೆ ಎಸಗುತ್ತಿದ್ದ. ಅಸ್ಸಾಂ ಯುವಕರಿಂದ ಇನ್‌ಸ್ಟಾಗ್ರಾಂ ನಕಲಿ ಖಾತೆಗಳನ್ನು ಓಪನ್ ಮಾಡಿಸಿ, ಅವರ ಮೂಲಕ ಅಮಾಯಕರನ್ನು ವಂಚಿಸಿ, ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದ. ಬ್ಯಾಂಕ್ ಖಾತೆಗಳಿಗೆ ಸಂಬಂಧಪಟ್ಟ ಎಟಿಎಂ ಕಾರ್ಡ್, ಬ್ಯಾಂಕ್ ಖಾತೆಗೆ ಲಿಂಕ್ ಮಾಡಿರುವ ಬಗ್ಗೆ ಮೊಬೈಲ್ ಕೂಡ ನೈಜಿರಿಯಾ ಪ್ರಜೆಯೇ ಇಟ್ಟುಕೊಂಡು ಹಣ ಡ್ರಾ ಮಾಡಿಕೊಳ್ಳುತ್ತಿದ್ದ ವಂಚನೆಯಿಂದ ಬಂದ ಲಕ್ಷಾಂತರ ರೂ.ಗಳನ್ನು ಆತನೇ ಪಡೆಯುತ್ತಿದ್ದು, ಅಸ್ಸಾಂ ಯುವಕರಿಗೆ ಅಲ್ಪ ಸ್ವಲ್ಪ ಹಣ ನೀಡುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ತಲೆಮರೆಸಿಕೊಂಡಿರುವ ನೈಜೀರಿಯಾ ಪ್ರಜೆ ಹಾಗೂ ಅಸ್ಸಾಂ ಯುವತಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಹೆಚ್ಚುವರಿ ಎಸ್ಪಿ ನಂದಿನಿ ಮಾರ್ಗದರ್ಶನದಲ್ಲಿ ಮೈಸೂರು ಜಿಲ್ಲಾ ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಬ್ ಇನ್ಸ್‌ಪೆಕ್ಟರ್ ಲೀಕೇಶ್, ಸಿಬ್ಬಂದಿಗಳಾದ ಮಂಜುನಾಥ್, ರಂಗಸ್ವಾಮಿ, ಬಿ.ವಿ. ಮಂಜುನಾಥ್, ಮಹದೇವಸ್ವಾಮಿ, ವೆಂಕಟೇಶ್, ಪುಷ್ಪಲತಾ, ಮಹೇಶ್, ಮಹೇಶ್‌ಕುಮಾರ್, ಅಭಿಷೇಕ್, ಆದರ್ಶ್, ಸಿಂಧು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ಬ್ಯಾಗ್, ಸಿಹಿ ವಿತರಿಸಿ ಹುಟ್ಟುಹಬ್ಬ ಆಚರಿಸಿಕೊಂಡ ಗ್ರಾಪಂ ಸದಸ್ಯ



ತಾಂಡವಪುರ, ಜ.9– ತಾವು ಓದಿದ ಶಾಲೆಯ ಮಕ್ಕಳಿಗೆ ಬ್ಯಾಗ್ ಹಾಗೂ ಸಿಹಿ ವಿತರಿಸುವ ಮೂಲಕ ನಂಜನಗೂಡು ತಾಲೂಕಿನ ಅಡಕನಹಳ್ಳಿ ಹುಂಡಿ ಗ್ರಾಪಂ ಸದಸ್ಯ ಬಿ.ಶಿವಣ್ಣ ಹುಟ್ಟುಹಬ್ಬ ಆಚರಿಸಿಕೊಂಡರು.

ಈ ವೇಳೆ ಮಾತನಾಡಿದ ಅವರು, ಗ್ರಾಮಸ್ಥರ ಪ್ರೀತಿ, ವಿಶ್ವಾಸಕ್ಕೆ ನಾನು ಸದಾ ಋಣಿಯಾಗಿರುತ್ತೇನೆ. ಸಮಾಜಮುಖಿ ಕಾರ್ಯಕ್ರಮದ ಮೂಲಕ ಹುಟ್ಟುಹಬ್ಬ ಆಚರಿಸಿಕೊಳ್ಳಬೇಕೆಂದು ನಿರ್ಧರಿಸಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ, ಬಡವರಿಗೆ, ಆಶ್ರಮದ ನಿವಾಸಿಗಳಿಗೆ ತಮ್ಮ ಕೈಲಾದ ಸಹಾಯ ಮಾಡಿದ್ದೇನೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಸಮಾಜಮುಖಿ ಕಾರ್ಯ ಕೈಗೊಳ್ಳುತ್ತೇನೆ ಎಂದರು.

ಗ್ರಾಪಂ ಅಧ್ಯಕ್ಷೆ ನಾಗವೇಣಿ ಮಾತನಾಡಿ, ಶಿವಣ್ಣನವರ ಸಮಾಜಮುಖಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ತಾಯಿ ಚಾಮುಂಡೇಶ್ವರಿ ಆರೋಗ್ಯ, ಆಯಸ್ಸು ಕರುಣಿಸಲಿ. ರಾಜಕೀಯದಲ್ಲಿ ಇನ್ನೂ ಉನ್ನತ ಸ್ಥಾನ ಸಿಗುವಂತಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಲೀಲಾವತಿ, ಸದಸ್ಯರಾದ ಸಿದ್ದಮ್ಮ, ರೇವಮ್ಮ, ಕೆಂಚೇಗೌಡ, ಸುಧಾರಾಣಿ, ಬಸಪ್ಪಶೆಟ್ಟಿ ಮುಖಂಡರಾದ ರಾಜು, ಅಣ್ಣಯ್ಯ, ಮಹದೇವುಸ್ವಾಮಿ, ರವಿ, ಶಾಲೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ವಿದ್ಯಾರ್ಥಿಗಳು ಹಾಜರಿದ್ದರು. ಇದೇ ವೇಳೆ ಗ್ರಾಪಂ ಸದಸ್ಯ ಬಿ.ಶಿವಣ್ಣ ದಂಪತಿಯನ್ನು ಸನ್ಮಾನಿಸಲಾಯಿತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಸಾವು



ಮೈಸೂರು, ಜ.9(ಎಸ್‌ಬಿಡಿ)–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿಯೊಂದು ಸಾವನ್ನಪ್ಪಿದೆ. ಹೆಡಿಯಾಲ ವಲಯದ ಅಂಚಿನ ಸರಗೂರು ಪ್ರಾದೇಶಿಕ ವಲಯ ವ್ಯಾಪ್ತಿಯ ಹೆಡಿಯಾಲ ಶಾಖೆ ಹಾದನೂರು ಗ್ರಾಮದ ಸರ್ವೆ ನಂಬರ್ 86ರಲ್ಲಿ ಹುಲಿ ಸಾವನ್ನಪ್ಪಿದ್ದು, ಸೋಮವಾರ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ಕಾದಾಟದಿಂದ ಈ ಸಾವು ಸಂಭವಿಸಿರಬಹುದು ಎಂದು ಶಂಕಿಸಿದ್ದಾರೆ.

ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಎನ್‌ಟಿಸಿಎ ಪ್ರತಿನಿಧಿ ರಘುರಾಂ, ವೈಲ್ಡ್‌ಲೈಫ್ ವಾರ್ಡನ್ ಕೃತಿಕ ಆಲನಹಳ್ಳಿ, ಪಶು ವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ, ವಡೆಯನಪುರ ಗ್ರಾಮ ಪಂಚಾಯಿತಿ ಸದಸ್ಯ ವಿ.ಬಂಗಾರ, ವಲಯ ಅರಣ್ಯಾಧಿಕಾರಿ, ಹೆಡಿಯಾಲ ವಲಯ ಮತ್ತು ಸಿಬ್ಬಂದಿಗಳ ಸಮಕ್ಷಮದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಹುಲಿಯ ಕಳೇಬರವನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಸುಡಲಾಯಿತು. ಕಳೇಬರದ ಮಾದರಿಯನ್ನು ಸಂಗ್ರಹಿಸಿದ್ದು ಅದನ್ನು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಾನೂನು ಪದವೀಧರರ ತರಬೇತಿ ಭತ್ಯೆಗೆ ಅರ್ಜಿ ಆಹ್ವಾನ

ಮೈಸೂರು,ಜ.9–2022–23ನೇ ಸಾಲಿಗೆ ಮೈಸೂರು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ಭತ್ಯೆ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಅರ್ಜಿಯನ್ನು ಜ.10ರಿಂದ ಜ.24ರ ಸಂಜೆ 5ರವರೆಗೆ ವಿತರಿಸಲಾಗುತ್ತಿದ್ದು, ಅರ್ಜಿಯನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ಮೇಯರ್ ಶಿವಕುಮಾರ್ ಪರಿಕಲ್ಪನೆಯಡಿ
65 ಅನೈರ್ಮಲ್ಯ ಸ್ಥಳಗಳ ಸ್ವಚ್ಛತೆಗೆ ವಿಭಿನ್ನ ಕ್ರಮ

ಮೈಸೂರು,ಜ.9(ಪಿಎಂ)– ಮೇಯರ್ ಶಿವಕುಮಾರ್ ಅವರ ಪರಿಕಲ್ಪನೆಯಲ್ಲಿ ನಗರದ ವಿವಿಧ ಭಾಗಗಳ ಅನೈರ್ಮಲ್ಯ ಸ್ಥಳಗಳನ್ನು ಗುರುತಿಸಿ, ಅಲ್ಲಿನ ಸ್ವಚ್ಛತೆಗೆ ವಿಭಿನ್ನ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ವಾಲ್ ಪೇಂಟಿಂಗ್, ಫುಟ್‌ಪಾತ್ ನಿರ್ಮಾಣದ ಮೂಲಕ ಶುಚಿತ್ವದ ಸಂಸ್ಕೃತಿಯನ್ನು ಸ್ಥಳೀಯರಲ್ಲಿ ಬೆಳೆಸಲು ವಿಭಿನ್ನ ಪ್ರಯತ್ನ ನಡೆಸಲಾಗಿದೆ. ಶಿವಕುಮಾರ್ ಅವರು ಮೇಯರ್ ಆಗಿ ಅಧಿಕಾರ ವಹಿಸಿಕೊಂಡ ಕೂಡಲೇ ಪಾಲಿಕೆಯ ತಾಂತ್ರಿಕ ಶಾಖೆಯ ಅಭಿಯಂತರರ ಸಭೆ ನಡೆಸಿ, ನಗರದ ವಿವಿಧೆಡೆ ಅತೀ ಅನೈರ್ಮಲ್ಯ ಸ್ಥಳಗಳನ್ನು ಗುರುತಿಸಿ, ಅಲ್ಲಿ ನೈರ್ಮಲ್ಯದ ವಾತಾವರಣ ನಿರ್ಮಿಸಲು ತಮ್ಮ ಪರಿಕಲ್ಪನೆಯಡಿಯಲ್ಲಿ ನಿರ್ದೇಶನ ನೀಡಿದ್ದರು. ಅದರಂತೆ ಮೊದಲ ಹಂತದಲ್ಲಿ 65 ಸ್ಥಳಗಳನ್ನು ಗುರುತಿಸಿ ಕಸ ಹಾಕದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಅಲ್ಲಿನ ವಾತಾವರಣ ಸ್ವಚ್ಛಗೊಳಿಸಿ, ಹೊಸ ಸ್ವರೂಪ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಕಬಡ್ಡಿ ತೀರ್ಪುಗಾರರ ಆಯ್ಕೆ ಪರೀಕ್ಷೆ

ಮೈಸೂರು,ಜ.9–ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಮತ್ತು ಮೈಸೂರು ಜಿಲ್ಲಾ ಕಬಡ್ಡಿ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದಲ್ಲಿ ಫೆಬ್ರವರಿ 4 ಮತ್ತು 5ರಂದು ಅಂತರ ಜಿಲ್ಲಾ ಕಬಡ್ಡಿ ಕಾರ್ಯಾಗಾರ ಹಾಗೂ ರಾಜ್ಯ ಮಟ್ಟದ ಕಬಡ್ಡಿ ತೀರ್ಪುಗಾರರ ಪರೀಕ್ಷೆ ನಡೆಯಲಿದೆ. ತೀರ್ಪುಗಾರರ ಪರೀಕ್ಷೆಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯ ಅಭ್ಯರ್ಥಿಗಳಿಗೆ ಅವಕಾಶವಿದ್ದು, ಇವರು 18ರಿಂದ 50 ವರ್ಷದೊಳಗಿನ ವಯೋಮಿತಿ ಹೊಂದಿರಬೇಕು. 10ನೇ ತರಗತಿ ತೇರ್ಗಡೆಯಾಗಿರಬೇಕು. ಆಸಕ್ತರು ಫೆ.4ರಂದು ಬೆಳಗ್ಗೆ 9 ಗಂಟೆಗೆ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಮೊ.ಸಂಖ್ಯೆ 9591933699 ಅಥವಾ 9902435251 ಸಂಪರ್ಕಿಸಬಹುದು.

ನಂದಿನಿ–ಅಮುಲ್ ವಿಲೀನ ಪ್ರಸ್ತಾಪಕ್ಕೆ ಜೆಡಿಎಸ್ ಆಕ್ರೋಶ

ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಪ್ರತಿಭಟನೆ: ಡಿಸಿ ಕಚೇರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ





ಕೆಎಂಎಫ್–ಅಮುಲ್ ವಿಲೀನಗೊಳಿಸುವ ಪ್ರಸ್ತಾಪ ಖಂಡಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಜೆಡಿಎಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು(ಎಡಚಿತ್ರ). ಶಾಸಕರಾದ ಜಿ.ಟಿ.ದೇವೇಗೌಡರು, ಸಿ.ಎನ್.ಮಂಜೇಗೌಡ ಇನ್ನಿತರ ಮುಖಂಡರಿಂದ ಎಡಿಸಿ ಮಂಜುನಾಥಸ್ವಾಮಿ ಮನವಿ ಸ್ವೀಕರಿಸಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.9(ಎಸ್‌ಬಿಡಿ)– ಕರ್ನಾಟಕ ಹಾಲು ಮಹಾಮಂಡಳ(ಕೆಎಂಎಫ್–ನಂದಿನಿ)ವನ್ನು ಗುಜರಾತ್‌ನ ಅಮುಲ್ ಒಕ್ಕೂಟದೊಂದಿಗೆ ವಿಲೀನಗೊಳಿಸುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಜೆಡಿಎಸ್ ಮೈಸೂರು ನಗರ ಹಾಗೂ ಜಿಲ್ಲಾ ಘಟಕ ಈ ಪ್ರಸ್ತಾಪಕ್ಕೆ ಸಾರಾಸಗಟಾಗಿ ಖಂಡಿಸಿವೆ.

ಶಾಸಕ ಜಿ.ಟಿ.ದೇವೇಗೌಡರು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಜೆಡಿಎಸ್‌ನ ನಾಯಕರು, ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿ, ಕೆಎಂಎಫ್ ಹಾಗೂ ಅಮುಲ್ ವಿಲೀನಗೊಳಿಸುವ ಬಿಜೆಪಿ ಚಿಂತನೆ ಖಂಡನೀಯ ಎಂದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಇದೇ ವೇಳೆ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಮನವಿ ಸ್ವೀಕರಿಸಿ, ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುವುದಾಗಿ ತಿಳಿಸಿದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಕೇಂದ್ರ ಸಹಕಾರ ಸಚಿವರೂ ಆದ ಗೃಹಮಂತ್ರಿ ಅಮಿತ್ ಷಾ ಅವರು ಮಂಡ್ಯದ ಮೆಗಾ ಡೈರಿ ಉದ್ಘಾಟನೆ ಸಂದರ್ಭದಲ್ಲಿ ಕೆಎಂಎಫ್ ಹಾಗೂ ಅಮುಲ್ ವಿಲೀನಗೊಳಿಸಿದರೆ ಮತ್ತಷ್ಟು ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಿಸಿದ್ದು, ಇದರಿಂದ ನಮ್ಮ ರಾಜ್ಯದ ಲಕ್ಷಾಂತರ ಹಾಲು ಉತ್ಪಾದಕರ ಮನಸ್ಸಿಗೆ ಘಾಸಿಯಾಗಿದೆ. ರಾಜ್ಯದಲ್ಲಿ ಪ್ರಸ್ತುತ ನಿತ್ಯ 1 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಈ ಮೂಲಕ ಲಕ್ಷಾಂತರ ರೈತರ ಬದುಕು ಹಸನಾಗಿದೆ ಎಂದರು.

ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ಹಾಗೂ ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣನವರು ಕೆಎಂಎಫ್ ಅಧ್ಯಕ್ಷರಾಗಿದ್ದಾಗ ಸಾಕಷ್ಟು ಮಹತ್ವದ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಕೆಎಂಎಫ್ ಸ್ವತಂತ್ರವಾಗಿ ಮುನ್ನಡೆಯುತ್ತಿದೆ. ಕೆಎಂಎಫ್ ಎಂದೂ ಸ್ವತಂತ್ರವಾಗಿಯೇ ಕಾರ್ಯ ನಿರ್ವಹಿಸಬೇಕು. ಅದನ್ನು ಬೇರೊಂದು ಒಕ್ಕೂಟದೊಂದಿಗೆ ವಿಲೀನಗೊಳಿಸಿದರೆ ಹಾಲು ಉತ್ಪಾದಕರ ಬದುಕು ಹಾಳಾಗುತ್ತದೆ. ಆ ಪರಿಸ್ಥಿತಿ ಬಂದೊದಗಲು ಅವಕಾಶ ನೀಡಬಾರದು ಎನ್ನುವ ಕಾರಣಕ್ಕೆ ವರಿಷ್ಠರಾದ ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ, ಪಕ್ಷದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರ ಮಾರ್ಗದರ್ಶನದಂತೆ ಬಿಜೆಪಿ ಚಿಂತನೆಯನ್ನು ಖಂಡಿಸಿ ರಾಜ್ಯಾದ್ಯಂತ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ಸರ್ಕಾರಕ್ಕೆ ಧಿಕ್ಕಾರ ವ್ಯಕ್ತಪಡಿಸಲಾಗಿದೆ. ಈ ನಿಟ್ಟಿನಲ್ಲಿ ತೆರೆಮರೆಯಲ್ಲಿ ಏನಾದರೂ ಮುಂದುವರೆಯುವ ಪ್ರಯತ್ನ ನಡೆಸಿದರೆ ಮುಂದಿನ ದಿನಗಳಲ್ಲಿ ರೈತರು, ಹಾಲು ಉತ್ಪಾದಕರೊಂದಿಗೆ ಭಾರೀ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಜೆಡಿಎಸ್ ಎಂದಿಗೂ ರೈತರ ಪರ. ಆದರೆ ಬಿಜೆಪಿ ಸರ್ಕಾರ ರೈತರ ವಿರೋಧಿ ಎನ್ನುವುದು ಪದೇ ಪದೆ ಸಾಬೀತಾಗುತ್ತಿದೆ. ಕೆಎಂಎಫ್ ಹಾಗೂ ಅಮುಲ್ ವಿಲೀನಗೊಂಡರೆ ರಾಜ್ಯಕ್ಕೆ ಆಪತ್ತಿದೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಅವರು ಗಂಭೀರವಾಗಿ ತಿಳಿಸಿದ್ದಾರೆ. ಯಾವ ಕಾರಣಕ್ಕೂ ಹಾಲು ಉತ್ಪಾದಕರಿಗೆ ಅನ್ಯಾಯವಾಗಲು ಬಿಡಬಾರದು ಎಂಬುದು ಅವರ ಉದ್ದೇಶವಾಗಿದೆ. ಸರ್ಕಾರ ಈ ಬಗ್ಗೆ ಚಿಂತನೆಯನ್ನೇ ಮಾಡಬಾರದಿತ್ತು ಎಂದು ಹೇಳಿದರು.

ಜೆಡಿಎಸ್ ಮೈಸೂರು ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿ ಪಿ.ಎಸ್.ರಾಜಶೇಖರ ಮೂರ್ತಿ, ಮಹಿಳಾ ಘಟಕದ ಅಧ್ಯಕ್ಷೆ ಎಸ್.ಪ್ರೇಮಾ ಶಂಕರೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್.ಲಿಂಗಪ್ಪ, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ರುಷಿ ಅಶ್ವಿನಿ ಅನಂತು, ರಮೇಶ್, ಮುಖಂಡರಾದ ಎಂ.ಎನ್.ರಾಮು ಆರ್.ಇಂದಿರಾ, ಶ್ರೀನಿವಾಸ್, ಸಿ.ಗಂಗಾಧರಗೌಡ, ವಿ.ನಾರಾಯಣ್, ಫಾಲ್ಕನ್ ಬೋರೇಗೌಡ, ಮಂಜುನಾಥ್, ಭಾಗ್ಯ ರಮೇಶ್, ಮಹೇಶ್, ರಿಜ್ವಾನ್ ಅಹಮದ್ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ನಂದಿನಿ' ಕನ್ನಡ ನಾಡಿನ ಅಸ್ಮಿತೆ

ಕೆಎಂಎಫ್ ಹಾಗೂ ಅಮುಲ್ ವಿಲೀನಗೊಳಿಸುವ ಅಮಿತ್ ಷಾ ಅವರ ಹೇಳಿಕೆ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿದೆ. ವಿವಿಧ ವೇದಿಕೆ, ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾಗುತ್ತಿದೆ. 'ನಂದಿನಿ' ನಾಡಿನ ಅಸ್ಮಿತೆ. ಕನ್ನಡಿಗರ ಭಾವನೆ–ಬದುಕು. ಕೆಎಂಎಫ್ 14 ಜಿಲ್ಲಾ ಹಾಲು ಒಕ್ಕೂಟಗಳನ್ನು ಒಳಗೊಂಡ ಒಂದು ಬೃಹತ್ ಸಂಸ್ಥೆ. ಒಟ್ಟು 24.36 ಲಕ್ಷ ಹಾಲು ಉತ್ಪಾದಕರು ಸದಸ್ಯರಾಗಿದ್ದಾರೆ. ಹಾಲು, ಮೊಸರು, ಮಜ್ಜಿಗೆ, ಲಸ್ಸಿ, ತುಪ್ಪ, ಬೆಣ್ಣೆ, ನಾನಾ ರೀತಿಯ ಹತ್ತು ಹಲವು ಸಿಹಿ ತಿಂಡಿ, ಐಸ್‌ಕ್ರೀಂ, ಚಾಕೊಲೇಟ್, ಇನ್ನಿತರ ಉತ್ಪನ್ನ ತಯಾರಿಸಿ ರಾಜ್ಯದೆಲ್ಲೆಡೆ ಮಾತ್ರವಲ್ಲದೆ ಹೊರ ರಾಜ್ಯಗಳಲ್ಲೂ ಮಾರಾಟ ಮಾಡಲಾಗುತ್ತಿದೆ. ದ್ವೀಪರಾಷ್ಟ್ರ ಮಾರಿಷಿಯಸ್, ಮಾಲ್ಡೀವ್ಸ್ ದೇಶಗಳಿಗೆ ಕೆನೆ ರಹಿತ ಹಾಲು ರಫ್ತು ಮಾಡಲಾಗುತ್ತಿದೆ. ಯೋಧರಿಗೆ ಗುಡ್‌ಲೈಫ್ ಗಟ್ಟಿ ಹಾಲು ಒದಗಿಸುತ್ತಿದೆ. ಪ್ರಸ್ತುತ ಪ್ರತಿನಿತ್ಯ 85 ಲಕ್ಷಕ್ಕೂ ಅಧಿಕ ಲೀಟರ್ ಹಾಲು ಶೇಖರಣೆಯಾಗುತ್ತಿದೆ. 8 ಲಕ್ಷಕ್ಕಿಂತ ಹೆಚ್ಚು ರಾಸುಗಳನ್ನು ಗುಂಪು ವಿಮೆಗೆ ಒಳಪಡಿಸಲಾಗಿದೆ. ಮಂಡಳಿ ಹಾಗೂ ಜಿಲ್ಲಾ ಒಕ್ಕೂಟಗಳ ಮೂಲಕ ರಿಯಾಯಿತಿ ದರದಲ್ಲಿ ಪೌಷ್ಟಿಕ ಪಶು ಆಹಾರ ಪೂರೈಸುತ್ತಿದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆ ಸದೃಢತೆಗೆ ಹೈನು ಉದ್ಯಮ ದೊಡ್ಡ ವರದಾನವಾಗಿದೆ. ಕೆಎಂಎಫ್ ವಾರ್ಷಿಕ ವಹಿವಾಟು 20 ಸಾವಿರ ಕೋಟಿ ರೂ. ಮೀರಿದೆ. ಕೆಎಂಎಫ್ ಹಾಗೂ ಅಮುಲ್ ವಿಲೀನಗೊಳಿಸಿದರೆ ಕಾರ್ಯವ್ಯಾಪ್ತಿ ವಿಸ್ತಾರವಾಗಿ ಆಯಾ ರಾಜ್ಯಗಳು ನಿಯಂತ್ರಣ ಕಳೆದುಕೊಳ್ಳುತ್ತವೆ. ಸರ್ಕಾರದ ಅನುದಾನ, ಸಹಾಯ ಧನ, ಷೇರು ಹಣ, ಸಾಲ ಸೌಲಭ್ಯಕ್ಕೆ ತೊಡಕಾಗುತ್ತದೆ. ವಿಲೀನಗೊಳಿಸುವ ಪ್ರಸ್ತಾವನೆ ಇಲ್ಲ ಎಂದು ಸರ್ಕಾರ ಸಮಜಾಯಿಷಿ ನೀಡಿದ್ದರೂ ಜನರಲ್ಲಿರುವ ಅನುಮಾನ ಪರಿಹರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಬ್ಯಾಂಕಿಂಗ್ ಉದ್ಯಮದಲ್ಲಿ ಮುಂಚೂಣಿಯಲ್ಲಿದ್ದ ಕರ್ನಾಟಕ ಮೂಲದ ಬ್ಯಾಂಕ್‌ಗಳು ಇಲ್ಲದಂತಾದವು. ಆದರೆ ಕೆಎಂಎಫ್‌ಗೆ ಆ ಪರಿಸ್ಥಿತಿ ಬರಬಾರದು. ವಿಲೀನಗೊಳಿಸುವ ನಿಟ್ಟಿನಲ್ಲಿ ತೆರೆಮರೆಯಲ್ಲಿ ಪ್ರಯತ್ನ ನಡೆಸಿದರೆ ಭಾರೀ ಪ್ರತಿಭಟನೆ ನಿಶ್ಚಿತ ಎಂದು ಮುಖ್ಯಮಂತ್ರಿಗಳಿಗೆ ಜೆಡಿಎಸ್ ಸಲ್ಲಿಸಿರುವ ಪತ್ರದಲ್ಲಿ ಎಚ್ಚರಿಸಲಾಗಿದೆ.

ಮೈಸೂರು ಮಿತ್ರ ಮಂಗಳವಾರ 10 ಜನವರಿ 2023

ಚಿರತೆಗಳ ದಾಳಿಗೆ 9 ಮೇಕೆಗಳು ಬಲಿ



ಪಾಂಡವಪುರ, ಜ.9– ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಮೇಕೆಗಳ ಮೇಲೆ ದಾಳಿ ಮಾಡಿರುವ ಚಿರತೆಗಳ ಹಿಂಡು 9 ಮೇಕೆಗಳನ್ನು ಬಲಿ ಪಡೆದು, 8 ಮೇಕೆಗಳನ್ನು ಗಾಯಗೊಳಿಸಿ, ನಾಲ್ಕು ಮೇಕೆಗಳನ್ನು ಹೊತ್ತೊಯ್ದಿರುವ ಘಟನೆ ತಾಲೂಕಿನ ಗಿರಿಯಾರಹಳ್ಳಿ ಗ್ರಾಮದಲ್ಲಿ ಭಾನುವಾರ ಮಧ್ಯರಾತ್ರಿ ನಡೆದಿದೆ.

ಗ್ರಾಮದ ನಾಗೇಗೌಡ ಎಂಬುವರಿಗೆ ಸೇರಿದ ಮೇಕೆಗಳ ಮೇಲೆ ಚಿರತೆಗಳು ದಾಳಿ ಮಾಡಿ ಹೊತ್ತೊಯ್ದಿವೆ. ನಾಗೇಗೌಡರು ತಮ್ಮ ಮನೆ ಪಕ್ಕದಲ್ಲೇ ಕೊಟ್ಟಿಗೆ ನಿರ್ಮಿಸಿ 20ಕ್ಕೂ ಹೆಚ್ಚು ಮೇಕೆಗಳನ್ನು ಸಾಕುತ್ತಿದ್ದರು. ಎಂದಿನಂತೆ ಭಾನುವಾರ ರಾತ್ರಿಯೂ ಮೇಕೆಗಳನ್ನು ಕೊಟ್ಟಿಗೆಯಲ್ಲಿ ಕಟ್ಟಲಾಗಿತ್ತು. ಮಧ್ಯರಾತ್ರಿ ಕೊಟ್ಟಿಗೆಗೆ ನುಗ್ಗಿರುವ ಮೂರ್‍ನಾಲ್ಕು ಚಿರತೆಗಳ ಹಿಂಡು ಮೇಕೆಗಳ ಮೇಲೆ ದಾಳಿ ನಡೆಸಿವೆ. ಈ ವೇಳೆ ಮೇಕೆಗಳ ಕೂಗಾಟದಿಂದ ರೈತ ನಾಗೇಗೌಡ ಮನೆಯಿಂದ ಹೊರ ಬಂದರಾದರೂ, ಅಷ್ಟರಲ್ಲಿ ಚಿರತೆಗಳು 9 ಮೇಕೆಗಳನ್ನು ಬಲಿ ಪಡೆದು, 8 ಮೇಕೆಗಳನ್ನು ಗಾಯಗೊಳಿಸಿ, ನಾಲ್ಕು ಮೇಕೆಗಳನ್ನು ಹೊತ್ತೊಯ್ದು, ನಾಲ್ಕೈದು ಕೋಳಿಗಳನ್ನು ತಿಂದು ಪರಾರಿಯಾಗಿದ್ದವು. ಘಟನೆಯಲ್ಲಿ ಗಾಯಗೊಂಡಿರುವ 8 ಮೇಕೆಗಳು ಸಹ ಸಾಯುವ ಸ್ಥಿತಿಯಲ್ಲಿವೆ. ಇದರಿಂದ ರೈತ ನಾಗೇಗೌಡ ಕಂಗಾಲಾಗಿದ್ದು, ಆತಂಕಕ್ಕೆ ಒಳಗಾಗಿದ್ದಾರೆ.

ಸಿಎಸ್‌ಪಿ ಭೇಟಿ: ಚಿರತೆ ದಾಳಿ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶಾಸಕ ಸಿ.ಎಸ್.ಪುಟ್ಟರಾಜು ಪರಿಶೀಲಿಸಿದರು. ಕೂಡಲೇ ಅರಣ್ಯಾಧಿಕಾರಿಗಳಿಗೆ ಕರೆ ಮಾಡಿದ ಶಾಸಕರು ಚಿರತೆ ದಾಳಿಯಿಂದ ಮೇಕೆಗಳನ್ನು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡಬೇಕು. ಅಲ್ಲದೇ ಚಿರತೆಗಳ ಸೆರೆಗೆ ಬೋನು ಅಳವಡಿಸುವಂತೆ ಸೂಚನೆ ನೀಡಿದರು.

ಸ್ಥಳಕ್ಕೆ ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಸಾವನ್ನಪ್ಪಿದ್ದ ಮೇಕೆಗಳ ಪರೀಕ್ಷೆ ನಡೆಸಿ, ಗಾಯಗೊಂಡ ಮೇಕೆಗಳಿಗೆ ಚಿಕಿತ್ಸೆ ಕೊಡಿಸಲಾಯಿತು. ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ಮಾತನಾಡಿ, ಸ್ಥಳದಲ್ಲಿ ಚಿರತೆ ಹೆಜ್ಜೆ ಗುರುತು ಕಂಡು ಬಂದಿದ್ದು, ಚಿರತೆಗಳು ದಾಳಿ ನಡೆಸಿರುವುದು ಖಾತ್ರಿಯಾಗಿದೆ. ಇಲಾಖೆಯಿಂದ ರೈತನಿಗೆ ಸೂಕ್ತ ಪರಿಹಾರ ದೊರಕಿಸಿಕೊಡಲಾಗುವುದು. ಚಿರತೆ ದಾಳಿ ನಡೆಸಿ ಎತ್ತಿಕೊಂಡು ಹೋಗಿರುವ ಮೇಕೆಗಳ ಪತ್ತೆಗೆ ಸಾಕಷ್ಟು ಹುಡುಕಾಟ ನಡೆಸಲಾಗಿದೆ. ಚಿರತೆ ದಾಳಿ ನಡೆಸಿರುವ ಜಾಗದಲ್ಲಿಯೇ ಚಿರತೆ ಸೆರೆಗೆ 2 ಬೋನ್‌ಗಳನ್ನು ಇಡಲಾಗಿದೆ ಎಂದರು.

ಆತಂಕ: ಘಟನೆಯಿಂದ ಗಿರಿಯಾರಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಚಿರತೆ ದಾಳಿಯಿಂದ ಮೇಕೆಗಳು ಸಾವನ್ನಪ್ಪಿವೆ. ಹೀಗಾಗಿ ಕೂಡಲೇ ಅರಣ್ಯಾಧಿಕಾರಿಗಳು ಚಿರತೆ ಸೆರೆಗೆ ಕ್ರಮ ವಹಿಸಬೇಕು ಎಂದು ಆಗ್ರಹಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಪಾಂಡವಪುರ, ಜ.9– ತಾಲೂಕಿನ ಅರಕನಕೆರೆಯಲ್ಲಿ ಲೋಕೋಪಯೋಗಿ ಇಲಾಖೆಯ 1.5 ಕೋಟಿ ವೆಚ್ಚದ ಮಂಡ್ಯ ಮುಖ್ಯರಸ್ತೆಯಿಂದ ಅರಕನಕೆರೆ ಗ್ರಾಮ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನ ಅರಕನಕೆರೆ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಗುಂಡಿ ಬಿದ್ದಿತ್ತು. ಗ್ರಾಮಸ್ಥರು ರಸ್ತೆ ಅಭಿವೃದ್ಧಿಪಡಿಸುವಂತೆ ಮಾಡಿದ ಮನವಿ ಮೇರೆಗೆ ಲೋಕೋಪಯೋಗಿ ಇಲಾಖೆಯಿಂದ 1.50 ಕೋಟಿ ಅನುದಾನ ಬಿಡುಗಡೆ ಮಾಡಿಸಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದರು.

ಕ್ಷೇತ್ರದಲ್ಲಿ 3ನೇ ಬಾರಿಗೆ ಶಾಸಕನಾಗಿ, ಸಚಿವನಾದ ಬಳಿಕ ಕ್ಷೇತ್ರದಲ್ಲಿ ನೀರಾವರಿ ಹಾಗೂ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒತ್ತು ಕೊಟ್ಟು ಕೆಲಸ ಮಾಡಿದ್ದೇನೆ. ಗ್ರಾಮೀಣ ಪ್ರದೇಶದ ಬಹುತೇಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನಷ್ಟು ರಸ್ತೆಗಳ ಅಭಿವೃದ್ಧಿಗೆ ಲೋಕೋಪಯೋಗಿ ಸಚಿವರಿಂದ ಅನುದಾನ ಬಿಡುಗಡೆ ಮಾಡಿಸಿಕೊಂಡು ಬರಲಾಗಿದ್ದು, ಕ್ಷೇತ್ರದಲ್ಲಿ ಗುಂಡಿ ಬಿದ್ದಿರುವ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಜನರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಮೇಲುಕೋಟೆ ಹೋಬಳಿ ನೀರಾವರಿಯಿಂದ ವಂಚಿತವಾಗಿತ್ತು. ಅದಕ್ಕಾಗಿ ನಾನು ಸಚಿವನಾದ ಬಳಿಕ ಬಳಘಟ್ಟ ಏತ ನೀರಾವರಿ ಯೋಜನೆ ಮಾಡುವ ಮೂಲಕ ಕಾವೇರಿ ನದಿಯಿಂದ ನೀರು ತಂದು ಈ ಭಾಗದ ಕೆರೆಗಳ ತುಂಬಿಸಿ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಮುಂದಿನ ದಿನಗಳಲ್ಲೂ ಸಹ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ ಎಂದರು.

ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕರಾದ ರಾಮಕೃಷ್ಣೇಗೌಡ, ಬೆಟ್ಟಸ್ವಾಮೀಗೌಡ, ಗ್ರಾಪಂ ಅಧ್ಯಕ್ಷೆ ನಿಂಗಮ್ಮ, ಮಾಜಿ ಉಪಾಧ್ಯಕ್ಷ ಲೋಕೇಶ್, ಸದಸ್ಯ ದಾಸೇಗೌಡ, ವಿಎಸ್ ಎಸ್‌ಎನ್‌ಬಿ ಅಧ್ಯಕ್ಷ ಶಿವಶಂಕರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಶ್ವಥ್ ಕುಮಾರೇಗೌಡ, ಮುಖಂಡ ಆನಂದ್, ಅನಿಲ್ ಕುಮಾರ್, ಮಂಜುನಾಥ್, ಪ್ರಕಾಶ್, ಯಜಮಾನರಾದ ಪರಮೇಶಪ್ಪ, ನರಸಪ್ಪ, ಕರಿಯಪ್ಪ ಸೇರಿದಂತೆ ಹಲವರಿದ್ದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ಬಸ್ ಓವರ್‌ಟೇಕ್ ಮಾಡಲು ಹೋಗಿ ದುರಂತ

ಶ್ರೀರಂಗಪಟ್ಟಣ, ಜ.9– ಕೆಎಸ್‌ಆರ್‌ಟಿಸಿ ಬಸ್ ಮತ್ತೊಂದು ಬಸ್ಸನ್ನು ಓವರ್‌ಟೇಕ್ ಮಾಡಲು ಹೋಗಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಕೆ.ಆರ್.ಸಾಗರ–ಮೈಸೂರು ಮುಖ್ಯರಸ್ತೆಯ ಮೊಗರಹಳ್ಳಿ (ಮಂಟಿ) ಬಳಿ ಸೋಮವಾರ ಮಧ್ಯಾಹ್ನ ನಡೆದಿದೆ.



ಮೊಗರಹಳ್ಳಿ ಗ್ರಾಮದ ಅರವಿಂದ್(27) ಸಾವನ್ನಪ್ಪಿದವರು. ಈತ ಮೈಸೂರಿನ ಬೆಳಗೊಳದಲ್ಲಿರುವ ಖಾಸಗಿ ಕಂಪನಿ ಉದ್ಯೋಗಿಯಾಗಿದ್ದು, ಇಂದು ಮಧ್ಯಾಹ್ನ ಕೆಲಸ ಮುಗಿಸಿಕೊಂಡು ತನ್ನ ಸ್ನೇಹಿತ ನವೀನ್ ಜೊತೆ ಬೈಕ್‌ನಲ್ಲಿ ಬರುವಾಗ ಮೈಸೂರಿನಿಂದ–ಕೆಆರ್‌ಎಸ್‌ಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮತ್ತೊಂದು ಬಸ್ ಅನ್ನು ಓವರ್‌ಟೇಕ್ ಮಾಡಲು ಹೋಗಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಬಸ್ ಬಂಪರ್‌ಗೆ ಸಿಲುಕಿದ ಬೈಕ್ ಅನ್ನು ಸಾಕಷ್ಟು ದೂರ ಎಳೆದೊಯ್ದಿದೆ. ಪರಿಣಾಮ ತೀವ್ರ ಗಾಯಗೊಂಡ ಅರವಿಂದ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಗಾಯಗೊಂಡ ನವೀನ್‌ನನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ಎಸ್ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ: ಈ ವೇಳೆ ಸ್ಥಳದಲ್ಲಿ ಜಮಾಯಿಸಿದ ಸಾರ್ವಜನಿಕರು ಹಾಗೂ ಅರವಿಂದ್ ಕುಟುಂಬದ ಸದಸ್ಯರು ರಸ್ತೆ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರಲ್ಲದೇ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಅಲ್ಲದೇ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಮೈಸೂರು ವಿಭಾಗದ ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಪ್ರತಿಭಟನಾಕಾರರ ಮನವಿ ಆಲಿಸಿ, ನಿಮ್ಮ ಬೇಡಿಕೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ವಿವಿಧೆಡೆ ಎನ್‌ಡಿಆರ್‌ಎಫ್‌ನಿಂದ ವಿಪತ್ತು ನಿರ್ವಹಣೆ ಅರಿವು

ಕಾರ್ಯಕ್ರಮ ಸದುಪಯೋಗಕ್ಕೆ ಡಿಸಿ ಡಾ:ಹೆಚ್.ಎನ್ ಗೋಪಾಲಕೃಷ್ಣ ಮನವಿ



ಮಂಡ್ಯ, ಜ.9– ನೆರೆ, ಬೆಂಕಿ ಅವಘಡ, ಭೂಕಂಪ ಮುಂತಾದ ವಿಪತ್ತುಗಳು ಯಾವಾಗ ಸಂಭವಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಇಂತಹ ಸಂದರ್ಭ ವಿವೇಚನೆ ಹಾಗೂ ಸಮಯಪ್ರಜ್ಞೆಯಿಂದ ಜೀವ ಉಳಿಸಬಹುದು. ಅಲ್ಲದೇ ಮುಂದೆ ಆಗುವ ದೊಡ್ಡ ಅನಾಹುತ ತಪ್ಪಿಸಬಹುದು. ಎನ್‌ಡಿಆರ್‌ಎಫ್ ತಂಡದವರು ಜಿಲ್ಲೆಯಲ್ಲಿ ಜ.10ರಿಂದ 21ರವರೆಗೆ ವಿವಿಧ ಸ್ಥಳಗಳಲ್ಲಿ ವಿಪತ್ತು ನಿರ್ವಹಣೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದು, ವಿದ್ಯಾರ್ಥಿಗಳು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಫೇಮಕ್ಸ್ ವಿಪತ್ತು ನಿರ್ವಹಣೆ ಜಾಗೃತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ನಾಲೆಗಳು ಹೆಚ್ಚಿದ್ದು, ಇತ್ತೀಚಿನ ದಿನಗಳಲ್ಲಿ ನೆರೆ ಪರಿಸ್ಥಿತಿ ಹೆಚ್ಚಿದೆ. ನೆರೆ, ಬೆಂಕಿ ಅನಾಹುತ, ಅಪಘಾತದಲ್ಲಿ ರಕ್ತಸ್ರಾವ, ನೀರಿನಲ್ಲಿ ಮುಳುಗಡೆಯಾದ ವ್ಯಕ್ತಿ ರಕ್ಷಿಸುವ ಸಂದರ್ಭ, ಸ್ವಯಂ ರಕ್ಷಣೆ ಕಲೆಗಳ ಬಗ್ಗೆ ಜಾಗೃತಿ ಮೂಡಿಸಿ ಎಂದರು.

ವಿದ್ಯಾರ್ಥಿಗಳಿಗೆ ಜ.10 ರಂದು ನಗರದ ಕಲ್ಲು ಕಟ್ಟಡ ಸರ್ಕಾರಿ ಬಾಲಕಿಯರ ಕಾಲೇಜು, ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗೆ ಜ.16ರಂದು ಹರ್ಡಿಕರ್ ಭವನದಲ್ಲಿ, ಯುವ ಜನರಿಗೆ ಜ.20 ರಂದು ನೆಹರು ಯುವ ಕೇಂದ್ರದಲ್ಲಿ ಅರಿವು ಕಾರ್ಯಕ್ರಮ ಆಯೋಜಿಸಲಾಗುವುದು. ಸಮುದಾಯ ಹಾಗೂ ಸಾರ್ವಜನಿಕರಿಗೆ ಜ.12 ರಂದು ಪಾಂಡವಪುರ ತಾಲೂಕಿನ ಸುಂಕತೊಣ್ಣೂರು ಗ್ರಾಪಂ, ಜ.13 ರಂದು ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಪಂ, ಜ.18 ರಂದು ಮಳವಳ್ಳಿ ತಾಲೂಕಿನ ಹಲಗೂರು ಗ್ರಾಪಂನಲ್ಲಿ ನಡೆಯಲಿದೆ.

ಜ.11 ರಂದು ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿಯಲ್ಲಿ, ಜ.17ರಂದು ಕೆ.ಆರ್.ಪೇಟೆಯ ಐಸಿಎಲ್ ಕಾರ್ಖಾನೆಯಲ್ಲಿ, ಜ.19ರಂದು ಕೆಆರ್‌ಎಸ್‌ನಲ್ಲಿ ನಡೆಯಲಿದೆ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿಸುವಂತೆ ಅಧಿಕಾರಿಗಳು ತಿಳಿಸಿದರು.

ಎನ್‌ಡಿಆರ್‌ಎಫ್ ಅಧಿಕಾರಿಗಳೊಂದಿಗೆ ಕಂದಾಯ, ಅಗ್ನಿಶಾಮಕ ದಳ, ಆರೋಗ್ಯ, ಶಿಕ್ಷಣ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಶಾಂತ ಎಲ್ ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್ ನಾಗರಾಜ್, ಎನ್‌ಡಿಆರ್‌ಎಫ್ ಅಧಿಕಾರಿ ದೇವರಾಜ್, ಜಿ.ಎಲ್.ಅಕಾಶ್, ಶಿವಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಧನಂಜಯ್, ಅಗ್ನಿಶಾಮಕ ಅಧಿಕಾರಿ ಗುರುರಾಜ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ ಸೇರಿದಂತೆ ಇನ್ನಿತರಿದ್ದರು.

ಆಲಂಬಾಡಿಕಾವಲು ಗ್ರಾಪಂಗೆ ಕರಿಶೆಟ್ಟಿ ಪ್ರಭಾರ ಅಧ್ಯಕ್ಷ



ಕೆ.ಆರ್.ಪೇಟೆ, ಜ.9– ತಾಲೂಕಿನ ಆಲಂಬಾಡಿಕಾವಲು ಗ್ರಾಪಂ ಪ್ರಭಾರ ಅಧ್ಯಕ್ಷರಾಗಿ ಎ.ಟಿ.ಕರಿಶೆಟ್ಟಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಜೆ.ಸುಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಉಪಾಧ್ಯಕ್ಷ ಎ.ಟಿ.ಕರಿಶೆಟ್ಟಿ ಅವರನ್ನು ಪ್ರಭಾರ ಅಧ್ಯಕ್ಷರಾಗಿ ನೇಮಕ ಮಾಡಿ, ನೂತನ ಅಧ್ಯಕ್ಷರ ಆಯ್ಕೆವರೆಗೆ ಅಧಿಕಾರ ನಡೆಸುವಂತೆ ಪಾಂಡವಪುರ ಎಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ಸೋಮವಾರ ಎ.ಟಿ.ಕರಿಶೆಟ್ಟಿ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಜೆಡಿಎಸ್ ಮುಖಂಡರಾದ ಎ.ಆರ್.ರಘು, ಎ.ಎಂ.ಸಂಜೀವಪ್ಪ, ಮಂಜೇಗೌಡ, ನಾರಾಯಣ್, ತುಳಸೀರಾಂ, ಇಷ್ರತ್ ಪಾಷಾ, ಎಂ.ಮೋಹನ್, ಸ್ವಾಮೀಗೌಡ, ಗ್ರಾಪಂ ಸದಸ್ಯರಾದ ಜೆ.ಸುಮ, ಚಂದ್ರಕಲಾ, ಮುಜಾಹಿದ್ ಖಾನ್, ರೂಪಾ, ಎ.ರಾಜು, ನಾಗೇಶ್, ಬಿ.ಜೆ.ವೆಂಕಟೇಶ್, ವೇದಾಂಬ, ಜಿ.ಪಿ.ಶ್ರೀನಿವಾಸ್, ಕಾರ್ಯದರ್ಶಿ ಮಹಮದ್ ಇಮ್ರಾನ್, ಬಿಲ್ ಕಲೆಕ್ಟರ್ ಪಿ.ಅಶೋಕ್ ಇತರರಿದ್ದರು.

ಪ್ರಭಾರ ಅಧ್ಯಕ್ಷ ಎ.ಟಿ.ಕರಿಶೆಟ್ಟಿ ಮಾತನಾಡಿ, ಸದಸ್ಯರು ಹಾಗೂ ಅಧಿಕಾರಿಗಳ ಸಹಕಾರದಿಂದ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಉದ್ಯೋಗ ಖಾತ್ರಿ ಯೋಜನೆ ಮೂಲಕ ಕೃಷಿ ಹೊಂಡಗಳ ನಿರ್ಮಾಣ, ಜಾನುವಾರು ತೊಟ್ಟಿಗಳು, ಕೊಟ್ಟಿಗೆಗಳ ನಿರ್ಮಾಣ, ಜಮೀನು ಅಭಿವೃದ್ಧಿ, ಕೆರೆ ಕಟ್ಟೆಗಳ ಹೂಳೆತ್ತುವುದು, ಅಂತರ್ಜಲ ವೃದ್ಧಿಗೆ ಚೆಕ್ ಡ್ಯಾಮ್‌ಗಳ ನಿರ್ಮಾಣ, ಇಂಗುಗುಂಡಿಗಳ ನಿರ್ಮಾಣ, ಮಳೆನೀರು ಸಂಗ್ರಹಿಸುವುದು. ಸಸಿಗಳನ್ನು ನೆಟ್ಟು ತೋಪುಗಳನ್ನು ನಿರ್ಮಿಸುವುದು ಸೇರಿದಂತೆ ಹತ್ತಾರು ಕಾಮಗಾರಿ ಮಾಡುವುದಾಗಿ ತಿಳಿಸಿದರು.

ಒಂದನೇ ಪುಟದಿಂದ

ದೇವಿಕೆರೆ ಪುನರ್‌ಜೀವನಗೊಳಿಸುವ ಕಾರ್ಯ ಆರಂಭ



ಮಾಡಿ ಅಂದಗೊಳಿಸುವ ಕಾರ್ಯಯೋಜನೆ ರೂಪಿಸಲಾಗಿದೆ. ಅದರಂತೆ ಇದೀಗ ಹೂಳೆತ್ತುವ ಕಾಮಗಾರಿ ಭರದಿಂದ ಸಾಗಿದೆ.

ತುಂಬಿ ತುಳುಕಿದ್ದ ದೇವಿಕೆರೆ: ಮೈಸೂರು ಭಾಗದಲ್ಲಿ ಕಳೆದ 3–4 ವರ್ಷದಿಂದ ಉತ್ತಮ ಮಳೆಯಾಗಿದ್ದರಿಂದ ಚಾಮುಂಡಿ ಬೆಟ್ಟದ ದೇವಿಕೆರೆ ತುಂಬಿ ಕೋಡಿ ಬಿದ್ದಿತ್ತು. ಹಾಗಾಗಿ ದೇವಿಕೆರೆ ಉತ್ತನಹಳ್ಳಿ ರಸ್ತೆಯ ಕಡೆಯಿರುವ ಮತ್ತೊಂದು ಕೆರೆಗೂ ನೀರುಣಿಸಿತ್ತು. ಅಲ್ಲದೆ, ಕೆರೆಯಿಂದ ಹೊರ ಹರಿವು ಹೆಚ್ಚಾಗಿದ್ದರಿಂದ ಬೆಟ್ಟದಲ್ಲಿ ಹಲವು ಕಡೆ ಜಲಪಾತಗಳು ಸೃಷ್ಟಿಯಾಗಿದ್ದವು. ದಸರಾ ಬಳಿಕ ಚಾಮುಂಡಿಬೆಟ್ಟದಲ್ಲಿ ನಡೆಯುವ ರಥೋತ್ಸವವೂ ತುಂಬಿದ್ದ ದೇವಿಕೆರೆಯಲ್ಲಿ ವಿಜೃಂಭಣೆಯಿಂದ ನೆರವೇರಿತ್ತು.

ಪಂಪ್ ಮೂಲಕ ನೀರು ತೆರವು: ದೇವಿಕೆರೆಯ ಅಭಿವೃದ್ಧಿ ಕಾಮಗಾರಿಗಾಗಿ ಕೆರೆಯಲ್ಲಿದ್ದ ಅಪಾರ ಪ್ರಮಾಣದ ನೀರನ್ನು ಮೋಟಾರ್ ಬಳಸಿ ಪಂಪ್ ಮಾಡಲಾಗಿದೆ. ದೇವಿಕೆರೆ ಕೋಡಿ ಬೀಳುವ ಸ್ಥಳಕ್ಕೆ ನೀರನ್ನು ಪಂಪ್ ಮಾಡಲಾಗಿದ್ದು, ಆ ನೀರಿನಿಂದ ಉತ್ತನಹಳ್ಳಿ ರಸ್ತೆ ಭಾಗದಲ್ಲಿರುವ ಮತ್ತೊಂದು ಕೆರೆಯನ್ನು ತುಂಬಿಸಲಾಗಿದೆ. ದೇವಿಕೆರೆಯಲ್ಲಿದ್ದ ನೀರನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡಿದ ನಂತರವಷ್ಟೇ ಹೂಳೆತ್ತುವ ಕಾಮಗಾರಿ ಆರಂಭಿಸಲಾಗಿದೆ.

ಹೂಳೆತ್ತುವ ಕಾರ್ಯ ಅಂತಿಮ ಹಂತಕ್ಕೆ: ಕಳೆದ ಎರಡು ತಿಂಗಳಿಂದ ದೇವಿಕೆರೆ ಅಭಿವೃದ್ಧಿ ಕಾರ್ಯ ಆರಂಭಿಸಲಾಗಿದೆ. ಜೆಸಿಬಿಗಳ ಮೂಲಕ ಕೆರೆಯಲ್ಲಿ ತುಂಬಿದ್ದ ಹೂಳನ್ನು ಮೇಲೆತ್ತಲಾಗುತ್ತದೆ. ಹೂಳೆತ್ತುವ ಕಾಮಗಾರಿ ಅಂತಿಮ ಹಂತ ತಲುಪಿದೆ. ಮಾರ್ಚ್ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಂಡು, ಕೆರೆಗೆ ಒಂದು ಹೊಸ ರೂಪ ಬರಲಿದೆ.

ಮೆಟ್ಟಿಲುಗಳ ಪುನರ್ ಜೋಡಣೆ: ದೇವಿಕೆರೆಯ ಸುತ್ತಲೂ ಅಳವಡಿಸಿದ್ದ ಚಪ್ಪಡಿ ಕಲ್ಲಿನ ಮೆಟ್ಟಿಲುಗಳು ಹಲವೆಡೆ ಕುಸಿದಿದ್ದವು. ಕೆಲವೆಡೆ ಚಪ್ಪಡಿ ಕಲ್ಲು ಹಾಗೂ ದಿಂಡುಗಲ್ಲುಗಳು ಕೆರೆಗೆ ಜಾರಿಕೊಂಡಿದ್ದವು. ಅವುಗಳನ್ನು ನೀಟಾಗಿ ಜೋಡಿಸಿ, ಅಂದಗೊಳಿಸುವ ಮೂಲಕ ದೇವಿಕೆರೆಯನ್ನು ಸುಂದರ ತಾಣವಾಗಿಸುವ ಯೋಜನೆ ರೂಪಿಸಲಾಗಿದೆ.

ಮಳೆ, ಒಳಚರಂಡಿ ನೀರಿಗಾಗಿ ಪ್ರತ್ಯೇಕ ಚರಂಡಿ: ಕಳೆದ ಕೆಲ ದಶಕಗಳಿಂದ ದೇವಿಕೆರೆಗೆ ಚಾಮುಂಡಿಬೆಟ್ಟದ ಕೆಲ ಬೀದಿಗಳಿಂದ ಹರಿದು ಬರುತ್ತಿದ್ದ ಚರಂಡಿ ನೀರನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ. ಶಾಶ್ವತವಾಗಿ ದೇವಿಕೆರೆಯ ಪಾವಿತ್ರ್ಯತೆಯನ್ನು ಕಾಪಾಡಲು ಪ್ರತ್ಯೇಕ ಚರಂಡಿ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಇನ್ನು ಮುಂದೆ ಚರಂಡಿ ನೀರು ಕೆರೆಗೆ ಹರಿದು ಹೋಗುವುದಕ್ಕೆ ತಡೆಯೊಡ್ಡಲಾಗಿದೆ.

ಪರಿಸರವಾದಿಗಳ ಆಕ್ಷೇಪ: ದೇವಿಕೆರೆಗೆ ಜೆಸಿಬಿ ಯಂತ್ರಗಳನ್ನು ಇಳಿಸಿ ಕಾಮಗಾರಿ ನಡೆಸುತ್ತಿರುವುದಕ್ಕೆ ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ತಜ್ಞರ ಸಲಹೆ ಪಡೆಯದೇ ಅವೈಜ್ಞಾನಿಕವಾಗಿ ಕಾಮಗಾರಿ ನಡೆಸಲಾಗುತ್ತಿದೆ. ಯಂತ್ರಗಳ ಬಳಕೆಯಿಂದ ಕೆರೆಯಲ್ಲಿನ ನೀರಿನ ಕಣ್ಣು(ಬುಗ್ಗೆ)ಗಳಿಗೆ ಹಾನಿಯುಂಟಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಕೆರೆಯಲ್ಲಿ ನೀರು ಸಂಗ್ರಹವಾಗದೇ ಬತ್ತಿ ಹೋಗುವ ಸಾಧ್ಯತೆ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದು, ಕೆರೆಯಿಂದ ನೀರು ಹೊರ ಹಾಕಿರುವುದು ಅವೈಜ್ಞಾನಿಕ ನಿರ್ಧಾರ. ಕೆರೆ ಬತ್ತಿದ ಸಂದರ್ಭದಲ್ಲಿ ಹೂಳೆತ್ತಬಹುದಾಗಿತ್ತು. ಅದನ್ನು ಹೊರತುಪಡಿಸಿ, ತುಂಬಿದ್ದ ಕೆರೆಯಿಂದ ನೀರನ್ನು ಹೊರ ಹಾಕಿರುವುದು ಖಂಡನೀಯ. ಕೆರೆ ತಳಭಾಗವನ್ನು ಸಮತಟ್ಟಾಗಿ ಮಾಡುವುದರಿಂದ ಜಲಚರಗಳ ಅಸ್ತಿತ್ವಕ್ಕೆ ಹಾನಿಯಾಗಬಹುದು. ಯಾವುದೇ ಕೆರೆಗಳು ಜಲಚರಗಳಿಂದ ಜೀವಂತವಾಗಿ ನಳನಳಿಸಬೇಕಾದರೆ ಕೆರೆಯ ತಳಭಾಗ ಏರುಪೇರುಗಳಿಂದ ಕೂಡಿರಬೇಕು. ಆದರೆ ದೇವಿಕೆರೆಯ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಕ್ರಮಬದ್ಧತೆ ಅನುಸರಿಸುತ್ತಿಲ್ಲ ಎಂದು ದೂರಿದ್ದಾರೆ.

ಸುಂದರ ನೀಲನಕ್ಷೆ: ದೇವಿಕೆರೆಯ ಅಭಿವೃದ್ಧಿ ಯಾವ ರೀತಿ ನಡೆಯಬೇಕೆಂದು ರೂಪಿಸಿರುವ ನೀಲನಕ್ಷೆ ಸುಂದರವಾಗಿದೆ. ಕೆರೆ ಹೂಳೆತ್ತಿದ ಬಳಿಕ, ಕೆರೆ ಸುತ್ತಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗುತ್ತದೆ. ಅಲ್ಲದೆ, ಕೆರೆಗೆ ತಡೆಗೋಡೆ ನಿರ್ಮಾಣ, ಕೆರೆ ಆವರಣದಲ್ಲಿ ಸುತ್ತಲೂ ಅಲಂಕಾರಿಕ ವಿದ್ಯುತ್ ದೀಪ ಅಳವಡಿಸಲು ನಿರ್ಧರಿಸಲಾಗಿದ್ದು, ಅದನ್ನು ನೀಲನಕ್ಷೆಯಲ್ಲೇ ಸೂಚಿಸಲಾಗಿದೆ.

> "ಚಾಮುಂಡೇಶ್ವರಿ ದೇವಾಲಯದ ಪೂಜಾ ವಿಧಿವಿಧಾನದಲ್ಲಿ ದೇವಿಕೆರೆ ಮಹತ್ವದ ಪಾತ್ರವಹಿಸುತ್ತದೆ. ಕಳೆದ ಹಲವು ವರ್ಷಗಳಿಂದ ಕೆರೆಗೆ ಚರಂಡಿ ನೀರು ಸೇರುತ್ತಿತ್ತು. ಇದರಿಂದ ಕೆರೆ ನೀರು ಮಲೀನವಾಗಿರುವ ಬಗ್ಗೆ ಸ್ಥಳೀಯರಿಂದ ದೂರು ಕೇಳಿ ಬಂದಿತ್ತು. ಅಲ್ಲದೆ, ಭಾರೀ ಮಳೆ ಸೇರಿದಂತೆ ಹಲವು ಕಾರಣಗಳಿಂದ ಕೆರೆ ಮೆಟ್ಟಿಲುಗಳು ಶಿಥಿಲಗೊಂಡು ಕುಸಿದಿದ್ದವು. ಇದರಿಂದ ದೇವಿಕೆರೆ ಅಭಿವೃದ್ಧಿ ಕಾರ್ಯ ನಡೆಸುವುದು ಅನಿವಾರ್ಯವಾಗಿತ್ತು. ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೆರೆ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಬೆಟ್ಟದಲ್ಲಿ 76 ಲಕ್ಷ ರೂ. ವೆಚ್ಚದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕದ ಕಾಮಗಾರಿ, ಮುಡಾದಿಂದ 6 ಕೋಟಿ. ರೂ. ವೆಚ್ಚದಲ್ಲಿ ಕುಡಿಯುವ ನೀರು ಪೂರೈಸುವ ಯೋಜನೆಯ ಕಾಮಗಾರಿಯೂ ನಡೆಯುತ್ತಿದೆ.
>
> –ಗೋವಿಂದರಾಜು, ಆಡಳಿತಾಧಿಕಾರಿ, ಚಾಮುಂಡಿಬೆಟ್ಟ ದೇವಾಲಯದ ಆಡಳಿತ ಮಂಡಳಿ

ನಿರ್ಮಾಣಕ್ಕೆ ಪಾಲಿಕೆಗೆ ಭೂಮಿ ಮಂಜೂರು

ಪಾಲಿಕೆಯ ವಲಯ ಕಚೇರಿ–9ರ ಕಟ್ಟಡ ನಿರ್ಮಿಸಲು ಪ್ರಾಧಿಕಾರದ ಗಾಯತ್ರಿಪುರಂ 1ನೇ ಹಂತದಲ್ಲಿ ಅಗತ್ಯ ಭೂಮಿಯನ್ನು ಹರಾಜು ದರ ವಿಧಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ ಎಂದು ತಿಳಿಸಿದರು.

ಕ್ರಿಕೆಟ್ ಸ್ಟೇಡಿಯಂ: ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಪ್ರಾಧಿಕಾರದ ಹಂಚ್ಯಾ ಸಾತಗಳ್ಳಿ 'ಬಿ' ವಲಯದಲ್ಲಿ ಒಟ್ಟು 20 ಎಕರೆ 8 ಗುಂಟೆ ಭೂಮಿ ಗುರುತಿಸಲಾಗಿದೆ. ಪ್ರತಿ ಚದರ ಮೀಟರ್‌ಗೆ 2,100 ರೂ.ನಂತೆ ಒಟ್ಟು 18 ಕೋಟಿ ರೂ.ನಲ್ಲಿ ಗುತ್ತಿಗೆಯಡಿ ನೀಡಲು ತೀರ್ಮಾನಿಸಲಾಗಿದೆ. ಈ ಪೈಕಿ 2 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ಸರ್ಕಾರಿ ಕಟ್ಟೆಯಿದ್ದು, ಈ ಸಂಬಂಧ ಕಂದಾಯ ಇಲಾಖೆಯಿಂದ ಕ್ಲಿಯರೆನ್ಸ್ ಪಡೆಯಬೇಕಿದೆ. ಮಂಜೂರಾತಿ ಆದೇಶ ಹಾಗೂ ದರ ನಿಗದಿ ಬಗ್ಗೆ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ವತಃ ಕ್ರಿಕೆಟಿಗರಾಗಿದ್ದು, ಈ ವಿಚಾರದಲ್ಲಿ ವಿಶೇಷ ಆಸಕ್ತಿ ವಹಿಸಿದ್ದಾರೆ. ಸರ್ಕಾರಕ್ಕೆ ಶೀಘ್ರವೇ ಪ್ರಸ್ತಾವನೆ ಸಲ್ಲಿಸುವಂತೆಯೂ ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಮಿಲ್ಕ್ ಗ್ಯಾಲಕ್ಸಿಗೆ ಭೂಮಿ: ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಸುಸಜ್ಜಿತವಾದ ಸರ್ಕಾರಿ ನಿವಾಸ ನಿರ್ಮಿಸುವ ಉದ್ದೇಶಕ್ಕಾಗಿ 50*80 ನಿವೇಶನವನ್ನು ಹರಾಜು ದರ ವಿಧಿಸಿ ಮಂಜೂರು ಮಾಡಲು ತೀರ್ಮಾನಿಸಲಾಯಿತು. ಅಲ್ಲದೆ, ಮೈಸೂರಿನ ನಾಲ್ಕು ದಿಕ್ಕುಗಳಲ್ಲಿ ಮೈಸೂರು ಹಾಲು ಒಕ್ಕೂಟವು ಆಧುನಿಕ ರೀತಿಯಲ್ಲಿ 'ನಂದಿನಿ ಮಿಲ್ಕ್ ಗ್ಯಾಲಕ್ಸಿ' ತೆರೆಯಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸೂಕ್ತ ಅಳತೆಯ ನಿವೇಶನಗಳನ್ನು ಮಂಜೂರು ಮಾಡಲು ತೀರ್ಮಾನಿಸಲಾಯಿತು ಎಂದು ತಿಳಿಸಿದರು.

ಮುಡಾ ಪೀಠ ಸ್ಥಾಪನೆ: ಮೈಸೂರು ವಿವಿಯ ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್ ಸಂಸ್ಥೆಯಲ್ಲಿ ಮುಡಾ ಪೀಠ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಜೊತೆಗೆ ಮೈಸೂರು ನಗರದ ಯೋಜನಾಬದ್ಧ ಬೆಳವಣಿಗೆಗೆ ಪೂರಕವಾಗಿ ಅಧ್ಯಯನ, ಮಾರ್ಗದರ್ಶನ, ಮಾಸ್ಟರ್ ಪ್ಲಾನ್‌ನ ಪ್ರಕ್ರಿಯೆ, ಟೌನ್ ಪ್ಲಾನಿಂಗ್‌ನ ಯೋಜನೆ, ಅಭಿವೃದ್ಧಿ ಯೋಜನೆಗಳು, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಹಾಗೂ ಅಮೃತ್ ಯೋಜನೆಗಳ ಕಾರ್ಯ ತಂತ್ರಗಳನ್ನು ರೂಪಿಸಲು ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ಕ್ರಿಯಾ ಯೋಜನೆ: ವಿವಿಧ ಶೀರ್ಷಿಕೆಗಳಡಿಯಲ್ಲಿ ಪ್ರಾಧಿಕಾರದ ಬಡಾವಣೆಗಳ ಅಭಿವೃದ್ಧಿ, ಹೊಸ ಬಡಾವಣೆ ನಿರ್ಮಾಣ ಮೊದಲಾದ ಯೋಜನೆಗಳು ಸೇರಿದಂತೆ ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿಯಿಂದ ನೀರು ಸರಬರಾಜು ಯೋಜನೆ (ವಂತಿಕೆ ಪಾವತಿ) ಮತ್ತು ಬಿದರಗೂಡಿನಿಂದ ನೀರು ಸರಬರಾಜು ಯೋಜನೆ (ವಂತಿಕೆ ಪಾವತಿ) ಒಳಗೊಂಡ ಕಾಮಗಾರಿಗಳಿಗಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ವಿವಿಧ ಶೀರ್ಷಿಕೆಗಳಡಿ 447 ಮುಂದುವರೆದ ಕಾಮಗಾರಿಗಳು ಮತ್ತು 472 ಹೊಸ ಕಾಮಗಾರಿಗಳನ್ನು, ಒಟ್ಟು 729.63 ಕೋಟಿ ರೂ.ಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುವ 2022–23ನೇ ಸಾಲಿನ ಕ್ರಿಯಾಯೋಜನೆಗೆ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದರು.

ಉಂಡವಾಡಿ ಯೋಜನೆಗೆ 208.75 ಕೋಟಿ: ಹಳೇ ಉಂಡವಾಡಿ ಯೋಜನೆ ಸಂಬಂಧ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ 615 ಕೋಟಿ ರೂ.ಗಳ ಪೈಕಿ ಸರ್ಕಾರದಿಂದ ಮುಡಾ ವಂತಿಗೆಯಾಗಿ ನಿಗದಿ ಪಡಿಸಿರುವ 208.75 ಕೋಟಿ ರೂ. ಅನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ನಿರ್ಣಯಿಸಲಾ ಗಿದೆ ಎಂದು ತಿಳಿಸಿದರು. ಮೇಯರ್ ಶಿವಕುಮಾರ್, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಸದಸ್ಯರಾದ ಎಸ್.ಲಕ್ಷ್ಮೀದೇವಿ, ಜಿ.ಲಿಂಗಯ್ಯ, ಕೆ.ಮಾದೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜ.25ರಂದು ಮತ್ತೆ ಸಭೆ, ಉಳಿಕೆ ಸಿಎ ನಿವೇಶನ ಹಂಚಿಕೆ ಪ್ರಕ್ರಿಯೆ ಇದೇ ವೇಳೆ ಪೂರ್ಣ

ಮೈಸೂರು,ಜ.9(ಪಿಎಂ)–ಇದೇ ತಿಂಗಳು ಜ.25ರಂದು ಮುಡಾ ಸಭೆಯನ್ನು ಮತ್ತೆ ಆಯೋಜಿಸಿದ್ದು, ಈ ವೇಳೆ ಸಿಎ ನಿವೇಶನ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. 2021ರ ಸೆಪ್ಟೆಂಬರ್‌ನಲ್ಲಿ ಒಟ್ಟು 312 ಸಿಎ ನಿವೇಶನಗಳ ಹಂಚಿಕೆಗೆ ಪ್ರಕಟಣೆ ಹೊರಡಿಸಲಾಗಿತ್ತು. ಈ ಪೈಕಿ 92 ಸಿಎ ನಿವೇಶನಗಳಿಗೆ ಯಾವುದೇ ಅರ್ಜಿ ಸ್ವೀಕೃತವಾಗಿಲ್ಲ. ಇದರಲ್ಲಿ 220 ಸಿಎ ನಿವೇಶನಗಳಿಗೆ ಒಟ್ಟು 446 ಅರ್ಜಿಗಳು ಸ್ವೀಕೃತವಾಗಿವೆ. ಉಪಸಮಿತಿ ಸಭೆಯಲ್ಲಿ ಒಟ್ಟು 157 ನಿವೇಶನಗಳನ್ನು ಹಂಚಿಕೆಗೆ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಹೆಚ್ ಕೆಟಗರಿ ನಿವೇಶನ ಹಂಚಿಕೆ

ಮೈಸೂರು,ಜ.9(ಪಿಎಂ)–ಕ್ರೀಡೆ, ಕಲೆ, ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ 'ಹೆಚ್' ಕೆಟಗರಿಯಡಿ ನಿವೇಶನ ಹಂಚಿಕೆ ಮಾಡಲು ನಿರ್ಣಯಿಸಲಾಗಿದೆ ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ತಿಳಿಸಿದರು.

ಈ ಸಂಬಂಧ ನಡೆದ ಸಭೆಯಲ್ಲಿ ಒಂದೊಂದು ನಿವೇಶನದ ಮೌಲ್ಯ ಎಷ್ಟಿರಬೇಕೆಂಬ ಚರ್ಚೆ ನಡೆಸಲಾಗಿದೆ. 20X30, 30X40, 40X60 ವಿಸ್ತೀರ್ಣದ ನಿವೇಶನದ ದರ ನಿಗದಿಪಡಿಸಿ ಅರ್ಜಿ ಪರಿಶೀಲನೆ ನಡೆಸಿ ಹಂಚಿಕೆ ಪ್ರಕ್ರಿಯೆ ನಡೆಸಲಾಗುವುದು. ತಾತ್ಕಾಲಿಕವಾಗಿ ದರ ನಿಗದಿಪಡಿಸಿದ್ದು, ಈ ಸಂಬಂಧ ಇನ್ನೂ ಅಂತಿಮ ನಿರ್ಧಾರ ಆಗಿಲ್ಲ. ಅಂದಾಜು 180 ಬಿಡಿ ನಿವೇಶನಗಳನ್ನು ಹಂಚಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಮುಡಾದಲ್ಲಿ 'ವಿಷನ್ ಮೈಸೂರು' ತಂಡ ರಚನೆ

ಮೈಸೂರು,ಜ.9(ಪಿಎಂ)–ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಸಲಹೆ ಮೇರೆಗೆ ಮುಡಾದಲ್ಲಿ 'ವಿಷನ್ ಮೈಸೂರು' ತಂಡ ರಚನೆ ಮಾಡಲು ಉದ್ದೇಶಿಸಿರುವುದಾಗಿ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು.

ಮೊನ್ನೆ ಎಸ್.ಎಂ.ಕೃಷ್ಣರನ್ನು ಭೇಟಿ ಮಾಡಿದ್ದೆ. ಅವರ ಸಲಹೆ ಮೇರೆಗೆ 'ವಿಷನ್ ಮೈಸೂರು' ತಂಡ ರಚಿಸಲು ಉದ್ದೇಶಿಸಿದ್ದೇನೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಮುಡಾ ಸ್ಥಾಪಿಸಿದರು. ಹಾಗಾಗಿ ಅವರ ವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಈ ತಂಡ ರಚಿಸಲಾಗುವುದು. ಈಗಾಗಲೇ ಯದುವೀರರೊಂದಿಗೆ ಈ ಬಗ್ಗೆ ಮಾತನಾಡಿದ್ದೇನೆ. ಈ ತಂಡವು ಟಾಸ್ಕ್‌ಫೋರ್ಸ್ ರೀತಿಯಲ್ಲಿಯೂ ಇರಲಿದೆ ಎಂದು ಹೇಳಿದರು.

ಗ್ರಾಮೀಣ ಮಕ್ಕಳ ಸಬಲೀಕರಣಕ್ಕೆ ಜ.21 ರಂದು 'ಮನೋಹರ ಸಂಜೆ'

ಮೈಸೂರು, ಜ.9(ಎಂಟಿವೈ)– ಗ್ರಾಮೀಣ ಪ್ರದೇಶದ ಮಕ್ಕಳ ಸಬಲೀಕರಣಕ್ಕಾಗಿ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಜ.21 ರಂದು ಸಂಜೆ 6ಕ್ಕೆ ಮೈಸೂರಿನ ಕಲಾಮಂದಿರದಲ್ಲಿ 'ಮನೋಹರ ಸಂಜೆ' ಸಹಾಯಾರ್ಥ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರೋಟರಿ ರಾಯಲ್ ಸಂಸ್ಥೆಯ ಸಮುದಾಯ ಸೇವೆ ವಿಭಾಗದ ನಿರ್ದೇಶಕ ಎಸ್.ಎಲ್.ರಾಘವೇಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ರಾಯಲ್ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಗ್ರಾಮೀಣ ಮಕ್ಕಳ ಶಿಕ್ಷಣ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಆದ್ಯತೆ ನೀಡಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಜ.11ರಂದು ಬೆಳಗ್ಗೆ 10.30ಕ್ಕೆ ರೋಟರಿ ಜಿಲ್ಲೆ 318ರ ಗೌರ್ನರ್ ರೋ.ಪ್ರಕಾಶ್ ಕಾರಂತ್ ರೋಟರಿ ರಾಯಲ್ ಸಂಸ್ಥೆಗೆ ಭೇಟಿ ನೀಡುತ್ತಿದ್ದು, ಅದೇ ದಿನ ಹಸಿರೀಕರಣ ಯೋಜನೆಗೆ ಚಾಲನೆ ನೀಡಲಿದ್ದಾರೆ. ಬಳಿಕ ಹಂಪಾಪುರದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಯಲ್ಲಿ ನಲಿಕಲಿ ಯೋಜನೆಯಡಿ ನಮ್ಮ ಸಂಸ್ಥೆ ವತಿಯಿಂದ ಸಿದ್ಧಪಡಿಸಿರುವ ಶಾಲಾ ಕೊಠಡಿಯನ್ನು ಉದ್ಘಾಟಿಸಲಿದ್ದಾರೆ ಎಂದರು. ಮೈಸೂರಿನ ಕಲಾಮಂದಿರದಲ್ಲಿ ಜ.21ರಂದು ಸಂಜೆ 6ಕ್ಕೆ ನಡೆಯುವ 'ಮನೋಹರ ಸಂಜೆ' ಸಹಾಯಾರ್ಥ ಕಾರ್ಯಕ್ರಮವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಹಾಸ್ಯ ಸಾಹಿತಿ ಪ್ರೊ. ಕೃಷ್ಣೇಗೌಡ, ರೊ. ಧರ್ಮೇಂದ್ರಕುಮಾರ್ ಹಾಗೂ ವಿಶ್ವದಾಖಲೆ ಹೊಂದಿರುವ ಮಿಸ್ಟರ್ ಮ್ಯಾಜಿಕ್ ಖ್ಯಾತಿಯ ರೊ. ರಾಜ್‌ಭಟ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ನೃತ್ಯ ಮತ್ತು ಸಂಗೀತಗಳೂ ಇರಲಿದ್ದು, ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ರಾಯಲ್ ಸಂಸ್ಥೆಯ ಪದಾಧಿಕಾರಿಗಳಾದ ಸಿ.ಎಸ್. ರಾಘವೇಂದ್ರ, ಪಯಾಜ್ ಸಾಲ್ದಾನಾ, ಕೆ.ಹನುಮಂತರಾವ್, ಪಿ.ಆರ್. ರವೀಂದ್ರನ್ ಇದ್ದರು.

ಸಾಂಬಶಿವ ಪ್ರಹಸನದಲ್ಲಿ ಸಿದ್ದರಾಮಯ್ಯ, ಡಿಕೆಶಿಗೆ ಅವಹೇಳನ

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವಜಾಕ್ಕೆ ಆಗ್ರಹ

ಮೈಸೂರು,ಜ.9(ಎಂಟಿವೈ)– ಸಾಹಿತಿ ಡಾ.ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ' ನಾಟಕವನ್ನು ತಿರುಚಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಅವಹೇಳನ ಮಾಡುವ ನಾಟಕ ಪ್ರದರ್ಶನಕ್ಕೆ ಅನುಮತಿ ನೀಡಿರುವ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರನ್ನು ವಜಾಗೊಳಿಸಬೇಕೆಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ವಕ್ತಾರ ಎಸ್. ರಾಜೇಶ್ ಆಗ್ರಹಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ರಂಗಾಯಣದಂತಹ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿರುವುದು ಸರಿಯಲ್ಲ. ಈ ಮೂಲಕ ರಾಜ್ಯದಲ್ಲಿ ಹಿಂದೂ ಹಾಗೂ ಮುಸ್ಲಿಂ ಸಮುದಾಯದವರ ನಡುವೆ ದ್ವೇಷ ಭಾವನೆ ಬಿತ್ತುವ ಕೆಲಸ ಮಾಡಲಾಗುತ್ತಿದೆ. ಅಲ್ಲದೆ, ಸಿದ್ದರಾಮಯ್ಯ ಅವರು ನೀಡಿದ ಅನ್ನಭಾಗ್ಯ, ಶಾದಿ ಭಾಗ್ಯ, ಕ್ಷೀರಭಾಗ್ಯ ಹಾಗೂ ಇನ್ನಿತರ ಜನಪ್ರಿಯ ಯೋಜನೆಗಳ ಮೂಲಕ ಜನರನ್ನು ಸೋಮಾರಿಗಳನ್ನಾಗಿ ಮಾಡಲಾಗಿದೆ ಎಂದು ಬಿಂಬಿಸಿರುವುದು ಸರಿಯಲ್ಲ. ಕೊರೊನಾ ವೇಳೆ ಎಲ್ಲರಿಗೂ ಅನ್ನಭಾಗ್ಯದ ಮಹತ್ವ ಅರಿವಾಗಿದೆ ಎಂದರು. ರಾಜಕೀಯ ಮುತ್ಸದ್ದಿ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡುವ ರೀತಿಯಲ್ಲಿ ಸಿದ್ದು ನಿಜಕನಸುಗಳು ಎಂಬ ಪುಸ್ತಕ ಬರೆಯಿಸಲಾಗಿದೆ. ತಮ್ಮ ಹುಳುಕನ್ನು ಮುಚ್ಚಿಕೊಳ್ಳುವುದಕ್ಕಾಗಿ ರಚಿಸಿರುವ ಸರ್ಕಾರ ಈ ಪುಸ್ತಕ ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುರುಬರಹಳ್ಳಿ ಪ್ರಕಾಶ್, ಸಕ್ಕಳ್ಳಿ ಬಸವರಾಜು, ಶಶಿ ಇದ್ದರು.

ಕೃಷಿಯೇತರ ಉದ್ದೇಶಕ್ಕೆ ಭೂಮಿ ಪರಿವರ್ತನೆಯಾದರೆ ಕಾವೇರಿಗೆ ಮರಣ ಶಾಸನ

ಕರ್ನಲ್ ಪಿ.ಸಿ. ಮುತ್ತಣ್ಣ ಎಚ್ಚರಿಕೆ



ಮಡಿಕೇರಿ, ಜ.9– 'ಕಾವೇರಿ' ನದಿಯ ಜಲಾನಯನ ಪ್ರದೇಶವಾಗಿರುವ ಕೊಡಗು ಜಿಲ್ಲೆಯ ಕೃಷಿ ಭೂಮಿಗಳನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತನೆ ಮಾಡಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದೆಂದು ಪರಿಸರ ಮತ್ತು ಆರೋಗ್ಯ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಕರ್ನಲ್ ಸಿ.ಪಿ. ಮುತ್ತಣ್ಣ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಂದಾಯ ಸಚಿವ ಆರ್. ಅಶೋಕ್, ಕೊಡಗಿನಲ್ಲಿ ಭೂ ಪರಿವರ್ತನೆಯ ನಿಯಮಗಳನ್ನು ಸರಳೀಕರಿಸಿ, ವಾರದ ಅವಧಿಯಲ್ಲೇ ಭೂ ಪರಿವರ್ತನೆ ಮಾಡಿಕೊಡುವುದಾಗಿ ತಿಳಿಸಿದ್ದಾರೆ. ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಪರಿವರ್ತನೆ ಮಾಡಿಕೊಟ್ಟಲ್ಲಿ ಅದು ಕಾವೇರಿ ನದಿಗೆ ಮರಣ ಶಾಸನವಾಗಲಿದೆ. ಕಾವೇರಿ ನೀರನ್ನು ಅವಲಂಬಿಸಿರುವ ಕೋಟ್ಯಾಂತರ ಜನರಿಗೂ ಇದರಿಂದ ಅನ್ಯಾಯವಾಗುತ್ತದೆ ಎಂದು ಎಚ್ಚರಿಸಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಗೆ ಮನವಿಯೊಂದನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ ಅವರು, ಅದರಲ್ಲಿ ಕೊಡಗಿನ ಕಾಫಿ ತೋಟ, ಗದ್ದೆ, ಜಮ್ಮಾ ಮತ್ತು ಸಾಗು ಭೂಮಿ, ಬಾಣೆಗೆ ಸಂಬಂಧಿಸಿದಂತೆ ಭೂ ಪರಿವರ್ತನೆಗಳು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಬಂಧನೆಗಳನ್ನು ಉಲ್ಲಂಘಿಸುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಆಡಿಟರ್ ಜನರಲ್‌ರ ಕಚೇರಿಯಿಂದ 2018ರ ಮಾ.16ರಂದು ಅಂದಿನ ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ ಪತ್ರದಲ್ಲಿಯೂ, ಭೂ ಪರಿವರ್ತನೆ ಕಾನೂನುಬಾಹಿರ ಎಂಬುದನ್ನು ಸ್ಪಷ್ಟಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯ ಕೃಷಿ ಭೂಮಿಗಳನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸಿಕೊಂಡು ಅದನ್ನು ರೆಸಾರ್ಟ್‌ಗಳನ್ನಾಗಿ, ಲೇಔಟ್‌ಗಳನ್ನಾಗಿ ಪರಿವರ್ತಿಸುವುದಕ್ಕೆ ಮಾತ್ರವೇ ನಮ್ಮ ವಿರೋಧವಿದೆ. ಆದರೆ, ಕಾಫಿ ತೋಟಗಳಲ್ಲಿ ಕೃಷಿಕರು ತಮ್ಮ ಅನುಕೂಲಕ್ಕಾಗಿ ಸಣ್ಣ ಪ್ರಮಾಣದ ಜಾಗವನ್ನು ಪರಿವರ್ತಿಸಿಕೊಳ್ಳುವುದಕ್ಕೆ ವಿರೋಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಗ್ರಾಮ ತೊರೆಯಬೇಕಾಗುತ್ತದೆ: ಹಿಮಾಚಲ ಪ್ರದೇಶದ ಜೋಷಿ ಮಠ್‌ನಲ್ಲಿ ಭೂಮಿ ಬಿರುಕು ಬಿಟ್ಟು ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸುವ ಪ್ರಕ್ರಿಯೆ ನಡೆದಿದೆ. ಇದು ಅತಿಯಾದ ಪ್ರವಾಸಿಗರ ಒತ್ತಡದಿಂದ ಸೃಷ್ಟಿಯಾಗಿದೆ ಎಂದು ಅಭಿಪ್ರಾಯಪಟ್ಟ ಕರ್ನಲ್ ಮುತ್ತಣ್ಣ, ಕೊಡಗಿನಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 38 ಲಕ್ಷಕ್ಕೂ ಹೆಚ್ಚಿನ ಪ್ರವಾಸಿಗರು, 40 ಸಾವಿರಕ್ಕೂ ಹೆಚ್ಚಿನ ವಾಹನಗಳು ಆಗಮಿಸಿವೆ. ದಿನದಿಂದ ದಿನಕ್ಕೆ ಕೊಡಗಿನ ಮೇಲೆ ಪ್ರವಾಸಿಗರ ಒತ್ತಡ ಹೆಚ್ಚುತ್ತಿದ್ದು, ಇದು ಮುಂದುವರೆದಲ್ಲಿ ಜೋಷಿ ಮಠ್ ರೀತಿಯಲ್ಲಿ ಸ್ಥಳೀಯರು ಗ್ರಾಮ ತೊರೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದೆಂದು ಎಚ್ಚರಿಸಿದರು.

ಜಾನುವಾರುಗಳನ್ನು ಹಾಗೇ ಬಿಡಿ: ಹುಲಿ ಆಹಾರಕ್ಕಾಗಿ ಜಾನುವಾರುಗಳನ್ನು ಕೊಂದು, ಒಂದಷ್ಟು ತಿಂದು ತೆರಳುತ್ತದೆ. ಮತ್ತೆ ಅದೇ ಸ್ಥಳಕ್ಕೆ ಬಂದು ಉಳಿದ ಕಳೇಬರವನ್ನು ಭಕ್ಷಿಸಲು ಬರುತ್ತದೆ. ಈ ಹಿನ್ನೆಲೆ ಸತ್ತ ಜಾನುವಾರುಗಳನ್ನು ಅಲ್ಲೇ ಬಿಟ್ಟು, ಈ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದಲ್ಲಿ, ಮತ್ತೆ ಹುಲಿ ಆ ಸ್ಥಳಕ್ಕೆ ಬಂದಾಗ ಅದನ್ನು ಸೆರೆ ಹಿಡಿಯಲು ಅನುಕೂಲವಾಗುತ್ತದೆ. ಸತ್ತ ಜಾನುವಾರನ್ನು ಹೊತ್ತೊಯ್ದಲ್ಲಿ, ಹುಲಿ ಆಹಾರಕ್ಕಾಗಿ ಮತ್ತೆ ಬೇರೊಂದನ್ನು ಹುಡುಕಲು ಮುಂದಾಗುತ್ತದೆ ಎಂದು ವಿವರಿಸಿದರು. ಹುಲಿ ಹಾವಳಿ ಹೆಚ್ಚಾಗಿರುವ ಪ್ರದೇಶದ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಸೂಕ್ತ ವಾಹನ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡಬೇಕು, ಪಾಳು ಬಿದ್ದ ಗದ್ದೆಗಳಲ್ಲಿ ಕಾಡುಹಂದಿ ಸೇರಿಕೊಳ್ಳುವುದರಿಂದ ಅದನ್ನು ಬೇಟೆಯಾಡಲು ಹುಲಿಗಳು ಬರುವ ಸಾಧ್ಯತೆ ಇದೆ. ಈ ಹಿನ್ನೆಲೆ ಗದ್ದೆಗಳನ್ನು, ಕಾಫಿ ತೋಟಗಳಲ್ಲಿ ಕಾಡು ಬೆಳೆಯಲು ಅವಕಾಶ ಮಾಡಿಕೊಡಬಾರದೆಂದು ಕರ್ನಲ್ ಸಿ.ಪಿ. ಮುತ್ತಣ್ಣ ಸಲಹೆ ನೀಡಿದರು.

5 ಸಾವಿರ ಪರಿಹಾರ: ಹುಲಿ ದಾಳಿಯಿಂದ ಜಾನುವಾರುಗಳು ಮೃತಪಟ್ಟಲ್ಲಿ ನಮ್ಮ ಸಂಸ್ಥೆಯಿಂದ ವರ್ಲ್ಡ್ ವೈಲ್ಡ್ ಲೈಫ್ ಫಂಡ್‌ನಿಂದ ಲಭ್ಯ ಅನುದಾನದಲ್ಲಿ ತಕ್ಷಣ 5 ಸಾವಿರ ರೂ. ಪರಿಹಾರವನ್ನು ನೀಡಲಾಗುತ್ತಿದೆ ಎಂದು ಸಂಸ್ಥೆಯ ಪ್ರಮುಖರಾದ ರಾಯ್ ಬೋಪಣ್ಣ ತಿಳಿಸಿದರು. ಈ ರೀತಿ ಇಲ್ಲಿಯವರೆಗೆ 78 ಮಂದಿಗೆ ಪರಿಹಾರವನ್ನು ಒದಗಿಸಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶಾನ್ ಬೋಪಯ್ಯ, ಪಾಂಡಂಡ ನರೇಶ್, ಕೇಟೋಳಿರ ಸನ್ನಿ ಸೋಮಣ್ಣ ಉಪಸ್ಥಿತರಿದ್ದರು.

ಹುಲಿಗಾಗಿ 'ಮುಖವಾಡ'

ಹುಲಿಗಳು ಎಂದಿಗೂ ಮನುಷ್ಯನ ಮೇಲೆ ನೇರವಾಗಿ ದಾಳಿ ಮಾಡುವುದಿಲ್ಲ. ಬದಲಾಗಿ ಹಿಂಬದಿಯಿಂದ ದಾಳಿ ಮಾಡುತ್ತವೆ. ಇದರಿಂದ ಪಾರಾಗಲು ಪಶ್ಚಿಮ ಬಂಗಾಳದ ಸುಂದರ್ ಬನ್ ವ್ಯಾಪ್ತಿಯಲ್ಲಿ ತಲೆಯ ಹಿಂಭಾಗಕ್ಕೆ ಅಳವಡಿಸಿಕೊಳ್ಳುವ 'ಮುಖವಾಡ'ವನ್ನು ಬಳಸುತ್ತಿದೆ. ಇದು ಸ್ಥಳೀಯವಾಗಿಯೂ ಉಪಯುಕ್ತವಾಗಲಿದೆ ಎಂದು ಕರ್ನಲ್ ಸಿ.ಪಿ. ಮುತ್ತಣ್ಣ ತಿಳಿಸಿದರು.

ಕೊಡಗು ಜಿಲ್ಲೆ ದಕ್ಷಿಣ ಭಾಗದಲ್ಲಿ ಹುಲಿ ಹಾವಳಿ ಹೆಚ್ಚಾಗುತ್ತಿದ್ದು, ಈಗಾಗಲೇ 5 ಮಂದಿ ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆ ರಬ್ಬರ್‌ನಿಂದ ಸಿದ್ಧಪಡಿಸಿದ ಮುಖವಾಡವನ್ನು ಬಳಸುವುದಕ್ಕೆ ಕ್ರಮ ಕೈಗೊಳ್ಳುವಂತೆ ಸರ್ಕಾರ ಮತ್ತು ಅರಣ್ಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ಹೇಳಿದರು.



ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಸಾವನ್ನಪ್ಪಿದ ಪ್ರಕರಣಗಳನ್ನು ಗಮನಿಸಿದಾಗ ಬೆಳಗಿನ ಜಾವ ಬಹಿರ್ದೆಸೆಗೆಂದು ತೆರಳಿದವರ ಮೇಲೆ ಹುಲಿ ಹಿಂಬದಿಯಿಂದ ದಾಳಿ ನಡೆಸಿ ಕೊಂದು ಹಾಕಿದೆ ಎಂದು ತಿಳಿಸಿದ ಅವರು, ಜಿಲ್ಲೆಯಲ್ಲಿ ಬಯಲು ಶೌಚ ಇಲ್ಲವೆಂದು ಹೇಳಿಕೊಳ್ಳಲಾಗುತ್ತದೆಯಾದರು, ಸಾಕಷ್ಟು ಕಡೆಗಳಲ್ಲಿ ಇಂದಿಗೂ ಮನೆಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಇಲ್ಲವೆಂದು ಬೇಸರ ವ್ಯಕ್ತಪಡಿಸಿದರು. ತೋಟಗಳ ಯಾವೆಲ್ಲ ಲೈನ್‌ಮನೆಗಳಲ್ಲಿ ಶೌಚಾಲಯಗಳಿಲ್ಲವೋ ಅಲ್ಲೆಲ್ಲ ಶೌಚಾಲಯಗಳ ನಿರ್ಮಾಣಕ್ಕೆ ಸರ್ಕಾರ ಸೂಕ್ತ ಯೋಜನೆಯನ್ನು ರೂಪಿಸುವುದು ಅವಶ್ಯ. ಬಯಲು ಶೌಚದಿಂದಾಗಿಯೇ ಸಾಕಷ್ಟು ಮಂದಿ ಹುಲಿ ದಾಳಿಗೆ ಸಿಲುಕುತ್ತಿರುವುದಾಗಿ ತಿಳಿಸಿದರು.

ನಾಪಂಡ ರವಿ ಕಾಳಪ್ಪ ಅವರ ಅಧ್ಯಕ್ಷತೆಯ ಸಭೆಯಲ್ಲಿ

ಕೊಡಗಿನಲ್ಲಿ ಔಷಧೀಯ ಸಸ್ಯಗಳ ಉದ್ಯಾನ ನಿರ್ಮಾಣಕ್ಕೆ ಅನುಮೋದನೆ



ಮಡಿಕೇರಿ, ಜ.9– ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ತ್ರೈಮಾಸಿಕ ಸಭೆ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅಧ್ಯಕ್ಷತೆಯಲ್ಲಿ ಶನಿವಾರ ನಡೆಯಿತು.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಮಂಡಳಿ ಕಚೇರಿ ವನವಿಕಾಸ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಔಷಧೀಯ ಸಸ್ಯಗಳ ಉದ್ಯಾನ ನಿರ್ಮಾಣ ಸಂಬಂಧ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಸಭೆ ಆರಂಭಕ್ಕೂ ಮುನ್ನ ರಾಜ್ಯ ಅರಣ್ಯ ನಿಗಮದ ಅಧ್ಯಕ್ಷೆ ತಾರಾ ಅನುರಾಧ ಮತ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರಾಧಾದೇವಿ ಅವರನ್ನು ಸನ್ಮಾನಿಸಲಾಯಿತು. ಮಂಡಳಿಯ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡಿದಕ್ಕಾಗಿ ಸನ್ಮಾನಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಮಂಡಳಿ ಸದಸ್ಯ ಕಾರ್ಯದರ್ಶಿ ಅನಿತ ಎಸ್.ಅರೆಕಲ್, ಸದಸ್ಯರಾದ ಉತ್ತರ ಕನ್ನಡದ ಪ್ರಕಾಶ್ ಮೇಸ್ತಾ, ಶಿವಮೊಗ್ಗ ವೆಂಕಟೇಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ ವಿಜಯ್ ಮೋಹನ್ ರಾಜ್, ಅರಣ್ಯ ಇಲಾಖೆ ಪಿಸಿಸಿಎಫ್ ಎ.ಕೆ. ಸಿಂಗ್ ಹಾಗೂ ಪ್ರಮುಖರು ಸಭೆಯಲ್ಲಿ ಹಾಜರಿದ್ದರು.

ಸೋ.ಪೇಟೆಯಲ್ಲಿ ಡಾ.ಶಿವಕುಮಾರ ಸ್ವಾಮೀಜಿ ಬಸ್ ನಿಲ್ದಾಣ ಉದ್ಘಾಟನೆ

ಮಡಿಕೇರಿ, ಜ.9– ಸೋಮವಾರಪೇಟೆ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ 'ಡಾ.ಶಿವಕುಮಾರ ಸ್ವಾಮೀಜಿ ಬಸ್ ನಿಲ್ದಾಣ'ವನ್ನು ತುಮಕೂರಿನ ಸಿದ್ಧಗಂಗಾ ಮಠಾಧ್ಯಕ್ಷರಾದ ಸಿದ್ದಲಿಂಗ ಮಹಾಸ್ವಾಮೀಜಿ, ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ಹಾಗೂ ಪರಮ ಪೂಜ್ಯ ಸ್ವಾಮೀಜಿಗಳು ಸಾರ್ವಜನಿಕರಿಗೆ ಸಮರ್ಪಿಸಿದರು.

ಬಳಿಕ ಸೋಮವಾರಪೇಟೆಯ ಡಾ.ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಸಮಿತಿ ವತಿಯಿಂದ ಸಾಕ್ಷಿ ಕನ್ವೆಷನ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಸಿದ್ದಲಿಂಗ ಸ್ವಾಮೀಜಿಗಳು, ಡಾ.ಶಿವಕುಮಾರ ಸ್ವಾಮೀಜಿ ಅವರ ಬದುಕು, ಶಿಸ್ತುಬದ್ಧ ಜೀವನ ಸ್ಮರಣೀಯ, ಜ್ಞಾನ, ಪ್ರಸಾದ ಮತ್ತು ಸಮಾಜದ ಕಾಯಕಕ್ಕೇ ಹೆಚ್ಚಿನ ಒತ್ತು ನೀಡಿದ್ದರು. ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡಲು ಶ್ರಮಿಸಿದರು ಎಂದರು.

ಆಕಾಶ, ಸಮುದ್ರವನ್ನು ಹೇಗೆ ಒಂದಕ್ಕೊಂದು ಹೋಲಿಕೆ ಮಾಡಲು ಸಾಧ್ಯವಿಲ್ಲವೋ ಹಾಗೆಯೇ ಶಿವಕುಮಾರ ಸ್ವಾಮೀಜಿಗೆ ಅವರೇ ಹೋಲಿಕೆ. ಲಕ್ಷಾಂತರ ಜನರ ಬದುಕಿಗೆ ದಾರಿದೀಪ ಬೆಳಗಿದ್ದಾರೆ ಎಂದು ಸಿದ್ದಲಿಂಗ ಮಹಾಸ್ವಾಮೀಜಿ ಅವರು ನುಡಿದರು. ಸೋಮವಾರಪೇಟೆಯಲ್ಲಿ ನಿರ್ಮಿಸಲಾಗಿರುವ ಶಿವಕುಮಾರ ಸ್ವಾಮೀಜಿ ಅವರ ಬಸ್ ನಿಲ್ದಾಣ ಅದೊಂದು ಪ್ರಾರ್ಥನಾ ಮಂದಿರ ಎಂದು ವರ್ಣಿಸಿದರು.

ಸ್ಥಳೀಯ ಶಾಸಕರು ಜಾತಿ, ಮತ ಬಿಟ್ಟು ರಾಜಕೀಯ ಮುತ್ಸದ್ದಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಜನಹಿತ ಕಾರ್ಯ ಮಾಡುತ್ತಿದ್ದಾರೆ ಎಂದು ಸಿದ್ದಲಿಂಗ ಮಹಾ ಸ್ವಾಮೀಜಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರು. ಮಕ್ಕಳ ಬಗ್ಗೆ ಇದ್ದ ಗೌರವ ಪ್ರೀತಿ ಸ್ಮರಣೀಯವಾದದ್ದು. ಅವರ ತಾಳ್ಮೆ, ಸಹನೆ ಮತ್ತು ಸಮಯಪ್ರಜ್ಞೆಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳುವಂತಾಗಬೇಕು. ಅವರ ಆದರ್ಶ ಬದುಕು ಸ್ಮರಣೀಯ ಎಂದರು.



ಬಸ್ ನಿಲ್ದಾಣ ಉದ್ಘಾಟನೆಯ ನಂತರ ನಡೆದ ಗುರುವಂದನಾ ಕಾರ್ಯಕ್ರಮ.

ವಿರಾಜಪೇಟೆಯ ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಬಸ್ ನಿಲ್ದಾಣದಲ್ಲಿ ಶಾಂತಿ ಸಮಾಧಾನ, ನೆರಳು ಸಿಗುತ್ತದೆ. ಆ ನಿಟ್ಟಿನಲ್ಲಿ ಡಾ.ಶಿವಕುಮಾರ ಸ್ವಾಮೀಜಿ ಅವರ ಹೆಸರಿಟ್ಟಿರುವುದು ಸ್ಮರಣೀಯ ಎಂದರು. ಬಸವ ಪಟ್ಟಣದ ತೋಂಟದಾರ್ಯ ಸಂಸ್ಥಾನ ಮಠದ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರು ಹಿಮಾಲಯ ಪರ್ವತಕ್ಕಿಂತ ಎತ್ತರದ ವ್ಯಕ್ತಿತ್ವ ಹೊಂದಿದ್ದರು ಎಂದು ನುಡಿದರು.

ಕೊಡ್ಲಿಪೇಟೆಯ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಮಠಗಳು ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಿವೆ ಎಂದರು. ಅಮ್ಮತ್ತಿಯ ಕನ್ನಡ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಪ್ರಮುಖರಾದ ಎಚ್.ಎಸ್.ಚಂದ್ರಮೌಳಿ ಅವರು ಮಾತನಾಡಿದರು.

ಕೊಡ್ಲಿಪೇಟೆಯ ಕಲ್ಲು ಮಠದ ಮಹಾಂತ ಸ್ವಾಮೀಜಿ, ತೊರೆನೂರು ವಿರಕ್ತ ಮಠದ ಮಲ್ಲೇಶ ಸ್ವಾಮೀಜಿ, ಅಂಕನಹಳ್ಳಿ ತಪೋಕ್ಷೇತ್ರದ ಮನೆಹಳ್ಳಿ ಮಠದ ಮಹಾಂತ ಶಿವಲಿಂಗ ಸ್ವಾಮೀಜಿ, ಸೋಮವಾರಪೇಟೆಯ ಮಲ್ಲಿಕಾರ್ಜುನ ಸ್ವಾಮೀಜಿ, ಚಿಕ್ಕಬಳ್ಳಾಪುರದ ನಿಶ್ಚಲ ದೇಶಿಕೇಂದ್ರ ಸ್ವಾಮೀಜಿ, ಅರಕಲಗೋಡು ಚಿಲುಮೆ ಮಠದ ಜಯದೇವ ಸ್ವಾಮೀಜಿ, ಪಪಂ ಅಧ್ಯಕ್ಷ ಪಿ.ಕೆ.ಚಂದ್ರ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷೆ ಜಯಂತಿ ಶಿವಕುಮಾರ, ಮಾದ್ರೆ ಮುದ್ದಿನಕಟ್ಟೆ ಮಠದ ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿಡಿಗಳಲೆ ಮಠದ ಇಮ್ಮಡಿ ಶಿವಲಿಂಗ ಸ್ವಾಮೀಜಿ, ಕಲ್ಲಳ್ಳಿ ಮಠದ ರುದ್ರಮುನಿ ಸ್ವಾಮೀಜಿ, ಪಪಂ ಸ್ಥಳೀಯ ಸದಸ್ಯೆ ಶೀಲಾ ಡಿಸೋಜ, ಪಪಂ ಮುಖ್ಯಾಧಿಕಾರಿ ನಾಚಪ್ಪ, ಕಿರುತೆರೆಯ ನಟಿ ಮೌನ, ತಾಲೂಕು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಎಚ್.ರೋಹಿತ್ ಇತರರು ಇದ್ದರು.

ಶಿವಕುಮಾರ ಸ್ವಾಮೀಜಿ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಎಸ್.ಮಹೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರುಷೋತ್ತಮ ಅವರು ಬಸವಗೀತೆ ಹಾಡಿದರು. ವಿಜಯ ಹಾನಗಲ್ ಸ್ವಾಗತಿಸಿದರು. ಸರ್ವಜ್ಞಮೂರ್ತಿ ನಿರೂಪಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಜ.9– ವಿದ್ಯುತ್ ವಿತರಣಾ ಕೇಂದ್ರ ಮತ್ತು ಮಾರ್ಗದಲ್ಲಿ ತುರ್ತು ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಜ.10 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪೊನ್ನಂಪೇಟೆ, ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಶ್ರೀಮಂಗಲ, ಬಾಳಲೆ, ಕಾನೂರು, ಬಿರುನಾಣಿ, ಕುಟ್ಟ ವಿರಾಜಪೇಟೆ, ಬಿ ಶೆಟ್ಟಿಗೇರಿ, ಬೇತ್ರಿ, ಕಡಗಮರೂರು, ಕಾಕೋಟುಪರಂಬು, ಅಮ್ಮತ್ತಿ, ಸಿದ್ದಾಪುರ, ಮಾಲ್ದಾರೆ, ಮೂರ್ನಾಡು, ಮರುಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜ.12ರಂದು ತಲಕಾವೇರಿ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ

ಮಡಿಕೇರಿ, ಜ.9– ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ಜ.12 ರಂದು ಮಧ್ಯಾಹ್ನ 2 ಗಂಟೆಯ ನಂತರ ಸ್ವಚ್ಛತಾ ಕಾರ್ಯದ ಪ್ರಯುಕ್ತ ಶ್ರೀ ತಲಕಾವೇರಿ ದೇವಾಲಯದ ಪ್ರವೇಶ ಇರುವುದಿಲ್ಲ. ಸಾರ್ವಜನಿಕ ಭಕ್ತಾದಿಗಳು ಸಹಕರಿಸಬೇಕೆಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಚಿಕ್ಕಲ್ಲೂರಿನಲ್ಲಿ ಗೊಂದಲದ ನಡುವೆ ಪಂಕ್ತಿಸೇವೆ

▶ ಸಹಸ್ರಾರು ಭಕ್ತರಿಂದ ಸಿದ್ದಪ್ಪಾಜಿ ಪೂಜೆ ▶ ಇಂದು ಮುತ್ತತ್ತಿರಾಯನ ಸೇವೆ





ಹನೂರು, ಜ.9 ಇತಿಹಾಸ ಪ್ರಸಿದ್ಧ ಚಿಕ್ಕಲ್ಲೂರು ಜಾತ್ರೆಯ ನಾಲ್ಕನೇ ದಿನದ ಪಂಕ್ತಿ ಸೇವೆ ಸೋಮವಾರ ಗೊಂದಲದ ನಡುವೆಯೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಜ. 6ರಂದು ನಡೆದ ಚಂದ್ರಮಂಡಲೋತ್ಸವದ ಮೂಲಕ ಶುಭಾರಂಭಗೊಂಡ ಸಿದ್ದಪ್ಪಾಜಿ ಜಾತ್ರಾ ಮಹೋತ್ಸವದ ಅಂಗವಾಗಿ ಚಿಕ್ಕಲ್ಲೂರು ಜಾತ್ರೆಯ ಪಂಕ್ತಿಸೇವೆಗೆ ಟೆಂಪೊ, ಗೂಡ್ಸ್ ಆಟೊ, ಟ್ರ್ಯಾಕ್ಟರ್, ಲಾರಿ, ದ್ವಿಚಕ್ರ ವಾಹನ ಹಾಗೂ ಬಸ್‌ಗಳಲ್ಲಿ ಬಂದ ಭಕ್ತರು ದೇವಾಲಯದ ಸುತ್ತಮುತ್ತಲಿನ ಜಮೀನುಗಳಲ್ಲಿ ಬೀಡು ಬಿಟ್ಟಿದ್ದರು.

ತಲತಲಾಂತರಗಳಿಂದಲೂ ನಡೆದುಕೊಂಡು ಬಂದಿರುವ ಜಾತ್ರೆಯಲ್ಲಿ ಭಕ್ತರು ದೂಳನ್ನು ಲೆಕ್ಕಿಸದೆ, ನೀಲಗಾರ ವಿಧಾನಗಳೊಡನೆ ಸಿದ್ದಪ್ಪಾಜಿ ಜಾತ್ರೆಯಲ್ಲಿ ಪಾಲ್ಗೊಂಡರು. ನೆತ್ತಿಯನ್ನು ಸುಡುತ್ತಿದ್ದ ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಪ್ರಮುಖ ಆಕರ್ಷಣೆಯ ಪಂಕ್ತಿಸೇವೆ: ಸಿದ್ದಪ್ಪಾಜಿ ಜಾತ್ರೆಯಲ್ಲಿ ಬಾಡೂಟದ ಪಂಕ್ತಿ ಸೇವೆಯೇ ಪ್ರಮುಖ ಆಕರ್ಷಣೆ. ಆದರೆ ಪ್ರಾಣಿ ಬಲಿ ನಿಷೇಧದ ಹಿನ್ನೆಲೆಯಲ್ಲಿ ಜಾತ್ರೆ ಮೈದಾನದಲ್ಲಿ ಬಾಡೂಟಕ್ಕೆ ಅನುಮತಿ ನೀಡದೆ, ಮತ್ತೊಂದೆಡೆ ಅವಕಾಶ ಕಲ್ಪಿಸಿದ್ದರಿಂದ ಪಂಕ್ತಿ ಸೇವೆ ಸಾಂಗವಾಗಿ ನಡೆಯಿತು.


ಪ್ರಾಣಿ ಬಲಿಗೆ ಅವಕಾಶ ಇಲ್ಲದ ಕಾರಣ ಜಾತ್ರೆಗೆ ಕೊಂಡೊಯ್ಯಲಾಗುತ್ತಿದ್ದ ಪ್ರಾಣಿಗಳನ್ನು ತಡೆಯಲಾಗಿತ್ತು. ಪ್ರಾಣಿ ಬಲಿಗೆ ಅವಕಾಶವೇ ಇಲ್ಲದಂತೆ ಜಿಲ್ಲಾಡಳಿತ ಬಂದೋಬಸ್ತ್ ಮಾಡಿತ್ತು. ಆದರೆ, ದೂರದಲ್ಲೇ ಪಂಕ್ತಿ ಸೇವೆಗೆ ಅಗತ್ಯ ಬಾಡು ಹಾಗೂ ಪದಾರ್ಥಗಳನ್ನು ತಂದು ಸೇವೆ ಪೂರೈಸಲಾಯಿತು. ಜಿಲ್ಲೆ ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ಸಾವಿರಾರು ಭಕ್ತರು, ಪವಾಡ ಪುರುಷ ಸಿದ್ದಪ್ಪಾಜಿಗೆ ಭಕ್ತಿ ಸಮರ್ಪಣೆ ಮಾಡಿದರು.

ಭಕ್ತರ ಸಂಖ್ಯೆ ಇಳಿಮುಖ: ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆಯಲ್ಲಿ ಪಂಕ್ತಿಸೇವೆ ದಿನ ಲಕ್ಷಾಂತರ ಭಕ್ತರು ಸೇರುವುದು ಹಿಂದಿನಿಂದಲೂ ನಡೆದು ಬಂದಿದೆ. ಆದರೆ, ಪ್ರಾಣಿಬಲಿ ನಿಷೇಧವನ್ನು ಜಿಲ್ಲಾಡಳಿತ ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ಪರಿಣಾಮ ಜಾತ್ರೆಗೆ ಬರುತ್ತಿದ್ದ ಭಕ್ತರ ಸಂಖ್ಯೆಯಲ್ಲಿ ಈ ಬಾರಿಯೂ ಇಳಿಮುಖವಾಗಿತ್ತು.

ಟೆಂಟ್‌ಗಳು ವಿರಳ: ಪ್ರಾಣಿ ಬಲಿ ನಿಷೇಧದ ಹಿನ್ನೆಲೆಯಲ್ಲಿ ಈ ವರ್ಷ ಭಕ್ತರು ಉಳಿದುಕೊಳ್ಳಲು ಹಾಕುತ್ತಿದ್ದ ಟೆಂಟ್‌ಗಳ ಸಂಖ್ಯೆಯೂ ತೀರ ಕಡಿಮೆ ಇತ್ತು. ಹಾಗಾಗಿ, ನಿರೀಕ್ಷಿತ ವ್ಯಾಪಾರ ನಡೆಯದ ಕಾರಣ ವ್ಯಾಪಾರಸ್ಥರು ನಿರಾಸೆ ಅನುಭವಿಸಿದರು. ಜಾತ್ರೆಗೆ ಬಂದವರು ಪೂಜೆ ಮಾಡಿಸಿ ತೆರಳುತ್ತಿದ್ದರಿಂದ ಜಾತ್ರೆಯಲ್ಲಿ ನೂಕು ನುಗ್ಗಲು ಅಷ್ಟಾಗಿ ಕಾಣಿಸಿಕೊಳ್ಳಲಿಲ್ಲ.

ಸಂಚಾರ ವ್ಯವಸ್ಥೆ ಸುಗಮ: ಜಾತ್ರೆಗೆ ಹೋಗಿ, ಬರಲು ಸಮರ್ಪಕ ಬಸ್ ವ್ಯವಸ್ಥೆ ಮಾಡಲಾಗಿತ್ತು. ಹಾಗಾಗಿ ಭಕ್ತರು ಸಲೀಸಾಗಿ ಜಾತ್ರೆಗೆ ಹೋಗಿ ಬಂದರು. ಪೊಲೀಸರು ಏಕಮುಖ ಸಂಚಾರ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿದ್ದರಿಂದ ಎಲ್ಲೂ ಸಂಚಾರಕ್ಕೆ ತೊಂದರೆಯಾಗಲಿಲ್ಲ.

ಕೊಟ್ಟಿಗೆಗೆ ಬೆಂಕಿ; ಎರಡು ಎತ್ತು ಸಜೀವ ದಹನ



ಯಳಂದೂರು, ಜ.9– ಕೊಟ್ಟಿಗೆಗೆ ಬೆಂಕಿ ತಗುಲಿ ಎರಡು ಎತ್ತುಗಳು ಸಜೀವ ದಹನವಾಗಿರುವ ಘಟನೆ ತಾಲೂಕಿನ ವೈ.ಕೆ.ಮೋಳೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಉಪ್ಪಾರ ಬಡಾವಣೆ ನಿವಾಸಿ ಸಿದ್ದರಾಜು ಎಂಬುವರಿಗೆ ಸೇರಿದ ಗುಡಿಸಲಿನ ಕೊಟ್ಟಿಗೆಯಲ್ಲಿ ಎರಡು ಎತ್ತುಗಳನ್ನು ಕಟ್ಟಲಾಗಿತ್ತು. ಮಧ್ಯರಾತ್ರಿ ಗುಡಿಸಲಿಗೆ ಬೆಂಕಿ ಬಿದ್ದು, ಗುಡಿಸಲು ಸೇರಿದಂತೆ ಎರಡು ಎತ್ತುಗಳು, ಹುಲ್ಲು ಸುಟ್ಟು ಹೋಗಿದ್ದು, ಲಕ್ಷಾಂತರ ರೂ. ನಷ್ಟವಾಗಿದೆ. ಕೂಡಲೇ ಅಕ್ಕಪಕ್ಕದವರು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು. ಆದರೆ, ಅಷ್ಟರಲ್ಲಾಗಲೇ ಎರಡು ಎತ್ತುಗಳು ಸಜೀವ ದಹನವಾಗಿದ್ದವು. ಆಕಸ್ಮಿಕವಾಗಿ ಬೆಂಕಿ ಬಿದ್ದಿದೆಯೋ ಅಥವಾ ಯಾರಾದರು ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೋ ಎಂಬುದು ಪೊಲೀಸ್ ತನಿಖೆಯಿಂದ ಹೊರಬರಬೇಕಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಯಳಂದೂರು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪಶು ವೈದ್ಯಾಧಿಕಾರಿಯಿಂದ ಎತ್ತುಗಳ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಪೆಲಿಕಾನ್ಸ್ ತಂಡಕ್ಕೆ ಭೀಮರಾವ್ ಕ್ರಿಕೆಟ್ ಟ್ರೋಫಿ



ಚಾಮರಾಜನಗರ, ಜ.9– ನಗರದಲ್ಲಿ ರಾಮಸಮುದ್ರ ಪೆಲಿಕಾನ್ಸ್ ಕ್ರಿಕೆಟ್ ತಂಡದ ವತಿಯಿಂದ ನಡೆದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಪೆಲಿಕಾನ್ಸ್ ಕ್ರಿಕೆಟ್ ತಂಡದ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ ಭೀಮರಾವ್ ಟ್ರೋಫಿ, ನಗದು ಬಹುಮಾನವನ್ನು ತನ್ನ ಮುಡಿಗೇರಿಸಿಕೊಂಡಿದೆ.

ಚಾ.ನಗರದ ಎಫ್‌ಸಿಸಿ ತಂಡ ದ್ವಿತೀಯ ಸ್ಥಾನ ಪಡೆದು ಟ್ರೋಫಿ, ನಗದು ಬಹುಮಾನ ಪಡೆದಿದೆ. ನಗರದ ದೀನಬಂಧು ಶಾಲೆ ಪಕ್ಕದ ಮೈದಾನದಲ್ಲಿ ಪೆಲಿಕಾನ್ಸ್ ಕ್ರಿಕೆಟ್ ತಂಡದ ವತಿಯಿಂದ ನಡೆದ ಭೀಮ್‌ರಾವ್ ಟ್ರೋಫಿ– 2023 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಪ್ರಥಮ ಸ್ಥಾನ ಪಡೆದ ಪೆಲಿಕಾನ್ಸ್ ಕ್ರಿಕೆಟ್ ತಂಡಕ್ಕೆ ಭೀಮ್‌ರಾವ್ ಟ್ರೋಫಿ, ನಗದು ಬಹುಮಾನ ವಿತರಿಸಿದ ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಮಾತನಾಡಿ, ಯುವಕರು, ವಿದ್ಯಾರ್ಥಿಗಳು ಕ್ರೀಡಾ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರಮಪಟ್ಟರೇ ಮಾತ್ರ ಸಾಧನೆ ಮಾಡಲು ಸಾಧ್ಯ. ಭಾರತ ಕ್ರಿಕೆಟ್ ತಂಡದ ನಾಯಕ ರಾಹುಲ್ ಸಾಮಾನ್ಯ ರೈತನ ಮಗನಾಗಿದ್ದು, ಕ್ರಿಕೆಟ್ ಆಟಗಾರರಿಗೆ ಮಾದರಿಯಾಗಿದ್ದಾರೆ. ಆದ್ದರಿಂದ ಯುವಕರು, ವಿದ್ಯಾರ್ಥಿಗಳು ಬೇರೆ ಕಡೆ ಗಮನ ಕೊಡದೆ ದೂರದೃಷ್ಟಿಯಿಂದ ಆಡಿದರೆ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಆಟಗಾರರಾಗಿ ಬೆಳೆಯಲು ಸಾಕಷ್ಟು ಅವಕಾಶ ಇದೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರು ದೇಶದ ಭದ್ರತೆಗಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಮುಂದಿನ ದಿನಗಳಲ್ಲಿ ನನಗೆ ಒಳ್ಳೆಯ ಅವಕಾಶ ಸಿಕ್ಕರೆ ನನ್ನನ್ನು ಬೆಂಬಲಿಸಬೇಕು ಎಂದು ರುದ್ರೇಶ್ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ನಂದೀಶ್ ಮೂಡ್ಲುಪುರ, ಕನಕಪುರ ಯೋಜನಾ ಪ್ರಾಧಿಕಾರದ ಜಗನ್, ಶಿವಕುಮಾರ್, ಬಸವಣ್ಣ ನೇಮಿರಾಜ್, ಶಿವರುದ್ರಸ್ವಾಮಿ, ಸಿದ್ದೂರಪ್ಪ, ಕ್ರಿಕೆಟ್ ಆಟಗಾರರು ಹಾಜರಿದ್ದರು.

ನಾಳೆ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಗೋಲಕ ಹಣ ಎಣಿಕೆ

ಚಾಮರಾಜನಗರ, ಜ.9– ಮಲೆ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಜನವರಿ 11 ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮರಾಜನಗರ ತಾಲೂಕಿನ ಕಿಲಗೆರೆ ಗ್ರಾಮದ ಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸೋಮವಾರ ತೆರಕಣಾಂಬಿ ಯೋಜನಾ ಕಚೇರಿ ವ್ಯಾಪ್ತಿಯ ಕೊತ್ತಲವಾಡಿ ವಲಯದ ಕಿಲಗೆರೆ ಕ್ಷೇತ್ರದ ನೂತನ ಬೃಂದಾ ಜ್ಞಾನ ವಿಕಾಸ ಕೇಂದ್ರವನ್ನು ಯರಗನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಮೀನಾಕ್ಷಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಿಲಗರೆ ಮಠದ ಕಾಳಿಂಗಸ್ವಾಮಿ, ಗ್ರಾಮ ಪಂಚಾಯತಿ ಸದಸ್ಯರಾದ ಸೋಮಶೇಖರಪ್ಪ, ಮಹೇಂದ್ರಕುಮಾರ್, ಜ್ಞಾನ ವಿಕಾಸ ಕೇಂದ್ರದ ಜಿಲ್ಲಾ ನಿರ್ದೇಶಕಿ ಲತಾ ಬಂಗೇರಾ, ಯೋಜನಾಧಿಕಾರಿ ದಿನೇಶ್, ಒಕ್ಕೂಟದ ಅಧ್ಯಕ್ಷೆ ರತ್ನಮ್ಮ, ವಲಯದ ಮೇಲ್ವಿಚಾರಕ ರಘು, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಅನಿತಾ ಇತರರಿದ್ದರು.



ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ಪ್ಯಾಕೇಜ್ ಘೋಷಿಸಲು ವಾಟಾಳ್ ನಾಗರಾಜ್ ಆಗ್ರಹ



ಚಾಮರಾಜನಗರ, ಜ.9– ರಾಜ್ಯ ಸರ್ಕಾರ ಕೂಡಲೇ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ಪ್ಯಾಕೇಜ್ ಘೋಷಿಸಬೇಕು, 1 ಲಕ್ಷ ಮನೆಗಳನ್ನು ಕೊಡಬೇಕು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಗ್ರಹಿಸಿದರು.

ತಾಲೂಕಿನ ಪಣ್ಯದಹುಂಡಿ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿ ಗ್ರಾಮಸ್ಥರಿಂದ ಸಮಸ್ಯೆ ಆಲಿಸಿದ ಅವರು, 2ನೇ ಹಂತ ಕಾವೇರಿ ಕುಡಿಯುವ ನೀರಿನ ಯೋಜನೆ ಆಗಲೇಬೇಕು ಎಂದು ಒತ್ತಾಯಿಸಿದರು.

ಚಾಮರಾಜನಗರ ಜಿಲ್ಲೆಯಾಗಿ 25 ವರ್ಷವಾಯಿತು. ಸರ್ಕಾರ ಜಿಲ್ಲಾ ಉತ್ಸವ ಮಾಡಲಿಲ್ಲ. ಜಿಲ್ಲೆಗೆ ಆಯವ್ಯಯದಲ್ಲಿ ಅನುದಾನ ಮೀಸಲಿಡಲಿಲ್ಲ. ನಾನು ಶಾಸಕನಾಗಿದ್ದಾಗ ಇದನ್ನು ಜಿಲ್ಲೆ ಮಾಡಿದ್ದು, ಇಲ್ಲಿಗೆ ಕಾವೇರಿ ನೀರು ತಂದದ್ದು, ಜಿಲ್ಲಾ ಕ್ರೀಡಾಂಗಣ, ಜೋಡಿರಸ್ತೆ ಮಾಡಿದ್ದು ನಾನು. ಆದರೆ ಇಲ್ಲಿ ಹೊಸದಾಗಿ ಏನು ಆಗಿಲ್ಲ ಎಂದರು.

ಚುನಾವಣೆ ವ್ಯವಸ್ಥೆ ಒಂದು ರೀತಿ ಭ್ರಷ್ಟ ವ್ಯವಸ್ಥೆ: ಚುನಾವಣೆಯ ವ್ಯವಸ್ಥೆ ಒಂದು ರೀತಿಯಲ್ಲಿ ಭ್ರಷ್ಟ ವ್ಯವಸ್ಥೆಯಾಗಿದೆ. ಜಾತಿ, ಹಣ, ಇವತ್ತು ನಡೆಯುತ್ತಿದೆ. ಯಾವುದೇ ಕಾರಣಕ್ಕೂ ಹಣ, ಜಾತಿಗೆ ಮೋಸ ಹೋಗಬೇಡಿ. ಚಾಮರಾಜನಗರ ಉಳಿಯಬೇಕು. ಪ್ರತಿ ವಿಧಾನಸಭೆ ಅಧಿವೇಶನದಲ್ಲಿ ಚಾಮರಾಜನಗರದ ಬಗ್ಗೆ ಮಾತನಾಡಬೇಕು. ಚಾಮರಾಜನಗರ, ರಾಜ್ಯದ ಬಗ್ಗೆ, ಸಮಗ್ರ ಕನ್ನಡಿಗರ ಬಗ್ಗೆ ಮಾತನಾಡುವ ಶಕ್ತಿ, ಸಾಮರ್ಥ್ಯ ಇರುವುದು ಈ ವಾಟಾಳ್ ನಾಗರಾಜ್‌ಗೆ ಮಾತ್ರ ಎಂದರು. ಯಾರೂ ಮಾತನಾಡುತ್ತಿಲ್ಲ. ನಾನು ಚಾಮರಾಜನಗರ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತೇನೆ. ಈ ವಾಟಾಳ್ ನಾಗರಾಜ್ ಗೆದ್ದರೆ 100 ಶಾಸಕರಿಗೆ ಸಮ. ಚಾಮರಾಜಗರದ ಅಭಿವೃದ್ಧಿಗಾಗಿ ನನ್ನನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಮಂತ್ರಿಗಳೆಂದರೆ ಪಾಳೇಗಾರರೇ?: ಇತ್ತೀಚೆಗೆ ಮಂತ್ರಿಗಳಿಗೆ ಸಭ್ಯತೆ, ಗೌರವ ಇಲ್ಲದಂತಾಗಿದೆ. ಮಂತ್ರಿಗಳು ಅಧಿಕಾರಿಯ ಜೊತೆ ಮಾತನಾಡುವಾಗ ಗೌರವ, ಗಾಂಭೀರ್ಯದಿಂದ ಮಾತನಾಡಬೇಕು. ಗೌರವ ಕಳೆದುಕೊಳ್ಳಬಾರದು. ಅಧಿಕಾರಿಗಳು ಒಳ್ಳೆಯವರಾಗಿದ್ದು, ಅವರದೇ ಆದ ಕೆಲಸ ಮಾಡಿಕೊಂಡು ಇರುತ್ತಾರೆ. ಅವರ ಮೇಲೆ ದಬ್ಬಾಳಿಕೆ ಮಾಡುವುದು, ಅಗೌರವವಾಗಿ ಕರೆಯುವುದು ಆಗಬಾರದು. ರಾಜ್ಯದ ಅನೇಕ ಕಡೆ ಮಂತ್ರಿಗಳು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ಮಂತ್ರಿಗಳು ಆಕಾಶದಿಂದ ಇಳಿದಿಲ್ಲ. ಮಂತ್ರಿಗಳು ಎಂದರೆ ಪಾಳೇಗಾರರೇ? ಎಲ್ಲಾ ಮಂತ್ರಿಗಳಲ್ಲೂ ಒಂದು ರೀತಿ ಅಹಂಕಾರ, ದರ್ಪ ಇದ್ದು ಇದು ಒಳ್ಳೆಯದಲ್ಲ. ಇದು ಅತ್ಯಂತ ಅಪರಾಧ, ಅಗೌರವವಾಗಿದೆ ಎಂದರು.

ಈ ಸಂದರ್ಭದಲ್ಲಿ ನಾಗರಾಜಮೂರ್ತಿ, ವರದರಾಜು, ದೇವರಾಜು, ಗುರುಸಿದ್ದಪ್ಪ, ಕುಮಾರ್, ಶಿವಲಿಂಗಮೂರ್ತಿ, ಮಹೇಶ್, ಗೋಪಾಲನಾಯಕ, ಸಂಜಯ್ ಇತರರು ಹಾಜರಿದ್ದರು.

ಕಾರ್ಮಿಕರ ಸಂಘದ ಕ್ಯಾಲೆಂಡರ್ ಬಿಡುಗಡೆ; ಮಕ್ಕಳಿಗೆ ಕಿಟ್ ವಿತರಣೆ



ಮೈಸೂರು,ಜ.9(ಎಂಕೆ)– ಮೈಸೂರಿನ ಶ್ರೀರಾಂಪುರದಲ್ಲಿರುವ ಟಿ.ಎಸ್.ಕನ್ವೆನ್ಷನ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಕ್ಯಾಲೆಂಡರ್ ಬಿಡುಗಡೆ ಹಾಗೂ ಕಾರ್ಮಿಕ ಮಕ್ಕಳಿಗೆ ಕಿಟ್ ವಿತರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಾಸಕ ಜಿ.ಟಿ.ದೇವೇಗೌಡರು ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರಲ್ಲದೆ 1ರಿಂದ 5ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೆ ಕಿಟ್‌ಗಳನ್ನು ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಕಾರ್ಮಿಕ ಇಲಾಖೆಯಿಂದ ದೊರೆಯುವಂತಹ ಸೌಲಭ್ಯಗಳನ್ನು ಕಾರ್ಮಿಕರು ಪಡೆದುಕೊಂಡು ತಮ್ಮ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸವನ್ನು ಕೊಡಿಸಬೇಕೆಂದು ಕಿವಿಮಾತು ಹೇಳಿದರು. ಕಾರ್ಮಿಕ ಇಲಾಖೆ ಅಧಿಕಾರಿ ರಾಜೇಶ್ ಜಾದವ್, ಸಂಘದ ಅಧ್ಯಕ್ಷ ಹೆಚ್.ಜೆ.ಲೋಕೇಶ್, ಉಪಾಧ್ಯಕ್ಷ ಆರ್.ನಾಗರಾಜು, ಕಾರ್ಯದರ್ಶಿ ಆರ್.ಚಂದ್ರಶೇಖರ್, ಶ್ರೀನಿವಾಸ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಜನರಿಗೆ ನಿಖರ ಭೂ ದಾಖಲೆ

ಸಮರ್ಪಕ ದಾಖಲೆ ಒದಗಿಸುವ ಉದ್ದೇಶದಿಂದ ಚಾಲನೆ ನೀಡಲಾಗಿದೆ. ಇದು ಇಡೀ ರಾಷ್ಟ್ರದಲ್ಲಿ ನಡೆಯುತ್ತಿದ್ದು, ರಾಜ್ಯದಲ್ಲೂ ಡ್ರೋಣ್ ಮೂಲಕ ಸರ್ವೆ ಕಾರ್ಯ ಆರಂಭಗೊಂಡಿದ್ದು, ಇನ್ನೊಂದು ವರ್ಷದಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ. ಸರ್ವೇ ನಂತರ ರಾಜ್ಯಾದ್ಯಂತ ಇರುವ ಭೂಮಿಯ ಸಂಪೂರ್ಣ ವಿವರ ಡಿಜಿಟಲೀಕರಣಗೊಳ್ಳಲಿದ್ದು, ಆ ಮೂಲಕ ಭೂ ವಿವಾದಗಳು ತಾನಾಗಿಯೇ ಕಡಿಮೆಯಾಗಲಿವೆ ಎಂದು ಹೇಳಿದ್ದಾರೆ.

ಲಂಬಾಣಿ ತಾಂಡ ಕಂದಾಯ ಗ್ರಾಮ: ರಾಜ್ಯದ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಜನವರಿ 19 ರಂದು ಚಾಲನೆ ನೀಡಲಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಅಶೋಕ್ ತಿಳಿಸಿದ್ದಾರೆ.

ಲಂಬಾಣಿ, ಗೊಲ್ಲರು, ಕುರುಬರು ಸೇರಿದಂತೆ ವಿವಿಧ ಸಮುದಾಯಕ್ಕೆ ಸೇರಿದ 2000ಕ್ಕೂ ಹೆಚ್ಚು ಹಟ್ಟಿ ಮತ್ತು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು. ಸಮುದಾಯದವರಿಗೆ ಅವರು ವಾಸಿಸುವ ಭೂಮಿಯ ಹಕ್ಕುಪತ್ರ ನೀಡುವ ಮೊದಲ ಹಂತದ ಕಾರ್ಯ ಜನವರಿ 19ರಂದು ಕಲಬುರಗಿಯಲ್ಲಿ ನಡೆಯಲಿದೆ.

ಮೊದಲ ಹಂತದಲ್ಲಿ 51999 ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುವುದು. ಹಕ್ಕುಪತ್ರ ನೀಡಿದ ನಂತರ ಸಮೀಪದ ನೋಂದಣಿ ಕಚೇರಿಯಲ್ಲಿ ಅವರ ಆಸ್ತಿಪಾಸ್ತಿಗಳು ದಾಖಲೆಗೊಳ್ಳಲಿವೆ.

ತದನಂತರ ಈ ದಾಖಲೆ ಆಧಾರದ ಮೇಲೆ ಅವರು, ಬ್ಯಾಂಕ್‌ನಿಂದ ಸಾಲ ಪಡೆದುಕೊಳ್ಳಲು ಸಹಕಾರಿಯಾಗಲಿದೆ. ಲಂಬಾಣಿ ತಾಂಡಗಳು, ಕುರುಬರ ಹಟ್ಟಿಗಳು ಸೇರಿದಂತೆ ರಾಜ್ಯದ ಲಕ್ಷಾಂತರ ಕುಟುಂಬಗಳು ಗುರುತು ಇಲ್ಲದಂತೆ ಬದುಕುತ್ತಿವೆ. ಈ ಹಿನ್ನೆಲೆಯಲ್ಲಿ ಅವರಿರುವ ಜಾಗವನ್ನು ಮೊದಲು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ, ತದ ನಂತರ ಅವರಿಗೆ ಹಕ್ಕುಪತ್ರ ನೀಡಲು ತೀರ್ಮಾನಿಸಲಾಯಿತು ಎಂದು ಅವರು ವಿವರಿಸಿದ್ದಾರೆ. ಮೊದಲ ಹಂತದಲ್ಲಿ ಐವತ್ತು ಸಾವಿರಕ್ಕೂ ಹೆಚ್ಚು ಮಂದಿಗೆ ಹಕ್ಕುಪತ್ರ ನೀಡಲಾಗುವುದು. ಎರಡನೇ ಹಂತದಲ್ಲಿ ಪುನಃ ಐವತ್ತು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುವುದು ಎಂದ ಅವರು, ಒಟ್ಟಿನಲ್ಲಿ ಮಾರ್ಚ್ ತಿಂಗಳ ಒಳಗೆ ಈ ಜನರಿಗೆ ಅವರು ವಾಸಿಸುವ ಜಾಗದ ಹಕ್ಕುಪತ್ರ ನೀಡಿಕೆ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಹೇಳಿದ್ದಾರೆ. ಕಲಬುರಗಿಯಲ್ಲಿ ನರೇಂದ್ರಮೋದಿ ಅವರ ಸಮ್ಮುಖದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಐವತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳ ಜನ ತಮ್ಮ ಸಾಂಪ್ರದಾಯಿಕ ಲಂಬಾಣಿ ಉಡುಪಿನಲ್ಲಿ ಭಾಗವಹಿಸಲಿದ್ದಾರೆ ಎಂದರು. ಲಂಬಾಣಿ ತಾಂಡಾಗಳು, ಕುರುಬರ ಹಟ್ಟಿಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾದ ನಂತರ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ರಸ್ತೆ, ವಿದ್ಯುತ್, ಮೋರಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯ ನಡೆಯಲಿದೆ. ಇದೇ ರೀತಿ ರಾಜ್ಯ ಸರ್ಕಾರದ ವತಿಯಿಂದ ನಡೆಯುವ ವಿವಿಧ ಯೋಜನೆಗಳು ಜಾರಿಗೊಳ್ಳಲಿವೆ ಎಂದು ಅವರು ತಿಳಿಸಿದ್ದಾರೆ.

ಮೂರು ದಿನ ಪ್ರಧಾನಿ ಮೋದಿ ಪ್ರವಾಸ

ಜನವರಿ 27 ರಂದು ತುಮಕೂರಿನಲ್ಲಿ ಕ್ರೀಡಾಂಗಣ ಉದ್ಘಾಟನೆಗಾಗಿ ಮತ್ತೆ ರಾಜ್ಯಕ್ಕೆ ಬರಲಿದ್ದಾರೆ. ತಮ್ಮ ಎಲ್ಲಾ ಭೇಟಿಯ ಸಂದರ್ಭದಲ್ಲೂ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈಗಾಗಲೇ ನಾಲ್ಕೈದು ಬಾರಿ ರಾಜ್ಯ ಪ್ರವಾಸ ಕೈಗೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಚಾಲನೆ ನೀಡುವುದರ ಜೊತೆಗೆ ಡಬಲ್ ಇಂಜಿನ್ ಸರ್ಕಾರದಿಂದ ಯಾವ ರೀತಿ ಅಭಿವೃದ್ಧಿ ಸಾಧ್ಯ ಎಂದು ರಾಜ್ಯದ ಜನತೆಗೆ ಪದೇ ಪದೇ ಬಿಂಬಿಸಿ ಹೋಗಿದ್ದಾರೆ. ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಕೊರತೆ ಎದ್ದು ಕಾಣುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ವರಿಷ್ಠರು ಮುಂಬರುವ ವಿಧಾನಸಭಾ ಚುನಾವಣೆಗೆ ಮೋದಿ ವರ್ಚಸ್ಸಿನ ಮೂಲಕವೇ ಕರ್ನಾಟಕದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಕಾರ್ಯಕ್ರಮ ರೂಪಿಸಿದೆ. ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ಮೊದಲ ಭಾಗದ ವೇಳೆಗೆ ಪ್ರಧಾನಿಯವರು ಇನ್ನೂ ಏಳು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನಿ ಮೋದಿಯವರು ಜನವರಿ 12 ರ ಮಧ್ಯಾಹ್ನದಂದು ಹುಬ್ಬಳ್ಳಿಗೆ ಆಗಮಿಸುತ್ತಿದ್ದು, ರಾಷ್ಟ್ರೀಯ ಯುವಜನೋತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಏಳು ದಿನಗಳ ಈ ಕಾರ್ಯಕ್ರಮದಲ್ಲಿ ದೇಶದ 28 ರಾಜ್ಯಗಳಿಂದ ಹಾಗೂ 8 ಕೇಂದ್ರೀಯ ಪ್ರಾಂತ್ಯದಿಂದ ಯುವಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಮತ್ತೆ ಜನವರಿ 19 ರಂದು ಪ್ರಧಾನಿ ಮೋದಿಯವರು ನಾರಾಯಣಪುರಕ್ಕೆ ಆಗಮಿಸಲಿದ್ದು, ಕೇಂದ್ರ ಹಾಗೂ ರಾಜ್ಯ ಅನುದಾನಿತ ನಾರಾಯಣಪುರ ಎಡದಂಡೆ ಕಾಲುವೆ (ಎನ್‌ಎಲ್‌ಬಿಸಿ) ಆಧುನೀಕರಣದ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕಲಬುರಗಿಯಲ್ಲಿ ಬಂಜಾರ ಸಮಾವೇಶ ನಡೆಸುವ ಯೋಜನೆಯಿದ್ದು, ಪ್ರಧಾನಿ ಮೋದಿಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ಇನ್ನೂ ನಿಶ್ಚಯವಾಗಿಲ್ಲ ಎಂದು ತಿಳಿಸಿದರು.

ಕೋಲಾರದಿಂದ ಸ್ಪರ್ಧೆ: ಸಿದ್ದರಾಮಯ್ಯ ಘೋಷಣೆ

ಪ್ರತೀ ವಾರ ಕೋಲಾರಕ್ಕೆ ಬರುತ್ತೇನೆ. ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗಾಗಿ ಯಾವುದೇ ನಾಯಕರ ಜೊತೆ ಬರುವ ಅವಶ್ಯಕತೆ ಇಲ್ಲ. ಚಡ್ಡಿ ಹಾಕಿರುವ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಯೂ ಕೂಡ ನನ್ನನ್ನು ನೇರವಾಗಿ ಭೇಟಿ ಮಾಡಬಹುದಾಗಿದೆ. ಇದು ಈ ಹಿಂದಿನಿಂದಲೂ ನಾನು ಅನುಸರಿಸಿಕೊಂಡು ಬಂದಿರುವ ಸಂಪ್ರದಾಯ ಎಂದರಲ್ಲದೇ, ತಾನು ಶಾಸಕನಾದರೆ ಕೋಲಾರ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಅಭಿವೃದ್ಧಿಪಡಿಸುತ್ತೇನೆ ಎಂದು ಭರವಸೆ ನೀಡಿದರು. ನನಗೆ ಸ್ಪರ್ಧಿಸಲು ಕ್ಷೇತ್ರವೇ ಇಲ್ಲ. ಅದಕ್ಕಾಗಿ ಕ್ಷೇತ್ರ ಹುಡುಕುತ್ತಿದ್ದೇನೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಐದು ಬಾರಿ, ವರುಣಾದಿಂದ ಎರಡು ಬಾರಿ ಶಾಸಕನಾಗಿದ್ದು, ಕಳೆದ ಚುನಾವಣೆಯಲ್ಲಿ ಬಾದಾಮಿಯಲ್ಲಿ ಸ್ಪರ್ಧಿಸಿ ಗೆದ್ದು, ಹಾಲಿ ಬಾದಾಮಿ ಶಾಸಕನಾಗಿದ್ದೇನೆ. ವರುಣಾ ಕ್ಷೇತ್ರದ ಜನರೂ ಕೂಡ ಅಲ್ಲೇ ಸ್ಪರ್ಧಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಬಾದಾಮಿ ದೂರವಾಗುತ್ತದೆ ಎಂಬ ಕಾರಣಕ್ಕೆ ನಾನು ಅಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದರೆ ಅಲ್ಲಿನ ಜನರು ಹೆಲಿಕಾಪ್ಟರ್ ಕೊಡಿಸುತ್ತೇವೆ, ಇಲ್ಲೇ ಸ್ಪರ್ಧಿಸಿ ಎಂದು ಒತ್ತಾಯಿಸುತ್ತಿದ್ದಾರೆ ಎಂದ ಸಿದ್ದರಾಮಯ್ಯ, ಕಳೆದ ಬಾರಿ ನಾನು ಕೋಲಾರಕ್ಕೆ ಬಂದಾಗ ದೇವಸ್ಥಾನ, ಮಸೀದಿ ಹಾಗೂ ಚರ್ಚ್‌ಗಳಿಗೆ ಭೇಟಿ ನೀಡಿ ಅಲ್ಲಿನ ಗುರುಗಳ ಜೊತೆ ಮಾತನಾಡಿದ್ದೇನೆ. ಕೆಲವು ಗ್ರಾಮಗಳಿಗೂ ಭೇಟಿ ನೀಡಿದ್ದೇನೆ. ಆಗ ಎಲ್ಲರೂ ಇಲ್ಲೇ ಸ್ಪರ್ಧಿಸಬೇಕು ಎಂದು ಒತ್ತಾಯಿಸಿದ್ದಾರೆ ಎಂದರು.

ಕೋಲಾರದ ಹಾಲಿ ಶಾಸಕ ಶ್ರೀನಿವಾಸಗೌಡ ಕೂಡ ಇಲ್ಲೇ ಸ್ಪರ್ಧಿಸುವಂತೆ ಹೇಳುತ್ತಿದ್ದಾರೆ. ಏಳು ಬಾರಿ ಸಂಸದರಾಗಿದ್ದು, ಕೇಂದ್ರ ಸಚಿವರೂ ಆಗಿದ್ದ ಕೆ.ಹೆಚ್. ಮುನಿಯಪ್ಪ, ರಾಜಕಾರಣದಲ್ಲಿ ನನಗಿಂತಲೂ ಹಿರಿಯರಾದ ರಮೇಶ್‌ಕುಮಾರ್ ಸೇರಿದಂತೆ ಕೋಲಾರ ಜಿಲ್ಲೆಯ ಅನೇಕ ಮುಖಂಡರು ಹಾಗೂ ಇಲ್ಲಿ ನೆರೆದಿರುವ ನೀವೆಲ್ಲರೂ ನನ್ನನ್ನು ಇಲ್ಲೇ ಸ್ಪರ್ಧಿಸಬೇಕು ಎಂದು ಒತ್ತಾಯಿಸುತ್ತಿದ್ದೀರಿ. ನಿಮ್ಮ ಪ್ರೀತಿ ಹಾಗೂ ಅಭಿಮಾನವನ್ನು ತಿರಸ್ಕರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೋಲಾರದಲ್ಲೇ ಸ್ಪರ್ಧಿಸಲು ತೀರ್ಮಾನಿಸಿದ್ದೇನೆ ಎಂದು ಸಿದ್ದರಾಮಯ್ಯ ಘೋಷಿಸಿದಾಗ ಕರಘೋಷ ಮುಗಿಲು ಮುಟ್ಟಿತ್ತು. ಕರಘೋಷ ನಿಲ್ಲುವವರೆಗೂ ತಮ್ಮ ಭಾಷಣವನ್ನು ನಿಲ್ಲಿಸಿದ್ದ ಸಿದ್ದರಾಮಯ್ಯ ಅವರು, ನಂತರ ಆದರೆ ನನ್ನ ಸ್ಪರ್ಧೆಗೆ ಹೈಕಮಾಂಡ್‌ನ ಅನುಮೋದನೆ ಬೇಕು ಎಂದು ಹೇಳಿದರು. ಸಮಾರಂಭದಲ್ಲಿ ಮಾತನಾಡಿದ ಎಲ್ಲಾ ಮುಖಂಡರೂ ಕೋಲಾರದಲ್ಲೇ ಸ್ಪರ್ಧಿಸಬೇಕೆಂದು ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳ ವಿತರಣೆ; 'ಅರಿವು' ಕಾರ್ಯಾಗಾರ

ಸಂವಿಧಾನದ ಆಶಯದಂತೆ ಸಾಮಾಜಿಕ ವ್ಯವಸ್ಥೆಯಡಿ ಸವಲತ್ತು ವಿತರಣೆ, ಶ್ರಮಿಕರ ಮಕ್ಕಳಿಗೆ ಉತ್ತಮ ಶಿಕ್ಷಣ: ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿವರಣೆ

ಮೈಸೂರು, ಜ.9(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಮೈಸೂರು ವಿಭಾಗೀಯ ಮಟ್ಟದ ವಿವಿಧ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ 'ಅರಿವು' ಮೂಡಿಸುವ ಕಾರ್ಯಾಗಾರ ಹಾಗೂ ಸವಲತ್ತುಗಳ ವಿತರಣಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸಾಲ–ಸೌಲಭ್ಯದ ಚೆಕ್ ಹಾಗೂ ಅರ್ಹ ಫಲಾನುಭವಿಗಳಿಗೆ ಸರಕು ಸಾಗಾಣೆ ವಾಹನಗಳ ಕೀ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಇವತ್ತು ಕೂಲಿ ಕೆಲಸ ಮಾಡುವವರ ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆದು ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದುಕೊಳ್ಳಲು ಭಾರತ ಸಂವಿಧಾನ ಅವಕಾಶ ನೀಡಿದೆ. ಕ್ರೈಸ್(ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ) ಶಾಲೆಗಳಲ್ಲಿ 6ನೇ ತರಗತಿಯಿಂದ ಪಿಯುಸಿವರೆಗೆ ಎಸ್‌ಸಿ ಅಲೆಮಾರಿ ಸಮುದಾಯದ ಮಕ್ಕಳನ್ನು ಅನಿರ್ಬಂಧಿತವಾಗಿ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. ಪ್ರತಿಷ್ಠಿತ ಶಾಲೆಗಳಲ್ಲಿ ಬಡವರ, ಕೂಲಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವ ಮೂಲಕ ಪಾರದರ್ಶಕವಾದ ಆಡಳಿತ ನೀಡಲಾಗುತ್ತಿದೆ ಎಂದು ಹೇಳಿದರು.

ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಬೇಕು ಎಂದು ಮೊದಲಿನಿಂದಲೂ ಹೇಳಿಕೊಂಡು ಬಂದರೆ ಹೊರತು ಯಾರೂ ಮಾಡಲಿಲ್ಲ. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ಮೀಸಲಾತಿ ಹೆಚ್ಚಳದಂತಹ ಕಠಿಣ ನಿರ್ಧಾರ ತೆಗೆದುಕೊಳ್ಳುವ ಮೂಲಕ ಸಮುದಾಯದ ಅಭಿವೃದ್ಧಿ ಪರವಾಗಿ ನಿಂತಿದೆ. ಮೀಸಲಾತಿ ಹೆಚ್ಚಳವನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿಗಳಾಗಿ ಬದುಕಬೇಕು. ಕುಟುಂಬದ ಆದಾಯ ಹೆಚ್ಚಾಗಬೇಕು ಎಂಬುದಷ್ಟೇ ಸರ್ಕಾರದ ಆಶಯವಾಗಿದೆ ಎಂದರು.

ಬಿಪಿಎಲ್ ಕಾರ್ಡುದಾರರಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲು ನಿರ್ಧರಿಸಿದ್ದು, ಇದರಿಂದ ಸಮಾಜ ಕಲ್ಯಾಣ ಇಲಾಖೆಗೆ 800 ಕೋಟಿ ರೂ. ಖರ್ಚು ಬೀಳಲಿದೆ. 17 ಸಾವಿರ ಕೊಳವೆ ಬಾವಿಗಳನ್ನು ತೆರೆಯಲಿದ್ದು, ಪ್ರತೀ ವಿಧಾನ ಸಭಾ ಕ್ಷೇತ್ರಕ್ಕೂ 70–75 ಕೊಳವೆ ಬಾವಿಗಳು ದೊರೆಯಲಿವೆ. ಸರ್ಕಾರಿ ಯೋಜನೆಗಳು ಸರಿಯಾಗಿ ಫಲಾನುಭವಿಗಳಿಗೆ ತಲುಪುತ್ತಿಲ್ಲ ಎಂಬ ದೂರುಗಳು ಕೇಳಿಬಂದವು. ಅದಕ್ಕಾಗಿ ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡುವ ವ್ಯವಸ್ಥೆ ರೂಪಿಸಲಾಗಿದೆ. ಆಧಾರ್ ಕಾರ್ಡ್ ಲಿಂಕ್ ಮಾಡುವ ಮೂಲಕ ಒಮ್ಮೆ ಸಾಲ–ಸೌಲಭ್ಯ ಪಡೆದವರು ಮತ್ತೆ ಪಡೆದುಕೊಳ್ಳದಂತೆ ಎಚ್ಚರಿಕೆ ವಹಿಸಿ, ಬೇರೆಯವರಿಗೆ ಅವಕಾಶ ಮಾಡಿಕೊಡುವ ಮೂಲಕ ಪಾರದರ್ಶಕತೆ ಕಾಯ್ದುಕೊಳ್ಳಲಾಗುತ್ತಿದೆ ಎಂದು ಹೇಳಿದರು.



ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವಿವಿಧ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ 'ಅರಿವು' ಮೂಡಿಸುವ ಕಾರ್ಯಾಗಾರ ಹಾಗೂ ಸವಲತ್ತುಗಳ ವಿತರಣಾ ಕಾರ್ಯಕ್ರಮದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಚೆಕ್ ವಿತರಿಸಿದರು. ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷವರ್ಧನ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಹೆಚ್.ನಾಗೇಶ್ ಮತ್ತಿತರರಿದ್ದರು.

ನನಗಿಂತ ಶ್ರೇಷ್ಠರಿದ್ದಾರೆ, ಅವರಿಗೆ ಪ್ರಶಸ್ತಿ ನೀಡಿ...

ಮುಜರಾಯಿ ಇಲಾಖೆ ಸಚಿವನಾಗಿದ್ದಾಗ ಬಡಮಕ್ಕಳಿಗೆ ಧಾರ್ಮಿಕ, ಸಾಮಾಜಿಕ ಅರಿವು ಶಿಕ್ಷಣ ನೀಡುವಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ 'ಧರ್ಮೋತ್ಥಾನ ಪ್ರಶಸ್ತಿ' ನೀಡಲು ನಿರ್ಧರಿಸಲಾಗಿತ್ತು. ಮೊದಲ ಪ್ರಶಸ್ತಿಯನ್ನು ಇತ್ತೀಚೆಗೆ ಇಹಲೋಕ ತ್ಯಜಿಸಿದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ನೀಡುವುದು ಸೂಕ್ತವೆಂದು ನಿರ್ಧರಿಸಿ, ಅವರನ್ನು ಈ ಹಿಂದೆ ಭೇಟಿ ಮಾಡಿ ಪ್ರಶಸ್ತಿ ಸ್ವೀಕರಿಸುವಂತೆ ಮನವಿ ಮಾಡಿದಾಗ ಸ್ವಾಮೀಜಿಯವರು ನನಗಿಂತಲೂ ಸೇವೆ ಮಾಡಿದವರು ಬೇಕಾದಷ್ಟು ಮಂದಿಯಿದ್ದಾರೆ. ಅವರಿಗೆ ಮೊದಲು ಕೊಡಿ ಎಂದು ಪ್ರಶಸ್ತಿ ತಿರಸ್ಕರಿಸಿದ್ದರು. ಬಳಿಕ ಸಿದ್ದೇಶ್ವರ ಸ್ವಾಮೀಜಿಯವರಂತೆಯೇ ಸೇವೆ ಮಾಡುತ್ತಿರುವ ಬೇರೆ ಯಾರನ್ನಾದರೂ ಹುಡುಕೋಣವೆಂದರೆ ಅವರ ಸಮಕ್ಕೆ ಮತ್ಯಾರು ಇರಲಿಲ್ಲ. ಅಷ್ಟರಲ್ಲಿ ಮುಜರಾಯಿ ಖಾತೆ ನನ್ನಿಂದ ಬಿಟ್ಟು ಹೋಗಿದ್ದರಿಂದ ಪ್ರಶಸ್ತಿ ನೀಡುವ ಯೋಚನೆಯೂ ಅಲ್ಲಿಗೆ ಕೊನೆಗೊಂಡಿತು ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರನ್ನು ಸ್ಮರಿಸಿದರು.

ಬೇರೆಯವರು ಉದ್ಧಾರ ಆಗಿದ್ದಾರೆ..!

ಎಸ್‌ಸಿ–ಎಸ್‌ಟಿ ಹೆಸರು ಹೇಳಿಕೊಂಡು ಬೇರೆಯವರು ಉದ್ಧಾರ ಆಗಿದ್ದಾರೆಯೇ ಹೊರತು ಅವರನ್ನು ಉದ್ಧಾರ ಮಾಡಲಿಲ್ಲ. ಆದರೆ ಬಿಜೆಪಿ ಸರ್ಕಾರ ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಒಳ್ಳೆಯ ಕೆಲಸ ಮಾಡುತ್ತಿದೆ. ಮೀಸಲಾತಿ ಹೆಚ್ಚಳ ಸೇರಿದಂತೆ ಹಲವಾರು ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದೆ.

– ಕೋಟಾ ಶ್ರೀನಿವಾಸ್ ಪೂಜಾರಿ, ಸಮಾಜ ಕಲ್ಯಾಣ ಇಲಾಖೆ ಸಚಿವ

ಯಾರ ರಕ್ಷಣೆಯೂ ಇಲ್ಲ...

ಕಾರ್ಯಕ್ರಮಕ್ಕೂ ಮುನ್ನ ಸ್ಯಾಂಟ್ರೋ ರವಿ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಕೋಟ ಶ್ರೀನಿವಾಸ್ ಪೂಜಾರಿ, ಯಾರ ರಕ್ಷಣೆಯನ್ನು ಮಾಡುವುದಿಲ್ಲ. ಉಪ್ಪು ತಿಂದವನು ನೀರು ಕುಡಿಯಲೇಬೇಕು. ಪ್ರಕರಣದ ಆಧಾರದ ಮೇಲೆ ಪೊಲೀಸ್ ಇಲಾಖೆ ತನಿಖೆ ಮಾಡಲಿದೆ. ಇದರಲ್ಲಿ ಯಾರ ಹಸ್ತಕ್ಷೇಪವಿಲ್ಲ. ತಪ್ಪು ಯಾರೇ ಮಾಡಿದರು ಅವರಿಗೆ ಶಿಕ್ಷೆ ಆಗಲೇಬೇಕು ಎಂದರು.

ಸಾಲ–ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ: ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಹೆಚ್.ನಾಗೇಶ್ ಮಾತನಾಡಿ, ಎಸ್‌ಸಿ ಸಮುದಾಯದ ಮಕ್ಕಳು ವಿದ್ಯಾವಂತರಾಗಬೇಕು. ಉನ್ನತ ಹುದ್ದೆಗಳನ್ನು ಪಡೆದು ಪೋಷಕರಿಗೆ ತೃಪ್ತಿ ತರುವಂತೆ ಸಾಧನೆ ಮಾಡಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸಾಕಷ್ಟು ಬಗೆಯ ಸಾಲ–ಸೌಲಭ್ಯಗಳಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಇಲ್ಲಿ ಯಾವುದೇ ರೀತಿಯ ಮಧ್ಯವರ್ತಿಗಳಿಲ್ಲ. ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುವುದು. ಹೊರಗಡೆಯ ಬಡ್ಡಿ ಸಾಲದ ಸುಳಿಯಲ್ಲಿ ಸಿಲುಕದೆ ಸರ್ಕಾರ ನೀಡುವ ಸಬ್ಸಿಡಿ ಸಾಲ–ಸೌಲಭ್ಯ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಎಂದು ಸಲಹೆ ನೀಡಿದರು.

ಮೇಯರ್ ಶಿವಕುಮಾರ್, ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ದೀನ್ ದಯಾಳ್ ಉಪಾಧ್ಯಾಯರ ಹೆಸರಿನಲ್ಲಿ ಈಗಾಗಲೇ 200 ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶ

ಸಾವಿರ ವಿದ್ಯಾರ್ಥಿಗಳಿಗೆ ಹೊಸದಾಗಿ ಹಾಸ್ಟೆಲ್ ವ್ಯವಸ್ಥೆ

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾಹಿತಿ



ಮೈಸೂರು, ಜ.9(ಎಂಕೆ)– ಮೈಸೂರು ಸೇರಿದಂತೆ ರಾಜ್ಯದ ಐದು ಕಡೆಗಳಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಹೆಸರಿನಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ವಸತಿ ನಿಲಯದ ವ್ಯವಸ್ಥೆ ಮಾಡಲಾಗುತ್ತಿದ್ದು, ಈಗಾಗಲೇ 200 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಲಾಗಿದೆ. ಇನ್ನುಳಿದ 800 ವಿದ್ಯಾರ್ಥಿಗಳಿಗೂ ಸದ್ಯದಲ್ಲೇ ಅವಕಾಶ ಕಲ್ಪಿಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ನೀಡಲು ರಾಜ್ಯ ಸರ್ಕಾರ 250 ಕೋಟಿ ರೂ. ಬಿಡುಗಡೆ ಮಾಡಿದೆ. 100 ಅಂಬೇಡ್ಕರ್ ವಸತಿ ನಿಲಯ ಹಾಗೂ 50 ಕನಕದಾಸ ವಸತಿ ನಿಲಯಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ ತಡೆ ಹಿಡಿದಿಲ್ಲ. ಕೇಂದ್ರದ ಸಹಯೋಗದೊಂದಿಗೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ವಿದ್ಯಾರ್ಥಿ ವೇತನ ಮಂಜೂರು ಮಾಡಲಿದೆ. ಕಳೆದೆರಡು ವರ್ಷ ಕೊರೊನಾದಿಂದಾಗಿ ವಿದ್ಯಾರ್ಥಿ ವೇತನ ಸಮರ್ಪಕವಾಗಿ ವಿತರಿಸಲು ಸಾಧ್ಯವಾಗಿಲ್ಲ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಹಾಗೂ ಪಿಹೆಚ್.ಡಿ ಮಾಡಲು ಸಹ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುವುದು ಎಂದರು.

9ನೇ ಷೆಡ್ಯೂಲ್ ಗೆ ಸೇರ್ಪಡೆಯಾಗಲಿದೆ: ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ಸಂಬಂಧ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಎಲ್ಲರೂ ಸರ್ಕಾರದ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದ್ದರು. ಸಚಿವ ಸಂಪುಟದಲ್ಲಿ ಹಾಗೂ ಅಧಿವೇಶನದಲ್ಲಿ ಬೆಂಬಲ ನೀಡುತ್ತೇವೆಂದು ಸಹಮತ ನೀಡಿದ್ದರು. ಬಳಿಕವೇ ಸರ್ಕಾರ ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿ ಆದೇಶ ಹೊರಡಿಸಿದ್ದು, ಇದೀಗ 9ನೇ ಷೆಡ್ಯೂಲ್‌ನಲ್ಲಿ ಸೇರಿಸಿಲ್ಲ ಎಂದು ಪ್ರತಿಪಕ್ಷ ನಾಯಕರು ಹೇಳುತ್ತಿದ್ದಾರೆ. ಸದ್ಯದಲ್ಲೇ 9ನೇ ಷೆಡ್ಯೂಲ್‌ಗೂ ಸೇರ್ಪಡೆಯಾಗಲಿದೆ ಎಂದು ತಿಳಿಸಿದರು. ಶಾಸಕ ಎಲ್.ನಾಗೇಂದ್ರ, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮತ್ತಿತರರಿದ್ದರು.

ಸಿದ್ದು ನಿಜಕನಸುಗಳ ಪುಸ್ತಕದ ಬಗ್ಗೆ ಗೊತ್ತಿಲ್ಲ...

ಸಿದ್ದು ನಿಜಕನಸುಗಳು ಪುಸ್ತಕ ಬಿಡುಗಡೆ ವಿಚಾರ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ಯದ ಬೆಳವಣಿಗೆ ಬಗ್ಗೆ ಗೊತ್ತಿಲ್ಲ. ವಿಚಾರ ತಿಳಿದು ನಂತರ ಮಾತನಾಡುತ್ತೇನೆ ಎಂದರು.

ಸಾಂಸ್ಕೃತಿಕ ಸೇವಾ ರತ್ನ ಪ್ರಶಸ್ತಿ

ಮೈಸೂರು, ಜ. 9– ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ನೀಡುತ್ತಿರುವ



ಸಾಂಸ್ಕೃತಿಕ ಸೇವಾ ರತ್ನ ಪ್ರಶಸ್ತಿಗೆ ಮೈಸೂರಿನ ವಿಕ್ರಂ ಅಯ್ಯಂಗಾರ್ ಭಾಜನರಾಗಿದ್ದಾರೆ. ಬೆಂಗಳೂರಿನಲ್ಲಿ ಜ.17 ರಂದು ನಡೆಯುವ ಮಾಘ ಮಾಸದ ಕಲಾ ಉತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಶ್ರೀ ದುರ್ಗಾ ಫೌಂಡೇಶನ್ ಗೌರವ ಅಧ್ಯಕ್ಷ ಡಾ. ಶ್ರೀನಿವಾಸ್ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಪಿಹೆಚ್.ಡಿ: ಪಿ. ಮಾದಪ್ಪ

ಮೈಸೂರು, ಜ. 9– ಡಾ. ಸಿ.ಡಿ. ಪರಶುರಾಮ ಅವರ ಮಾರ್ಗದರ್ಶನದಲ್ಲಿ ಪಿ. ಮಾದಪ್ಪ ಅವರು ಒಡೆಯರ್ ಡಿ. ಹೆಗ್ಗಡೆ ಅವರ ಸಾಹಿತ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಬದ್ಧತೆ–ಸಿದ್ಧತೆಯಿಂದ ಮುನ್ನಡೆದರೆ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ರಚನೆ

ಬಿಜೆಪಿ ಕಾರ್ಯಕರ್ತರಿಗೆ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಕಿವಿಮಾತು



ಮೈಸೂರು, ಜ.9(ಎಂಕೆ)– ಬಿಜೆಪಿ ರಾಷ್ಟ್ರ ನಾಯಕರು ನೀಡಿರುವ ಸಂಘಟನೆ ಸೂತ್ರದಡಿ ಬದ್ಧತೆ–ಸಿದ್ಧತೆಯಿಂದ ಕೆಲಸ ಮಾಡುವ ಮೂಲಕ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಶ್ರಮಿಸುವಂತೆ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಕರೆ ನೀಡಿದರು.

ಮೈಸೂರಿನ ವಿಜಯನಗರ ವಾರ್ಡ್–20ರಲ್ಲಿ ಪಾಲಿಕೆ ಸದಸ್ಯ ಎ.ಯು.ಸುಬ್ಬಯ್ಯ ನೇತೃತ್ವದಲ್ಲಿ ಆಯೋಜಿಸಿದ್ದ ಬೂತ್ ವಿಜಯ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೂತ್ ಮಟ್ಟದಲ್ಲಿ ಸಕ್ರಿಯವಾಗಿ ತೊಡಗಿರುವ ಕಾರ್ಯಕರ್ತರು ಜವಾಬ್ದಾರಿ ನಿರ್ವಹಿಸಬೇಕು. ಯಾವ ಬೂತ್‌ನಲ್ಲಿ ಎಷ್ಟು ಮಂದಿ ಮತದಾರರಿದ್ದಾರೆ. ಅದರಲ್ಲಿ ಬಿಜೆಪಿಗೆಷ್ಟು ಮತಗಳು ಮತಗಳು ಬರಲಿವೆ ಎಂಬುದನ್ನು ಸ್ಪಷ್ಟವಾಗಿ ಅರಿತು ಸಂಘಟನೆ ಮಾಡಬೇಕು. ರಾಷ್ಟ್ರ ನಾಯಕರು ಆಗಾಗ ನೀಡುವ ಸಂದೇಶಗಳು ಪ್ರತಿಯೊಬ್ಬ ಕಾರ್ಯಕರ್ತನನ್ನು ತಲುಪುವಂತೆ ನೋಡಿಕೊಳ್ಳಬೇಕು. ವಾಟ್ಸ್‌ಆಪ್ ಗ್ರೂಪ್‌ಗಳು ಸಮರ್ಥನೀಯವಾಗಿರಬೇಕು. ಚಳವಳಿಗಳು ಆಂದೋಲನದ ರೀತಿಯಲ್ಲಿ ನಡೆಯಬೇಕು ಎಂದು ತಿಳಿಸಿದರು.

ರಾಷ್ಟ್ರಕಟ್ಟಲು ಬಿಜೆಪಿ ಗೆಲ್ಲಿಸಬೇಕು ಎಂಬ ಅಭಿಪ್ರಾಯಗಳು ಬಿಜೆಪಿ ವಿರೋಧಿಗಳಿಂದಲೇ ಬರುತ್ತಿವೆ. ಬಿಜೆಪಿ ಬಿಟ್ಟರೆ ಬೇರೆ ಪಕ್ಷದಿಂದ ಅಧಿಕಾರ ನಡೆಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ನಮ್ಮ ವಿರುದ್ಧ ಇದ್ದವರೇ ನಮ್ಮ ಪರ ಮಾತನಾಡುತ್ತಿರುವುದಕ್ಕೆ ಸರ್ಕಾರ ತೆಗೆದುಕೊಳ್ಳುತ್ತಿರುವ ಜನಪರ ಯೋಜನೆಗಳು, ಕಠಿಣ ನಿರ್ಧಾರಗಳು ಮುಖ್ಯ ಕಾರಣವಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಬೆಂಗಳೂರಿನ ಟೌನ್‌ಹಾಲ್ ಎದುರು ಗೋ ಮಾಂಸ ಬಹಿರಂಗವಾಗಿ ಹುರಿದು ತಿನ್ನುವಂತಹ ಕಾರ್ಯಕ್ರಮವನ್ನು ಮಾಡಿದ್ದರು. ಇವತ್ತು ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಗೋ ಹತ್ಯೆ ನಿಷೇಧ ಕಾಯಿದೆ ಜಾರಿಯಾಗಿದೆ. ಕರ್ನಾಟಕದಲ್ಲಿ ತಾಕತ್ತಿರುವ ಯಾರಾದರೂ ಟೌನ್‌ಹಾಲ್ ಎದುರು ಬಂದು ಗೋಮಾಂಸದ ಬಗ್ಗೆ ಮಾತನಾಡಲಿ... ಒಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಏನೆಲ್ಲಾ ಬದಲಾಗುತ್ತವೆ ಎಂಬುದಕ್ಕೆ ಇವೆಲ್ಲವೂ ನಿದರ್ಶನವಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಸಮಾಜದಲ್ಲಿ ಎಲ್ಲರೂ ಬದುಕಬೇಕಾದರೆ ಬಿಜೆಪಿ ಉಳಿಸಬೇಕು ಎಂದರು.

ಶಾಸಕ ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ವಾಣೀಶ್, ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾ ನಂದೀಶ್, ಮುಖಂಡರಾದ ಸತೀಶ್, ರಮೇಶ್, ವಸಂತ, ಕಿಶೋರ್ ಮತ್ತಿತರರು ಉಪಸ್ಥಿತರಿದ್ದರು.

ಲವ್ ಜಿಹಾದ್‌ಗೆ ಗಮನಕೊಡಿ ಎನ್ನುವುದು ಸರಿಯಿದೆ...

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಚರಂಡಿ, ಸೇತುವೆ ಸಮಸ್ಯೆಗಳ ಜೊತೆಯಲ್ಲಿ ಲವ್ ಜಿಹಾದ್ ಕಡೆಗೂ ಗಮನ ಕೊಡಿ ಎಂದು ಹೇಳಿರುವುದು ನೂರಕ್ಕೆ ನೂರರಷ್ಟು ಸರಿಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಸಮರ್ಥಿಸಿಕೊಂಡರು.

ಈ ಲವ್ ಜಿಹಾದ್ ಎನ್ನುವುದು ಎಲ್ಲಿಯವರೆಗೆ ಮುಟ್ಟಿದೆ ಎಂದರೆ ಡಾಕ್ಟರ್ ಒಬ್ಬರ ಹೆಣ್ಣು ಮಗಳನ್ನು ಲವ್ ಜಿಹಾದ್‌ನಡಿ ಮತಾಂತರ ಮಾಡಿದರೆ ಇಂತಿಷ್ಟು ಲಕ್ಷ ರೂ. ಎಂದು ಫಿಕ್ಸ್ ಮಾಡಿದ್ದಾರೆ. ಇಂಜಿನಿಯರ್ ಒಬ್ಬರನ್ನು ಮರುಳು ಮಾಡಿ ಮದುವೆಯಾದರೆ ಇಂತಿಷ್ಟು ಕೂಲಿ ಕಾರ್ಮಿಕರ, ಬಡವರ ಮಕ್ಕಳನ್ನು ಮತಾಂತರ ಮಾಡಿದರೆ ಇಂತಿಷ್ಟು ಹಣವೆಂದು ಫಿಕ್ಸ್ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯಾಧ್ಯಕ್ಷರಾಗಿ ಈ ವಂಚನೆ, ಮೋಸದ ವಿರುದ್ಧ ಜಾಗೃತರಾಗಿ ಎಂದು ಹೇಳುವುದು ತಪ್ಪೇ ಎಂದರು.

ಸಿದ್ದರಾಮಯ್ಯ, ಡಿಕೆಶಿ, ಹೆಚ್‌ಡಿಕೆಯವರು ಮತಾಂತರ ನಿಷೇಧ ಕಾಯ್ದೆಯನ್ನು ಯಾಕೆ ವಿರೋಧ ಮಾಡುತ್ತಾರೋ ಗೊತ್ತಿಲ್ಲ. ಕಾಯ್ದೆಯಲ್ಲಿರುವುದು ಮೋಸ, ವಂಚನೆ, ಆಮಿಷವೊಡ್ಡಿ ಮತಾಂತರ ಮಾಡಬೇಡಿ ಎಂಬುದಷ್ಟೇ. ಯಾರಾದರೂ ಮತಾಂತರ ಆಗಲೇಬೇಕು ಎಂದರೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟು, ಅನುಮತಿ ಪಡೆದು ಮತಾಂತರವಾಗಲಿ. ಕನ್ನಡ ಶಾಲೆಯ ನೂರಾರು ಮಕ್ಕಳನ್ನು ಸಾಯಿಸಲು ಕುಕ್ಕರ್‌ನಲ್ಲಿ ಬಾಂಬ್ ಇಟ್ಟುಕೊಂಡು ಹೋಗುತ್ತಿದ್ದವನನ್ನು ಅಪರಾಧಿ ಎಂದು ಹೇಗೆ ಹೇಳುತ್ತೀರಿ. ಅದನ್ನು ಕೋರ್ಟ್ ನಿರ್ಧಾರ ಮಾಡುತ್ತೆ ಎನ್ನುವ ಮಟ್ಟಕ್ಕೆ ಕಾಂಗ್ರೆಸ್ ಮುಖಂಡರು ಹೇಳುತ್ತಾರೆ ಎಂದರೆ ಸಮಾಜ ಬದುಕುವುದಾದರೂ ಹೇಗೆ ಎಂದು ವಿಷಾದಿಸಿದರಲ್ಲದೆ ಮುಂದಿನ ದಿನಗಳಲ್ಲಿ ಸಮಾಜ ಉಳಿಯಬೇಕಾದರೆ ಬಿಜೆಪಿ ಅಧಿಕಾರಕ್ಕೆ ತರುವುದು ಮುಖ್ಯವಾಗಿದೆ ಎಂದರು.

ಮೈಸೂರು ಮಿತ್ರ ಮಂಗಳವಾರ 10 ಜನವರಿ 2023

ತಾರಕ ಜಲಾಶಯ ಪುನಶ್ಚೇತನ ಕಾಮಗಾರಿಗೆ ಭೂಮಿ ಪೂಜೆ



ಹೆಚ್.ಡಿ.ಕೋಟೆ, ಜ.9– ತಾಲೂಕಿನ ರೈತರ ಜೀವನಾಡಿ ತಾರಕ ಜಲಾಶಯದಲ್ಲಿ 42 ಕೋಟಿ ರೂ. ವೆಚ್ಚದ ಜಲಾಶಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನಲ್ಲಿ ತಾರಕ, ಕಬಿನಿ, ನುಗು ಜಲಾಶಯಗಳಿದ್ದರೂ, ಕೋಟೆ–ಸರಗೂರು ರೈತರು ತಾರಕ ಜಲಾಶಯವನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ತಾರಕ ಜಲಾಶಯ ವಿಶೇಷವಾಗಿ ಅಭಯಾರಣ್ಯವನ್ನು ಸುತ್ತುವರೆದಿದ್ದು, ಜಲಾಶಯದಲ್ಲಿ 4 ಟಿಎಂಸಿ ನೀರನ್ನು ಶೇಖರಿಸಬಹುದಾಗಿದೆ. ನೀರಾವರಿ ಅಧಿಕಾರಿಗಳು ರೈತರಿಗೆ ತೊಂದರೆಯಾಗದಂತೆ ಜಲಾಶಯದಿಂದ ಬೆಳೆಗೆ ನೀರು ಹರಿಸಬೇಕು. ಅಲ್ಲದೇ ಮುಂಬರುವ ಬೇಸಿಗೆಯಲ್ಲಿ ದನಕರುಗಳಿಗೆ ನೀರಿನ ಅಭಾವ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಜಲಾಶಯ ನಿರ್ಮಾಣವಾಗಿ 40 ವರ್ಷ ಕಳೆದ ಹಿನ್ನೆಲೆಯಲ್ಲಿ ಹಲವು ತಾಂತ್ರಿಕ ಸಮಸ್ಯೆ ಕಂಡು ಬಂದಿತ್ತು. ಈ ಸಂಬಂಧ ಸರ್ಕಾರದ ಗಮನ ಸೆಳೆದು ಜಲಾಶಯದ ಅಭಿವೃದ್ಧಿಗೆ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಅದರಂತೆ 21 ಕೋಟಿ ಬಿಡುಗಡೆಯಾಗಿದ್ದು, ಉಳಿದ 21 ಕೋಟಿ ರೂ. ಬಿಡುಗಡೆಗೊಳ್ಳಲಿದೆ ಎಂದರು.

ಸರ್ಕಾರದ ಮಟ್ಟದಲ್ಲಿ ವಿವಿಧ ಇಲಾಖೆ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ತಾಲೂಕಿನ ಅಭಿವೃದ್ಧಿಗೆ ಕೋಟ್ಯಾಂತರ ರೂ. ಅನುದಾನ ತರಲಾಗುತ್ತಿದೆ. ಆದರೆ ಜಲಾಶಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ನನ್ನ ಗಮನಕ್ಕೆ ತರದೇ ಆಯೋಜಿಸುವ ಮೂಲಕ ಶಿಷ್ಟಾಚಾರ ಉಲ್ಲಂಘಿಸಿದ್ದೀರಾ ಎಂದು ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. ಕಬಿನಿ ಜಲಾಶಯದ ಮುಂಭಾಗ ಉದ್ಯಾನವನ ನಿರ್ಮಾಣ ಮಾಡಲು ಮುಂದಿನ ಬಜೆಟ್‌ನಲ್ಲಿ ಅನುದಾನ ನೀಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಅದೇ ರೀತಿ ತಾರಕ ಜಲಾಶ ಮುಂಭಾಗ ಉದ್ಯಾನವನ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್, ತಾರಕ ಎಇಇ ರಮೇಶ್, ಸಹಾಯಕ ಇಂಜಿನಿಯರ್ ಮಂಜುನಾಥ್, ಗುತ್ತಿಗೆದಾರ ನಾರಾಯಣರೆಡ್ಡಿ, ಗ್ರಾಪಂ ಅಧ್ಯಕ್ಷ ಸುಬ್ರಹ್ಮಣ್ಯ, ಸಂತೋಷ್, ಮುಖಂಡರಾದ ಹೆಚ್.ಸಿ.ನರಸಿಂಹ ಮೂರ್ತಿ, ಸೋಮೇಶ್, ಸತೀಶ್‌ಗೌಡ, ಪ್ರದೀಪ್, ಸಂತೋಷ್, ಬಾಲಯ್ಯ, ನವೀನ್‌ದಾಸ್, ಪೌಲಸ್, ರಾಜು, ನಾಗೇಂದ್ರ ಸುರೇಶ್, ಉಮೇಶ್, ಜಯರಾಮ್, ಅಶೋಕ, ನಾಗನಾಯಕ, ಜಯರಾಜ್, ಕಾಂತನಾಯಕ, ಬಸವರಾಜು, ಸೌಮ್ಯ, ಮೋಹನ, ನಟರಾಜ್, ಕರಿನಾಯ್ಕ, ಮಲ್ಲಿಕಾರ್ಜುನ್, ಸೋಮೇಗೌಡ, ಮಂಜುನಾಥ, ರವಿಕುಮಾರ್ ಇದ್ದರು.

> ಕಳೆದ 7 ವರ್ಷಗಳ ಹಿಂದೆ 14 ಕೋಟಿ ವೆಚ್ಚದಲ್ಲಿ ತಾರಕ ನಾಲಾ ಆಧುನೀಕರಣ ಕಾಮಗಾರಿ ಟೆಂಡರ್ ಪಡೆದ ಗುತ್ತಿಗೆದಾರ ಕೆಲಸ ಇನ್ನು ಪೂರ್ಣಗೊಳಿಸಿಲ್ಲ. ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸುವ ಬದಲು, ಕಾಮಗಾರಿ ಪೂರ್ಣಗೊಳಿಸಲು ಮತ್ತೇ ಆತನಿಗೆ ಅಧಿಕಾರಿಗಳು ಅವಕಾಶ ನೀಡಿದ್ದಾರೆ. ನಾಲಾ ಕಾಮಗಾರಿ ವಿಳಂಬದಿಂದ ಜಮೀನುಗಳಿಗೆ ನೀರು ಹರಿಯದೆ ರೈತರಿಗೆ ಅನಾನುಕೂಲವಾಗಿದೆ.
> –ಅನಿಲ್ ಚಿಕ್ಕಮಾದು, ಶಾಸಕ.

ಯುವಕರು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಿ

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಸಲಹೆ



ನಂಜನಗೂಡು/ಮಲ್ಲುಂಡಿ, ಜ. 9– ಸ್ವಾರ್ಥಕ್ಕಾಗಿ ಬದುಕಿದ ಮನುಷ್ಯನನ್ನು ಪ್ರಪಂಚ ನಿರ್ದಾಕ್ಷಿಣ್ಯವಾಗಿ ಮರೆತು ಬಿಡುತ್ತದೆ. ಆದರೆ ಸಮಾಜಕ್ಕಾಗಿ ತ್ಯಾಗ ಮಾಡಿ ಬದುಕಿದ ಮನುಷ್ಯನನ್ನು ಪ್ರಪಂಚ ನೆನಪು ಮಾಡಿಕೊಳ್ಳುತ್ತದೆ. ಆದ್ದರಿಂದ ಯುವಕರು ಸ್ವಾರ್ಥ ಜೀವನ ನಡೆಸದೆ ಸಾಮಾಜಿಕ ಕಾರ್ಯದಲ್ಲಿ ತೊಡಗಿ ಬಡ ಜನರಿಗೆ ನೆರವಾಗಬೇಕು ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಹೇಳಿದರು.

ಅವರು ತಾಲೂಕಿನ ಹಲರೆ ಗ್ರಾಮದಲ್ಲಿ ಪುಣ್ಯಕೋಟಿ ರಾಯಬಾರಿ ಕಿಚ್ಚ ಸುದೀಪ್ ಸೇನಾ ಸಮಿತಿ ಸಂಘಟನೆಯನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯನ ಜೀವನದಲ್ಲಿ ಹಣ, ಐಶ್ವರ್ಯ, ಶಕ್ತಿ, ಅಧಿಕಾರ ಯಶಸ್ಸು, ಯಾವುದೂ ಶಾಶ್ವತವಲ್ಲ, ಕ್ಷಣಿಕ ಮಾತ್ರ. ಆದರೆ ಬುದ್ಧ, ಬಸವ, ಅಂಬೇಡ್ಕರ್‌ರವರು ಸಾಮಾಜಿಕ ಬದಲಾವಣೆಗಾಗಿ ಬದುಕಿದವರು ಆದ್ದರಿಂದಲೇ ಅವರು ಶತಮಾನಗಳು ಕಳೆದರೂ ಸಹ ಅವರ ಸಂದೇಶ, ಸಾಮಾಜಿಕ ಕಾರ್ಯಗಳಿಂದ ಶಾಶ್ವತವಾಗಿ ಜನಮಾನಸದಲ್ಲಿ ಉಳಿದಿದ್ದಾರೆ. ಆದ್ದರಿಂದ ಸಂಘಟನೆಗಳ ಯುವಕರು ಅಂತಹ ಅಲ್ಪಕಾಲಿಕ ಸಂಗತಿಗಳ ಬೆನ್ನು ಹತ್ತದೆ. ಸಾಮಾಜಿಕ ಪುಣ್ಯಪುರುಷರ ಸಂದೇಶಗಳನ್ನು, ಆದರ್ಶಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ಸಮಾಜ ಶಾಶ್ವತವಾಗಿ ನೆನಪಿಸಿಕೊಳ್ಳುವ ಒಳ್ಳೆಯ ಕೆಲಸಗಳನ್ನು ಮಾಡುವಂತಾಗಬೇಕು ಎಂದು ಸಲಹೆ ನೀಡಿದರು.

ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮಾತನಾಡಿದರು. ದೊರೆಸ್ವಾಮಿ, ದೇವರಾಜು, ಶಿವಕುಮಾರ್, ಶಿವಣ್ಣ, ಮಂಜುನಾಯಕ, ಮಾದನಾಯಕ, ಕೃಷ್ಣ, ಸಿದ್ದಪ್ಪಾಜಿ, ಸಿದ್ದು, ಮುನಿರಾಜು, ಸೇರಿದಂತೆ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದರು.

ತಿರುಮಲಪುರದಲ್ಲಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ಬೈಲಕುಪ್ಪೆ, ಜ.9– ಪಕ್ಷಬೇಧ ಮಾಡದೇ ತಾಲೂಕಿನ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಇಲ್ಲಿನ ತಿರುಮಲಪುರದಲ್ಲಿ 45 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು. ಇದೇ ವೇಳೆ ಗ್ರಾಮದಲ್ಲಿ ಸ್ಮಶಾನ ಜಾಗ ಗುರುತಿಸಿ ಅದರ ಅಭಿವೃದ್ಧಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬ ಗ್ರಾಮಸ್ಥರ ದೂರಿನ ಮೇರೆಗೆ ಸ್ಥಳದಲ್ಲಿದ್ದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿ, ಜನರಿಗೆ ಕಾವೇರಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ತಿಳಿಸಿದರು. ಈ ವೇಳೆ ಬೈಲಕುಪ್ಪೆ ಗ್ರಾಪಂ ಅಧ್ಯಕ್ಷೆ ಸುಮಾ, ಕೊಪ್ಪ ಗ್ರಾಪಂ ಅಧ್ಯಕ್ಷ ರೇಣುಕಾಸ್ವಾಮಿ, ಸದಸ್ಯರಾದ ಹರೀಶ, ರಾಜು, ಮುಖಂಡರಾದ ಲೋಕೇಶ, ರಾಜೇಗೌಡ, ರಾಮೇಗೌಡ, ಮಂಜೇಶ್, ಗುತ್ತಿಗೆದಾರ ರುದ್ರೇಶ್, ಅಧಿಕಾರಿಗಳಾದ ಎಇಇ ನವೀನ್, ಬೈಲಕುಪ್ಪೆ ಪಿಡಿಓ ಬೋರೇಗೌಡ, ವಿಎ ನವೀನ್ ರಾವ್, ಎಸ್‌ಐ ಬಸವರಾಜ್ ಮತ್ತು ಸಿಬ್ಬಂದಿ ಇನ್ನಿತರರಿದ್ದರು.

ಮರದೂರು ಗ್ರಾಪಂಗೆ ಗುರು ಅಧ್ಯಕ್ಷ



ಹುಣಸೂರು, ಜ.9–ತಾಲೂಕಿನ ಮರದೂರು ಗ್ರಾಪಂ ಅಧ್ಯಕ್ಷರಾಗಿ ಗುರು ಆಯ್ಕೆಯಾಗಿದ್ದಾರೆ. ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಕುಮಾರ್ ಅವರ ರಾಜೀನಾಮೆ ಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಗುರು ಹಾಗೂ ಜಯಮ್ಮ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಗುರು 8 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಜಯಮ್ಮ 5 ಮತ ಪಡೆದು ಪರಾಭವಗೊಂಡರು.

ಈ ವೇಳೆ ಚುನಾವಣಾಧಿಕಾರಿ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ನೇತ್ರಾವತಿ, ಗೀತಾ, ಚೆನ್ನಯ್ಯ, ರಾಯನಹಳ್ಳಿ ಗ್ರಾಪಂ ಉಪಾಧ್ಯಕ್ಷೆ ಸಿದ್ದಮ್ಮ, ಕುಮಾರ್, ಪವಿತ್ರ, ಸಾವಿತ್ರಮ್ಮ, ವಸಂತ, ಚಿನ್ನಸ್ವಾಮಿ, ಮುಖಂಡರಾದ ಮುದ್ದಚೆಲುವಯ್ಯ, ಮಾದೇಗೌಡ, ಸಿದ್ದೇಗೌಡ, ಮೋಹನ್‌ಕುಮಾರ್, ಪುರುಷೋತ್ತಮ್ ಮತ್ತಿತರರಿದ್ದರು.

ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಿ

ರೈತರಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಸಲಹೆ



ತಿ.ನರಸೀಪುರ, ಜ.9– ರೈತರು ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಬೆಳವಣಿಗೆ ಹೊಂದಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಸಲಹೆ ನೀಡಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಆವರಣದಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಆಯ್ದ ಫಲಾನುಭವಿ ರೈತ ಕೊಳತೂರು ಮಂಜುನಾಥ್ ಅವರಿಗೆ ಸಬ್ಸಿಡಿ ದರದಲ್ಲಿ ಪವರ್ ಟಿಲ್ಲರ್, ಪವರ್ ವೀಡರ್ ಹಾಗೂ ಚಾಪ್ ಕಟರ್ ಯಂತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಕೃಷಿ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಗೊಳಿಸುವ ಜೊತೆಗೆ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುತ್ತದೆ. ಅಲ್ಲದೆ ಕೃಷಿ ಅಭಿವೃದ್ಧಿಗೆ ಪೂರಕವಾದ ಪರಿಕರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ. ರೈತರು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿ ಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ ಮಾತನಾಡಿ, ಇಲಾಖೆ ರೈತರಿಗೆ ನೀಡುತ್ತಿರುವ ಪವರ್ ಟಿಲ್ಲರ್‌ನ ದರ 2,04,500 ರೂ., ಪ.ಜಾತಿ ಮತ್ತು ಪ.ವರ್ಗದ ಫಲಾನುಭವಿ ರೈತರು ಇಲಾಖೆಗೆ 1,04,500 ರೂ. ಪಾವತಿಸಿದರೆ 1 ಲಕ್ಷ ರೂ. ಸಹಾಯಧನ ದೊರೆಯಲಿದೆ. ಸಾಮಾನ್ಯ ವರ್ಗದ ರೈತರು 1,22,000 ರೂ. ಪಾವತಿಸಿದರೆ ಅವರಿಗೆ 82,000 ರೂ. ಸಹಾಯ ಧನ ಹಾಗೂ ಪವರ್ ವೀಡರ್ ಯಂತ್ರಕ್ಕೆ 82,800 ರೂ. ಸಬ್ಸಿಡಿ ದೊರಕಲಿದೆ ಎಂದರು.

ಈ ವೇಳೆ ಕೃಷಿ ಇಲಾಖೆ ತಾಂತ್ರಿಕ ವ್ಯವಸ್ಥಾಪಕ ಶಿವಣ್ಣ, ಸಹಾಯಕ ಕೃಷಿ ಅಧಿಕಾರಿ ಶಿವರಾಜ್, ತಾಂತ್ರಿಕ ಅಧಿಕಾರಿ ರಾಘವೇಂದ್ರ, ಕೃಷಿ ಅಧಿಕಾರಿ ವಿಶಾಲ್, ಜಯಲಕ್ಷ್ಮಿ, ಕ್ಷೇತ್ರಜೆಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಯುವ ಘಟಕದ ಉಪಾಧ್ಯಕ್ಷ ನಿಲ್ಲಸೋಗೆ ಮಹೇಶ್, ಮಾವಿನಹಳ್ಳಿ ರಾಜೇಶ್ ಮತ್ತಿತರರಿದ್ದರು.

ವಿಜೃಂಭಣೆಯ ಚಿಗುರು ಕಡಿಯುವ ಕಾರ್ಯಕ್ರಮ



ಮೂಗೂರು, ಜ.9– ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಚಿಗುರು ಕಡಿಯುವ ಕಾರ್ಯಕ್ರಮ ಹೊಸಹಳ್ಳಿ ಗ್ರಾಮದ ಅಮ್ಮನವರ ದೇಗುಲದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೂಗೂರಿನ ದೇವಾಲಯದಲ್ಲಿ ಮಧ್ಯಾಹ್ನ 3.30ಕ್ಕೆ ಅಮ್ಮನವರ ಪೂಜೆ ಸಲ್ಲಿಸಿದ ಬಳಿಕ ಹೂವಿನ ಪಲ್ಲಕ್ಕಿಯಲ್ಲಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ಹೂವಿನ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಮಹಿಳೆಯರು ಬಾಯಿ ಬೀಗ, ದೀವಟಿಗೆ ಸೇವೆ ಹಾಗೂ ರೈತರು ಜಾನುವಾರುಗಳ ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿ ದೇವಾಲಯದ ಬಳಿಯಿಂದ ಕೆರೆವರೆಗೆ ಪಂಜಿನ ಸೇವೆ ನಡೆಸಿದರು. ಅಮ್ಮನವರು ಹೊಸಹಳ್ಳಿ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಭಕ್ತರು ಅಮ್ಮನವರಿಗೆ ಜೈಕಾರ ಕೂಗಿದರು. ಅರ್ಚಕ ನೇರಳೆ ಮರವೇರಿ ರಾತ್ರೋರಾತ್ರಿ ಮೂಡಿದ ಚಿಗುರನ್ನು ಬಿಡಿಸಿದರು. ಈ ಬಾರಿ 9 ಚಿಗುರು ಮೂಡಿದ್ದು ಬೆಳ್ಳಿತಟ್ಟೆ ಹೊಂಬಾಳೆಯಲಿಟ್ಟು ಪೂಜೆ ಸಲ್ಲಿಸಿ ನಂತರ ನೆರೆದಿದ್ದ ಸಾವಿರಾರು ಮಂದಿ ಭಕ್ತರಿಗೆ ಚಿಗುರನ್ನು ಪ್ರದರ್ಶಿಸಿದರು. ಬಳಿಕ ಮೂಗೂರು ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಲಾಯಿತು.

ರಸ್ತೆ, ಚರಂಡಿ ಕಾಮಗಾರಿಗೆ ಭೂಮಿ ಪೂಜೆ



ನಂಜನಗೂಡು, ಜ.9– ನಗರಸಭೆ ವ್ಯಾಪ್ತಿಯ ಪಿ.ಡಿ.ಮನೋಹರ್ ಮನೆಯಿಂದ ಮೂರ್ತಿ ಮನೆವರೆಗೆ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ತಿಳಿಸಿದರು.

ನಗರದ ಕೆಎಚ್‌ಬಿ ಕಾಲೋನಿಯಲ್ಲಿ ಸೋಮವಾರ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, 15ನೇ ಹಣಕಾಸು ಯೋಜನೆ ಮುಕ್ತ ಅನುದಾನದ 6.94 ಲಕ್ಷ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷೆ ನಾಗಮಣಿ, ನಗರಸಭೆ ಸದಸ್ಯರಾದ ಮೀನಾಕ್ಷಿ, ಯೋಗೇಶ್, ಮುಖಂಡರಾದ ಶಂಕರಪ್ಪ, ಪಿ.ಡಿ.ಮನೋಹರ್, ಶ್ರೀಕಂಠ, ನಗರಸಭೆ ಇಇ ಶ್ರೀನಿವಾಸ್, ಎಇಇ ಸುರೇಶ್ ಉಪಸ್ಥಿತರಿದ್ದರು.

ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿ ಹತ್ಯೆ




ಸಣ್ಣಸ್ವಾಮಿ ನಾಯಕ, ಕುಮಾರ ನಾಯಕ

ಹುಣಸೂರು, ಜ.9– ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೋರ್ವ ಕುಡಿದ ಮತ್ತಿನಲ್ಲಿ ಸ್ನೇಹಿತನನ್ನೇ ಮಾರಕಾಸ್ತ್ರದಿಂದ ಇರಿದು ಹತ್ಯೆಗೈದಿರುವ ಘಟನೆ ತಾಲೂಕಿನ ಹರವೆ ಗ್ರಾಮದಲ್ಲಿ ನಡೆದಿದೆ.

ಹರವೆ ಗ್ರಾಮದ ನಿವಾಸಿ ಸಣ್ಣಸ್ವಾಮಿ ನಾಯಕ(48) ಹತ್ಯೆಗೀಡಾದವನಾಗಿದ್ದು, ಅದೇ ಗ್ರಾಮದ ಚಲುವನಾಯಕ ಅವರ ಪುತ್ರ ಕುಮಾರ ನಾಯಕ ಅಲಿಯಾಸ್ ಚಿಗರೆ(35) ಹತ್ಯೆಗೈದ ಆರೋಪಿ. ಇಬ್ಬರು ಎಳನೀರು ಕಠಾವು ಮಾಡುವ ಕೂಲಿ ಕಾರ್ಮಿಕರಾಗಿದ್ದು, ಹಲವು ವರ್ಷದಿಂದ ಸ್ನೇಹಿತರಾಗಿದ್ದರು ಎನ್ನಲಾಗಿದೆ.

ಭಾನುವಾರ ಇಬ್ಬರಿಬ್ಬರು ತೆಂಗಿನ ತೋಟಕ್ಕೆ ಹೋಗಿ ಎಳನೀರು ಕೊಯ್ದು ತಂದು ಮನೆಯಲ್ಲಿಟ್ಟು ಸಂಜೆ ಗ್ರಾಮದ ಆಸ್ಪತ್ರೆ ಆವರಣದಲ್ಲಿ ಮದ್ಯ ಸೇವನೆ ಮಾಡುತ್ತಿದ್ದರು. ಈ ವೇಳೆ ಸಣ್ಣಸ್ವಾಮಿ ನಾಯಕ ಕುಮಾರ ನಾಯಕನ ಮದುವೆ ಸಂಬಂಧ ಕ್ಷುಲ್ಲಕವಾಗಿ ಮಾತನಾಡಿದ್ದಾರೆ. ಇದರಿಂದ ಕೋಪಗೊಂಡ ಕುಮಾರನಾಯಕ ಮಾರಕಾಸ್ತ್ರದಿಂದ ಸಣ್ಣಸ್ವಾಮಿ ನಾಯಕನ ಕುತ್ತಿಗೆ, ಕೈ, ಕಾಲಿಗೆ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡ ಸಣ್ಣಸ್ವಾಮಿ ನಾಯಕ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡಿ ಸ್ಥಳದಲ್ಲೇ ಮೃತಪಟ್ಟಿದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಸಿ.ವಿ.ರವಿ ಪರಿಶೀಲನೆ ನಡೆಸಿ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಲ್ಲದೇ ಪರಾರಿಯಾಗಿರುವ ಕುಮಾರ ನಾಯಕನ ಬಂಧನಕ್ಕೆ ಬಲೆ ಬೀಸಿದ್ದಾರೆ.

ವರುಣಾಕ್ಕೆ ಬಿಡುಗಡೆಯಾಗಿದ್ದ 42 ಕೋಟಿ ತಡೆದ ಮಾಜಿ ಸಿಎಂ ಸಿದ್ದರಾಮಯ್ಯ

ಬಿಜೆಪಿ ವರುಣಾ ಕ್ಷೇತ್ರದ ಅಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್ ಆರೋಪ



ತಿ.ನರಸೀಪುರ, ಜ.9– ಯಡಿಯೂರಪ್ಪನವರು ಸಿಎಂ ಆಗಿದ್ದವೇಳೆ ವರುಣಾ ಕ್ಷೇತ್ರಕ್ಕೆಬಿಡುಗಡೆಯಾಗಿದ್ದ 42 ಕೋಟಿ ಅನುದಾನವನ್ನು ಕ್ಷೇತ್ರದ ಶಾಸಕ ಯತೀಂದ್ರ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ತಡೆ ಹಿಡಿದರು ಎಂದು ಬಿಜೆಪಿ ವರುಣಾ ಕ್ಷೇತ್ರದ ಅಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್ ಆರೋಪಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ತ್ರಿವೇಣಿ ನಗರದಲ್ಲಿ ನಡೆದ ಬಿಜೆಪಿ ಬೂತ್ ಅಭಿಯಾನದಲ್ಲಿ ಬೂತ್ ಅಧ್ಯಕ್ಷ ಮಿಥುನ್ ಅವರ ಮನೆ ಮೇಲೆ ಪಕ್ಷದ ಬಾವುಟ ಕಟ್ಟಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳ ವಿಶೇಷ ವಿವೇಚನಾ ಕೋಟಾದಡಿ ವರುಣಾ ಕ್ಷೇತ್ರಕ್ಕೆ ಹಲವು ಕಾರ್ಯಕ್ರಮ ತರಲಾಗಿತ್ತು. ಆದರೆ ಪ್ರತಿಯೊಂದು ಸಮಿತಿಗಳಿಗೆ ಶಾಸಕರೇ ಅಧ್ಯಕ್ಷರಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ 42 ಕೋಟಿ ರೂ.ಗಳನ್ನು ಶಾಸಕ ಯತೀಂದ್ರ ಜೊತೆ ಸೇರಿ ಸಿದ್ದರಾಮಯ್ಯ ತಡೆ ಹಿಡಿದರು. ಅಲ್ಲದೇ 4 ನಿಗಮಗಳಿಂದ ನೇರ ಸಾಲ ಬಿಡುಗಡೆ ಮಾಡಿಸಲಾಗಿತ್ತಾದರೂ ಅದನ್ನು ತಡೆ ಹಿಡಿಯಲಾಯಿತು. ನಮ್ಮ ಪಕ್ಷದಿಂದ ಎಲ್ಲಿವರೆಗೆ ಶಾಸಕರನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲವೋ ಅಲ್ಲಿವರೆಗೆ ನಮ್ಮ ಕಾರ್ಯಕರ್ತರಿಗೆ ಯಾವುದೇ ಅನುಕೂಲ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ವರುಣಾದಿಂದ ಶಾಸಕರನ್ನು ಆಯ್ಕೆ ಮಾಡಿ ಕಳುಹಿಸುವ ಜವಾಬ್ದಾರಿ ನಮ್ಮ ಮೇಲಿದ್ದು, ಕಾರ್ಯಕರ್ತರು ಸಂಘಟಿತರಾಗಿ ಪಕ್ಷದಿಂದ ಯಾರನ್ನೇ ಅಭ್ಯರ್ಥಿಯನ್ನಾಗಿ ಹೈಕಮಾಂಡ್ ಸೂಚಿಸಿದರೂ ಅವರ ಪರ ಕೆಲಸ ಮಾಡಿ ಅವರ ಗೆಲುವಿಗೆ ಕೆಲಸ ಮಾಡಬೇಕು ಎಂದರು.

ಕ್ಷೇತ್ರ ಹುಡುಕುತ್ತಿರುವ ಸಿದ್ದರಾಮಯ್ಯ: ಕಳೆದ 3 ಚುನಾವಣೆಗಳಲ್ಲಿ ನಮ್ಮ ಪಕ್ಷ ಅಲ್ಪ ಮತಗಳಿಂದ ಸೋಲು ಕಂಡಿದೆ. ಈ ಬಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಜನೋಪಯೋಗಿ ಕಾರ್ಯಕ್ರಮ ಹಮ್ಮಿಕೊಂಡ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಬಲಿಷ್ಠವಾಗಿದೆ. ಇದನ್ನರಿತಿರುವ ಮಾಜಿ ಸಿಎಂ ಸಿದ್ದರಾಮಯ್ಯ ತಮಗೆ ಅನುಕೂಲವಾಗುವ ಕ್ಷೇತ್ರದ ಹುಡುಕಾಟದಲ್ಲಿದ್ದಾರೆ. ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಹೆಚ್ಚಿನ ಶ್ರಮ ಹಾಕಿ ದುಡಿಯುತ್ತಿರುವುದನ್ನು ಅರಿತ ಸಿದ್ದು ವರುಣಾದಲ್ಲೂ ಹಿನ್ನಡೆ ಉಂಟಾಗುತ್ತದೆಂಬ ಭೀತಿಯಿಂದ ಇನ್ನೂ ಕ್ಷೇತ್ರದ ಹುಡುಕಾಟದಲ್ಲೇ ಇದ್ದಾರೆ ಎಂದು ವ್ಯಂಗ್ಯವಾಡಿದರು.

ಬೂತ್ ಅಧ್ಯಕ್ಷ ಎಂ.ಮಿಥುನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ಗಣೇಶ್, ಚಿಕ್ಕ ಮಹದೇವ, ಜಿಲ್ಲಾ ಕಾರ್ಯದರ್ಶಿ ರಂಗು ನಾಯಕ್, ಆಶ್ರಯ ಸಮಿತಿ ಸದಸ್ಯ ಸ್ಟಾರ್ ಮಲ್ಲೇಶ್, ಸಾರ್ವಜನಿಕ ಆಸ್ಪತ್ರೆ ನಿರ್ದೇಶಕ ಭೈರಾಪುರ ಬಾಲು, ಮಂಜು ಕುಮಾರ್, ಸೋಮಶೇಖರ್ ಮತ್ತಿತರರಿದ್ದರು.

ಆಯತಪ್ಪಿ ಬೈಕ್‌ನಿಂದ ಬಿದ್ದು ಯುವಕ ಸಾವು



ಸರಗೂರು, ಜ.9– ಆಯತಪ್ಪಿ ಬೈಕ್‌ನಿಂದ ಬಿದ್ದ ಯುವಕ ನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ತುಂಬಸೋಗೆ ಗ್ರಾಮದ ಬಳಿ ಭಾನುವಾರ ನಡೆದಿದೆ.

ತಾಲೂಕಿನ ಮುಳ್ಳೂರು ಗ್ರಾಮದ ಎಂ.ಆರ್.ಶಿವಕುಮಾರ್ (21) ಸಾವನ್ನಪ್ಪಿದವರು. ಈತ ಹೆಚ್.ಡಿ.ಕೋಟೆಯ ಗ್ರಾಮೀಣ ಕೂಟ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಹೋಗುವ ವೇಳೆ ಆಯತಪ್ಪಿ ಬಿದ್ದು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಶವಾಗಾರಕ್ಕೆ ಸಾಗಿಸಿದರು. ಈ ವೇಳೆ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಅನಿಲ್ ಚಿಕ್ಕಮಾದು, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಹೆಚ್.ಡಿ.ಕೋಟೆ ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ನರಸಿಂಹಮೂರ್ತಿ, ಸರಗೂರು ತಾಲೂಕು ಅಧ್ಯಕ್ಷ ಶಿವಣ್ಣ, ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಬಸವರಾಜು, ಮಂಜು, ವಾಣಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಿದರು. ಈ ಸಂಬಂಧ ಸರಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕಿನ ಕಂಚಮಳ್ಳಿ ಶಾಲೆಯಲ್ಲಿ 30 ಲಕ್ಷ ವೆಚ್ಚದಲ್ಲಿ 2 ಹೆಚ್ಚುವರಿ ಕೊಠಡಿ ನಿರ್ಮಾಣ, ಹೊಮ್ಮರಗಳ್ಳಿ ಗ್ರಾಮದ ಪರಿಶಿಷ್ಟ ಪಂಗಡ ಬೀದಿಯಲ್ಲಿ 10 ಲಕ್ಷ ವೆಚ್ಚದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷರಾದ ಅಲಮೇಲಮ್ಮ, ರಮ್ಯಾ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಮುಖಂಡರಾದ ಮುರಳಿಗೌಡ, ಸೋಮಣ್ಣ, ನರಸಿಂಹಮೂರ್ತಿ, ರಾಜನಾಯಕ ಇನ್ನಿತರರಿದ್ದರು.

ಇಂದ್ರಾಣಿ ನಿಧನ



ಹುಣಸೂರು, ಜ.9– ನಗರದ ನಡುಬೀದಿ ನಿವಾಸಿ ಲೇ. ಧರ್ಮರಾಜ್ ಅವರ ಪತ್ನಿ ಹಾಗೂ ದೇವರಾಜ ಅರಸು ಪದವಿ ಕಾಲೇಜಿನ ನಿವೃತ್ತ ನೌಕರರಾದ ಇಂದ್ರಾಣಿ(68) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಹಾಮಾಂತ್ರಿಕ ಕೇರಳ
ಶ್ರೀ ಆದಿಶಕ್ತಿ ಜ್ಯೋತಿಷ್ಯರು
ಪಂ.ಎಸ್.ಶಿವಪ್ರಸಾದ್ (ತಂತ್ರಿ)
ಮೊ: 9686525894
ದಾಂಪತ್ಯ ಕಲಹ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್, [illegible] ಜೀವನದ ಸಮಸ್ಯೆಗಳಿಗೆ (3) ದಿನದಲ್ಲಿ ಶಾಶ್ವತ ಪರಿಹಾರ.
ವಿಳಾಸ: [illegible]

ಬೇಕಾಗಿದ್ದಾರೆ
ಆಲನಹಳ್ಳಿಯಲ್ಲಿರುವ ಫರ್ನಿಚರ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
9880251675, 9611417014

ಕಮರ್ಷಿಯಲ್ ಪ್ರಾಪರ್ಟಿ ಮಾರಾಟಕ್ಕಿದೆ
55x159
8800 ಚದರ ಅಡಿ, ಮೈಸೂರು-ಊಟಿ ರಸ್ತೆ, BDO ಆಫೀಸ್ ಪಕ್ಕ ನಂಜನಗೂಡು. ಸಂಪರ್ಕಿಸಿ:
9164207999, 8494934898

ಕಮರ್ಷಿಯಲ್ ಪ್ರಾಪರ್ಟಿ ಮಾರಾಟಕ್ಕಿದೆ
75x100
25x100 - 3 ಸೈಟುಗಳು
7500 ಚದರ ಅಡಿ, ಮೈಸೂರು-ಊಟಿ ರಸ್ತೆ, ಹುಲ್ಲಹಳ್ಳಿ ಸರ್ಕಲ್ ಹತ್ತಿರ, ನಂಜನಗೂಡು. ಸಂಪರ್ಕಿಸಿ:
9164207999, 8494934898

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

13ನೇ ವರ್ಷದ ಪುಣ್ಯಸ್ಮರಣೆ

ಯ|| ನರಸಿಂಹೇಗೌಡ್ರು
ನಿಧನ .10.01.2010

ನಿಮ್ಮ ಅಗಲಿಕೆ ನಮ್ಮಲ್ಲಿ ಶಾಶ್ವತ ನೋವು ತಂದಿದೆ ನಿಮ್ಮ ನೆನಪಿನಲ್ಲೆ ಜೀವನ ಸಾಗಿಸುವ ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ದುಃಖಿತಪ್ತರು
ಮೃತರ ಮಗ ಮತ್ತು ಸೊಸೆ ,ಶ್ರೀಮತಿ ತಾಯಮ್ಮ ಮತ್ತು ಶ್ರೀ ಮಹದೇವು ಮೊಮ್ಮಕ್ಕಳು, ಮುಮ್ಮಕ್ಕಳು ಹಾಗೂ ಕುಟುಂಬವರ್ಗದವರು ಬಿಎನ್‌ಎಂ ಗ್ರೂಪ್ಸ್ ಕುಂಬಾರ ಕೊಪ್ಪಲ್ ಮೈಸೂರು

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ: 0821-2473923/2473933, ಫ್ಯಾಕ್ಸ್ ನಂ.0821-2472797
ಇ-ಮೇಲ್ : mymuladmn@gmail.com

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಗುತ್ತಿಗೆ ಕಾರ್ಮಿಕರುಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **www.eproc.karnataka.gov.in** ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.720/1: ADMN:Tender: 2022/CALL -2	ಎರಡು ವರ್ಷಗಳ ಅವಧಿಗೆ ತುಂಡು ಗುತ್ತಿಗೆ ಆಧಾರದಲ್ಲಿ ಮೊಸರು. ಲಸ್ಸಿ, ಮಜ್ಜಿಗೆ, ಪೇಡಾ, ಮೈಸೂರು ಪಾಕ್, ತುಪ್ಪ, ಕ್ಯಾಷ್ಯು ಬರ್ಫಿ, ಖೋವಾ, ನಂದಿನಿ ಬೈಟ್ ಮತ್ತು ಪನ್ನೀರ್ ತಯಾರಿಕೆ ಮತ್ತು ಪ್ಯಾಕಿಂಗ್ ಮಾಡಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	ದಿನಾಂಕ 16.01.2023 ಸಂಜೆ 05:00 ಗಂಟೆಯೊಳಗೆ

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ/ಖರೀದಿ) ರವರನ್ನು ಮೊಬೈಲ್ ಸಂಖ್ಯೆ: 6366430803 ಮೂಲಕ ಸಂಪರ್ಕಿಸಬಹುದಾಗಿದೆ.
ಸಹಿ/-, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಕಾರಂಜಿ ಮತ್ತು ಸಿದ್ಧಾರ್ಥನಗರ ತೆರಿಗೆದಾರರ ಸಂಘ (ರಿ)
ಶ್ರೀ ಸಿದ್ಧಿವಿನಾಯಕ ದೇವಸ್ಥಾನ
ನಂ. ಪಿ-8, ವಿನಯಮಾರ್ಗ, ಸಿದ್ದಾರ್ಥನಗರ, ಮೈಸೂರು-570011
ರಾಜಗೋಪುರ ನಿರ್ಮಾಣ ಸಂಬಂಧ ಲೇಬರ್ ಗುತ್ತಿಗೆಗೆ ಆಹ್ವಾನ

ದೇವಾಲಯದ ಮುಂಭಾಗ **2x2, 12** ಕಾಂಕ್ರಿಟ್ ಪಿಲ್ಲರ್‌ಗಳುಳ್ಳ ಉದ್ದ ಅಗಲ **29x21** ಎತ್ತರ **17x51** ಅಡಿಗಳ ಐದು ಅಂತಸ್ತಿನ (ಐದು ಬಾಗಿಲು) ಇಟ್ಟಿಗೆ ಮಿಶ್ರಿತ, ಗೊಂಬೆಗಳು ಒಳಗೊಂಡಂತೆ ರಾಜಗೋಪುರ ನಿರ್ಮಾಣ ಮಾಡಲು ಉತ್ತಮ ಚಾರಿತ್ರ್ಯವುಳ್ಳ ಅನುಭವಿ (ಈಗಾಗಲೇ ರಾಜಗೋಪುರ ನಿರ್ಮಿಸಿರುವಂತಹ), ನುರಿತ ಅರ್ಹ ಶಿಲ್ಪಿಕಾರರಿಂದ ರಾಜಗೋಪುರ ವಿನ್ಯಾಸಗಳೊಂದಿಗೆ ಮತ್ತು ತಮ್ಮ ಪೂರ್ಣ ವಿವರಗಳೊಂದಿಗೆ ಲೇಬರ್ ಕೊಟೇಷನ್‌ನ್ನು ಸಂಘವು ಆಹ್ವಾನಿಸಿದೆ. ಕೊನೆಯ ದಿನಾಂಕ **25-01-2023.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸುವುದು. ಮೇಲ್ಕಂಡ ಎಲ್ಲಾ ಗುಣಗಳು ಮತ್ತು ದರಪಟ್ಟಿಯ ಆಧಾರದ ಮೇಲೆ ಗುತ್ತಿಗೆ ನೀಡಲಾಗುವುದು. ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮ.
ಆಡಳಿತ ಮಂಡಳಿಯ ಪರವಾಗಿ
ಕಾರ್ಯದರ್ಶಿ.

ACKNOWLEDGEMENT & MADA INVITE

K.S. Cariappa

We wish to thank and express our deepest sense of gratitude to the members of Mysore Kodava Samaja & Sri Kaveri Kodava Association, Mysore East, relatives, friends, well-wishers & family members for their condolences & service during the sad demise of **Kakamada Kanoj Cariappa on January 2, 2023.** The **Mada ceremony** has been arranged at **HOTEL THE ROOST, Mysore, on January 12, 2023 (Thursday) from 11.30am onwards.**

Those who have not yet received the invitation may please treat this as a personal invitation, attend the ceremony and pray for the departed soul.
— Kakamada Kami & Ravi Subbaiah and family members
[Mob:9845678782 / 9880623500]





WANTED
For manufacturing company in hebbal industrial area.
Sr. ACCOUNTANT
> Commerce graduate with 5 years of experience in handling all account activities.
> Monitor day to day Accounting operations within the company, provide insightful information and expectations to the management to aid in long-term & short term decision making.

Interested candidates are requested to send their CV to the following address
Email: fmcgrecruitment123@gmail.com

ಹೋಟೆಲ್ ಮಯೂರ ಕಾವೇರಿ
KSTDC — Karnataka One State. Many worlds. Department of Tourism
ಬೃಂದಾವನ್ ಗಾರ್ಡನ್, ಕೆ.ಆರ್.ಸಾಗರ, ಮಂಡ್ಯ ಜಿಲ್ಲೆ
Hotel Mayura Cauvery
Brindavana Garden,Krishnaraja Sagara, Mandya Dist.
Unit of the Karnataka State Tourism Development Corporation Ltd.
Tel: 08236-297189, Email:krs@karnatakaholidays.net

Ref: KSTDC/HMC/KRS/240/2022-23 Date: 08.01.2023

ಪ್ರಕಟಣೆ
ಕೆ.ಆರ್.ಸಾಗರದ ಬೃಂದಾವನದ ಒಳಭಾಗದಲ್ಲಿ ಕೆ.ಎಸ್.ಟಿ.ಡಿ.ಸಿ ಹೋಟೆಲ್ ಮಯೂರ ಕಾವೇರಿಯ 20*10 ಅಳತೆಯ ಫಿಶ್ ಪೆಡಿಕ್ಯೂರ್ (Fish Spa) ಮಳಿಗೆಯನ್ನು ಆದಾಯ ಹಂಚಿಕೆ ಆಧಾರದ ಮೇಲೆ ನಡೆಸಲು ಬಹಿರಂಗ ಹರಾಜು ಮಾಡಲು ನಿಗಮವು ಉದ್ದೇಶಿಸಿರುವುದರಿಂದ ಆಸಕ್ತಿಯುಳ್ಳವರು ನಿಯಮಾನುಸಾರ ರೂ. 5000/- ಡಿಡಿಯನ್ನು ಕೆಎಸ್‌ಟಿಡಿಸಿ ಹೆಸರಿಗೆ ಸಲ್ಲಿಸಿ ಪ್ರಟಕಣೆ ದಿನಾಂಕದಿಂದ ಹತ್ತು ದಿನದೊಳಗೆ ನೋಂದಣಿ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿ ಮತ್ತು ಸ್ಥಳ ಪರಿಶೀಲನೆಗಾಗಿ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ 8970650022ಗೆ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/-ವ್ಯವಸ್ಥಾಪಕರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಹೆಚ್ಚುವರಿ ಆಯುಕ್ತರವರ ಕಛೇರಿ, ಮೈ.ಮ.ಪಾಲಿಕೆ, ಮೈಸೂರು
ಸಂಖ್ಯೆ: ಮೈನಪಾ/ಹೇ.ಆ.ಕ./ಶೇ.5/ಪ್ರಕಟಣೆ/01/2021-22 ದಿನಾಂಕ : 04.01.2023

ಕೊಟೇಶನ್ ಪ್ರಕಟಣೆ
ಮೈಸೂರು ಮಹಾನಗರ ಪಾಲಿಕೆಯ ಶೇ.5ರ ಅನುದಾನದಡಿ ನಗರಪಾಲಿಕೆ ವ್ಯಾಪ್ತಿಯಲ್ಲಿನ ವಿಶೇಷಚೇತನರಿಗೆ ಸಾಧನ ಸಲಕರಣೆಗಳನ್ನು ಖರೀದಿಸಿ ನೀಡಲು / ಸರಬರಾಜು ಮಾಡಲು ಅರ್ಹ ಮತ್ತು ಆಸಕ್ತಿಯುಳ್ಳ ಏಜೆನ್ಸಿ / ಸಂಸ್ಥೆಗಳಿಂದ ಕೊಟೇಶನ್ / ದರಪಟ್ಟಿ ಕರೆಯಲಾಗಿರುತ್ತದೆ. ಅದರಂತೆ ಅಧಿಕೃತ ಸರಬರಾಜುದಾರರು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರ ಕಚೇರಿಯಿಂದ ಹೆಚ್ಚಿನ ವಿವರಗಳನ್ನು ಪಡೆದು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: **13.01.2023ರ ಸಂಜೆ 5:00 ಗಂಟೆಯೊಳಗೆ** ಹೆಚ್ಚುವರಿ ಆಯುಕ್ತರ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ (ದರಗಳನ್ನು ಎಲ್ಲಾ ರೀತಿಯ ತೆರಿಗೆ / ಸಾಗಾಣಿಕೆ ವೆಚ್ಚ ಸೇರಿದಂತೆ ನಮೂದಿಸುವುದು).

S.No.	Product name	Qty.	Unit Price
1	Folding Wheel Chair	01	
2	Child Folding Wheel Chair	01	
3	Folding Commode Wheel Chair	01	
4	Tripod Walking Stick	01	
5	Quadripod Walking Stick	01	
6	Single Leg Walking Stick	01	
7	Elbow Crutches	01	
8	Undrarm Crutches	01	
9	Cerebral Palsy Wheel Chair -Child	01	
10	Cerebral Palsy Wheel Chair - Adult	01	
11	Tricycle Double Handle	01	
12	Air Bed	01	
13	Water Bed	01	
14	Smart Walking Stick / Smart Blind Folding Cane	01	
15	Rollator Child	01	
16	Rollator Adult	01	
17	Folding Walker	01	
18	MR Kit	01	
19	White Cane	01	
20	Brail Watch	01	

ಸಹಿ/- ಹೆಚ್ಚುವರಿ ಆಯುಕ್ತರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/867/2022-23 ಮೈಸೂರು ಮಹಾನಗರ ಪಾಲಿಕೆ, ಮೈಸೂರು.

